


# ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ನವೆಂಬರ್ 4 ಶನಿವಾರ 2023

ಸಂಪುಟ: 44 | ಸಂಚಿಕೆ: 198 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ– ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.co

₹4




## ಐದು ವರ್ಷ ನಾನೇ ಮುಖ್ಯಮಂತ್ರಿ ಹೇಳಿಕೆ: ಸಿಎಂ ಸಿದ್ದರಾಮಯ್ಯ ಯೂಟರ್ನ್

### ನಮ್ಮದು ಹೈಕಮಾಂಡ್ ಪಕ್ಷ; ಹೈಕಮಾಂಡ್ ಹೇಳಿದ್ದಕ್ಕೆ ಬದ್ಧ



ಗದಗ, ನ.3– 5 ವರ್ಷ ಕಾಂಗ್ರೆಸ್ ಸರ್ಕಾರ ಅಧಿಕಾರದಲ್ಲಿರುತ್ತೆ ನಾನೇ ಮುಖ್ಯಮಂತ್ರಿಯಾಗಿ ಮುಂದುವರೆಯುತ್ತೇನೆ ಎಂದು ನಿನ್ನೆಯಷ್ಟೇ ಹೇಳಿಕೆ ನೀಡಿದ್ದ ಸಿಎಂ ಸಿದ್ದರಾಮಯ್ಯ ತಮ್ಮ ಹೇಳಿಕೆ ಬಗ್ಗೆ ಯುಟರ್ನ್ ತೆಗೆದುಕೊಂಡಿದ್ದಾರೆ.

ಗದಗದಲ್ಲಿ ಮಾತನಾಡಿದ ಅವರು, ನಾನೊಂದು ಹೇಳಿದರೆ ನೀವೊಂದು ಬರೆಯುತ್ತೀರಿ. ನಮ್ಮದು ಹೈಕಮಾಂಡ್ ಪಕ್ಷ. ಹೈಕಮಾಂಡ್ ● 7ನೇ ಪುಟಕ್ಕೆ







# ಸಿದ್ದರಾಮಯ್ಯ ಕೆಳಗಿಳಿದರೆ ಡಾ.ಪರಮೇಶ್ವರ್ 'ಮುಖ್ಯಮಂತ್ರಿ'



● ಸಹಕಾರ ಸಚಿವ ಕೆ.ಎನ್.ರಾಜಣ್ಣ ಘೋಷಣೆ ● ಕಾಂಗ್ರೆಸ್ ಹೈಕಮಾಂಡ್‌ಗೆ ನಾನೇನು ಹೆದರೊಲ್ಲ...! ● ಈಗ ಸಿದ್ದರಾಮಯ್ಯ ಅವರ ಪರ; ಒಂದು ವೇಳೆ ಅವರು ಅಧಿಕಾರದಿಂದ ಕೆಳಗಿಳಿದರೆ ನಾವೆಲ್ಲಾ ಡಾ.ಪರಮೇಶ್ವರ್ ಪರ ನಿಲ್ಲುತ್ತೇವೆ ● ಡಿ.ಕೆ.ಶಿವಕುಮಾರ್‌ಗೆ ಮುಖ್ಯಮಂತ್ರಿ ಸ್ಥಾನ ತಪ್ಪಿಸಲು ಆಂತರಿಕ ತಂತ್ರಗಾರಿಕೆ

ಬೆಂಗಳೂರು, ನ.3(ಕೆಎಂಶಿ)– ಸಿದ್ದರಾಮಯ್ಯ ಅಧಿಕಾರದಿಂದ ಕೆಳಗಿಳಿದರೆ, ಗೃಹ ಸಚಿವ ಡಾ.ಜಿ. ಪರಮೇಶ್ವರ್ ಮುಂದಿನ ಮುಖ್ಯಮಂತ್ರಿಯಾಗುತ್ತಾರೆ ಎಂದು ಸಹಕಾರಿ ಸಚಿವ ಕೆ.ಎನ್.ರಾಜಣ್ಣ ಘೋಷಿಸಿದ್ದಾರೆ.

ಮುಖ್ಯಮಂತ್ರಿ ಗಾದಿಯಲ್ಲಿ ಸಿದ್ದರಾಮಯ್ಯ ಇರುವವರೆಗೂ ನಾವು ಅವರ ಪರ, ಅವರು ಒಂದು ವೇಳೆ ಅಧಿಕಾರದಿಂದ ಕೆಳಗಿಳಿದರೆ ನಾವೆಲ್ಲಾ ಡಾ.ಪರಮೇಶ್ವರ್ ಪರ ಎಂದು ಸ್ಪಷ್ಟಪಡಿಸಿದ್ದಾರೆ. ಅಧಿಕಾರ ಹಂಚಿಕೆ ಸೂತ್ರದಂತೆ ಎರಡು ವರ್ಷಗಳ ನಂತರ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಮುಖ್ಯಮಂತ್ರಿ ಪಟ್ಟ ಎಂದು ಎಐಸಿಸಿಯಲ್ಲಿ ನಡೆದಿರುವ ತೀರ್ಮಾನ ಇಂದು ಸರ್ಕಾರ ಮತ್ತು ಕಾಂಗ್ರೆಸ್‌ನಲ್ಲಿ ಭಾರೀ ಚರ್ಚೆಗೆ ಗ್ರಾಸವಾಗಿದೆ.

ಶಿವಕುಮಾರ್ ಪರ ಆಡಳಿತ ಪಕ್ಷದ ಕೆಲವು ಶಾಸಕರು ಬ್ಯಾಟಿಂಗ್ ಮಾಡಿದರೆ, ಸಿದ್ದರಾಮಯ್ಯ ಬೆಂಬಲಿಗರು ಅವರಿಗೆ ಮುಖ್ಯಮಂತ್ರಿ ಸ್ಥಾನ ತಪ್ಪಿಸಲು ಆಂತರಿಕ ಕಸರತ್ತು ನಡೆಸಿದ್ದಾರೆ. ಈ ಕಸರತ್ತಿಗಾಗಿ ಔತಣಕೂಟದ ಸಭೆಗಳು ನಡೆದು, ಸಾರ್ವಜನಿಕವಾಗಿ ಸರ್ಕಾರ ಮತ್ತು ಪಕ್ಷಕ್ಕೆ ಮುಜುಗರ ಆಗುತ್ತಿರುವುದನ್ನು ● 7ನೇ ಪುಟಕ್ಕೆ

## ಪಕ್ಷದ ಸೂಚನೆ ಮೀರಿ ಮಾತಾಡಿದವರಿಗೆಲ್ಲಾ ನೋಟಿಸ್

### ಕೆಪಿಸಿಸಿ ಅಧ್ಯಕ್ಷರೂ ಆದ ಡಿಸಿಎಂ ಡಿ.ಕೆ.ಶಿವಕುಮಾರ್ ಗುಡುಗು



ಪಕ್ಷದ ಸೂಚನೆ ಮೀರಿ ಮಾತನಾಡಿದವರಿಗೆಲ್ಲಾ ನೋಟಿಸ್ ನೀಡುತ್ತೇವೆ ಎಂದು ಕೆಪಿಸಿಸಿ ಅಧ್ಯಕ್ಷ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಗುಡುಗಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಾಂಗ್ರೆಸ್ ಹೈಕಮಾಂಡ್ ತೀರ್ಮಾನ ಮಾಡಿದ ನಂತರ ಸಿದ್ದರಾಮಯ್ಯ ಹಾಗೂ ತಾವು ಇಬ್ಬರೂ ಒಪ್ಪಿಗೆ ಮೇಲೆ ಪ್ರಮಾಣ ವಚನ ಸ್ವೀಕರಿಸಿದ್ದೇವೆ. ಆಗ ನಿಮಗೆಲ್ಲಾ ನಾವು ಹೇಳಿದ್ವಾ, ಸುಮ್ಮನೆ ಯಾಕೆ ಇಲ್ಲದ್ದನ್ನ ನೀವೇ ಸೃಷ್ಟಿ ಮಾಡಿಕೊಳ್ಳುತ್ತೀರಾ, ಇದೆಲ್ಲಾ ಅವಶ್ಯಕತೆಯಿಲ್ಲ ಎಂದರು. ಅಧಿಕಾರ ಹಂಚಿಕೆ ಬಗ್ಗೆ ಪ್ರತಿಕ್ರಿಯಿಸಿ, ಇದೇನು ಆಸ್ತಿಯಲ್ಲ ಹಂಚಿಕೊಳ್ಳೋಕೆ ಎಂದು ಉತ್ತರಿಸಿದರು.

> "ನಾವು ಪಕ್ಷದ ಶಿಸ್ತಿನ ಸಿಪಾಯಿಗಳು. ಪಕ್ಷದ ಹೈಕಮಾಂಡ್ ಏನು ಹೇಳುತ್ತದೆಯೋ ಅದನ್ನು ಕೇಳುತ್ತೇವೆ. ನಾನು ಯಾವತ್ತೂ ಹೈಕಮಾಂಡ್ ಮಾತು ಮೀರಿಲ್ಲ. ಮುಖ್ಯಮಂತ್ರಿ ವಿಷಯದಲ್ಲೂ ಹೈಕಮಾಂಡ್ ತೀರ್ಮಾನ ಕೈಗೊಳ್ಳುತ್ತದೆ. ಅದಕ್ಕೆ ಎಲ್ಲರೂ ಬದ್ಧರಾಗಿರಬೇಕಾಗುತ್ತದೆ. ಈಗ ಈ ವಿಷಯ ಅಪ್ರಸ್ತುತ ಎಂದು ಕಂಡುಬರುತ್ತಿದೆ.
>
> –ದಿನೇಶ್ ಗುಂಡೂರಾವ್, ಆರೋಗ್ಯ ಸಚಿವ.



# ನಾನೂ ಹೈಕಮಾಂಡ್ ಹೇಳಿದರೆ ಮುಖ್ಯಮಂತ್ರಿ ಆಗುತ್ತೇನೆ...



### ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಮನದಾಸೆ ಬಹಿರಂಗ

● ಸಿದ್ದರಾಮಯ್ಯ ಹೇಳಿಕೆ ವೈಯಕ್ತಿಕ ● ಕೆಲವರ ಹೇಳಿಕೆ ಕಲ್ಲಿನಲ್ಲಿ ಕೆತ್ತಿದ ಶಾಸನವಲ್ಲ ● ಬಿಜೆಪಿ ಲೀಡರ್ ಲೆಸ್, ಜೆಡಿಎಸ್ ಪೀಪಲ್ ಲೆಸ್ ● ಡಬಲ್ ಇಂಜಿನ್, ಈಗ ಸಿಂಗಲ್ ಇಂಜಿನ್ ಆಗಿದೆ

ಮೈಸೂರು. ನ.3(ಬಿಎಲ್‌ಯು)– ಮುಂದಿನ ಐದು ವರ್ಷ ನಾನೇ ಮುಖ್ಯಮಂತ್ರಿ ಆಗಿರುತ್ತೇನೆ ಎಂದು ಸಿದ್ದರಾಮಯ್ಯ ಅವರು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್‌ಗೆ ರಾಜಕೀಯ ಪಟ್ಟು ಹಾಕಿರುವ ಸಂದರ್ಭದಲ್ಲೇ ನಾನು ಕೂಡ ಮುಖ್ಯಮಂತ್ರಿ ಸ್ಥಾನದ ಆಕಾಂಕ್ಷಿ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ತನ್ನ ಮಹದಾಸೆ ತಿಳಿಸಿದ್ದಾರೆ. ಮೈಸೂರಿನ ಜಿಲ್ಲಾ ಪಂಚಾಯತ್‌ನಲ್ಲಿ ಇಂದು ಪತ್ರಕರ್ತರ ಜೊತೆ ಮಾತನಾಡಿದ ಅವರು, ಕಾಂಗ್ರೆಸ್ ಹೈಕಮಾಂಡ್ ಒಪ್ಪಿದರೆ ನಾನು ಕೂಡ ಮುಖ್ಯಮಂತ್ರಿ ಆಗುತ್ತೇನೆ. ಆದರೆ ಇದು ಹೈಕಮಾಂಡ್ ತೀರ್ಮಾನಕ್ಕೆ ಬಿಟ್ಟ ವಿಚಾರ. ಯಾರು ಸಿಎಂ ಆಗಬೇಕು ಎಂದು ಹೈಕಮಾಂಡ್ ಹೇಳುತ್ತದೆಯೋ ಅವರು ಮುಖ್ಯಮಂತ್ರಿ ಆಗುತ್ತಾರೆ. ಆದರೆ ನಾನು ಪಕ್ಷದ ಶಿಸ್ತಿನ ಸಿಪಾಯಿಯಾಗಿದ್ದು, ಹೈಕಮಾಂಡ್ ಏನೇ ತೀರ್ಮಾನ ಕೈಗೊಂಡರೂ ಅದಕ್ಕೆ ಬದ್ಧನಾಗಿರುತ್ತೇನೆ ಎಂದು ಸ್ಪಷ್ಟಪಡಿಸಿದರು.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಸುಪುತ್ರರೂ ಆದ ಪ್ರಿಯಾಂಕ್ ಖರ್ಗೆ ಅವರ ಈ ಮಾತು ರಾಜಕೀಯವಾಗಿ ಮಹತ್ವ ಪಡೆದಿದೆ. ● 7ನೇ ಪುಟಕ್ಕೆ

## ಜಾತಿ ಆಧಾರದಲ್ಲಿ ಸಿಎಂ ಆಯ್ಕೆ ಪ್ರಜಾಪ್ರಭುತ್ವದ ಅಣಕ



ಮದ್ದೂರು, ನ.3– ಜಾತಿ ಆಧಾರದ ಮೇಲೆ ಮುಖ್ಯಮಂತ್ರಿ ಆಯ್ಕೆ ಮಾಡುವುದು ಪ್ರಜಾಪ್ರಭುತ್ವದ ಅಣಕವಾಗಿದೆ. ಯೋಗ್ಯತೆ, ಸಾಧನೆ, ಸಾಮಾಜಿಕ ಕಳಕಳಿ ಇರುವ ವ್ಯಕ್ತಿಗಳು ರಾಜ್ಯದ ಮುಖ್ಯಮಂತ್ರಿಯಾಗಬೇಕೆಂದು ಮಾಜಿ ಸಿಎಂ ಎಸ್.ಎಂ. ಕೃಷ್ಣ ಅಭಿಪ್ರಾಯಪಟ್ಟರು. ತಾಲೂಕಿನ ಸೋಮನಹಳ್ಳಿ ಬಳಿ ಖಾಸಗಿ ಹೋಟೆಲ್‌ನಲ್ಲಿ ಶುಕ್ರವಾರ ಮುಖಂಡರು ಹಾಗೂ ● 7ನೇ ಪುಟಕ್ಕೆ



## 11ನೇ ವರ್ಷದ ಸವಿನೆನಪು



**ಶ್ರೀ ಎಸ್. ಭೋಜಪ್ಪನವರು**

ನಿಧನ: 4–11–2012

ನಂ. 216, ಸಾಧನಾ ನಿಲಯ, 9ನೇ ಅಡ್ಡರಸ್ತೆ, 3ನೇ ಮುಖ್ಯರಸ್ತೆ, ಗೋಕುಲಂ, ಮೈಸೂರು.

ನೀವು ನಮ್ಮನ್ನಗಲಿ ಇಂದಿಗೆ 11 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ

–: ಇಂತಿ ದುಃಖತಪ್ತರು :–

ಬಿ.ಕುಮಾರ್, ಬಿ. ಮೀನಾಕ್ಷಿ, ಬಿ. ರವಿಶಂಕರ್ & ಕುಟುಂಬವರ್ಗ, ವರ್ಷ ಅಸೋಸಿಯೇಟ್ಸ್ (ಪಿ) ಲಿಮಿಟೆಡ್, ಮೈಸೂರು






# ಸರ್ಕಾರಿ ಶಾಲಾ ವಿದ್ಯಾರ್ಥಿಗಳಿಗೆ ಉಚಿತ ಇಂಗ್ಲಿಷ್ ತರಬೇತಿ ಶಿಬಿರ



ಮೈಸೂರು, ನ.3–ಸಮಾನತೆ–ಸ್ವಾಭಿಮಾನ – ಸ್ವಾವಲಂಬನೆ ಪ್ರತಿಷ್ಠಾನ ಹಾಗೂ ಸಮಾನತೆ ಪ್ರಕಾಶನದ ವತಿಯಿಂದ ಅಶೋಕಪುರಂನ ಸರ್ಕಾರಿ ಶಾಲೆಯ ಹೈಸ್ಕೂಲ್ ವಿದ್ಯಾರ್ಥಿಗಳಿಗೆ 2 ತಿಂಗಳ ಉಚಿತ ಇಂಗ್ಲೀಷ್ ತರಬೇತಿ ಶಿಬಿರವನ್ನು ಪ್ರಾರಂಭಿಸಲಾಯಿತು.

ಸಂಸದ ವಿ.ಶ್ರೀನಿವಾಸಪ್ರಸಾದ್ ಅವರು ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡುತ್ತಾ, ಇಂಗ್ಲಿಷ್ ಇಂದು ದೇಶದಾದ್ಯಂತ ಸಂಪರ್ಕ ಭಾಷೆಯಾಗಿದ್ದು, ಅದನ್ನು ಎಲ್ಲರೂ ಕಲಿಯಬೇಕಾದ ಅಗತ್ಯವಿದೆ. ಇಂಗ್ಲಿಷ್ ಒಂದು ವಿಭಿನ್ನವಾದ ಭಾಷೆಯಾಗಿದ್ದು, ಅದನ್ನು ಜಾಣತನದಿಂದ ಕಲಿಯ ಬೇಕು ಎಂದು ವಿದ್ಯಾರ್ಥಿಗಳಿಗೆ ತಿಳಿಸಿ ಹೇಳಿದರು. ಸಮುದಾಯದವರಿಗೆ ತುರ್ತಾಗಿ ಬೇಕಾಗಿರುವ ಇಂತಹ ಕಾರ್ಯಕ್ರಮಗಳನ್ನು ಮಾಡುವ ಜರೂರು ಇದೆಯೇ ಹೊರತು ಅರ್ಥವಿಲ್ಲದ ಆಚರಣೆಗಳಿಂದ ಸಮುದಾಯದ ಏಳಿಗೆ ಸಾಧ್ಯವಿಲ್ಲವೆಂದು ದಲಿತ ಮುಖಂಡರಿಗೆ ಕಿವಿಮಾತು ಹೇಳಿದರು.

ರಾಜ್ಯ ಕಾನೂನು ವಿಶ್ವವಿದ್ಯಾಲಯದ ಕುಲಪತಿ ಡಾ.ಬಸವರಾಜು ವಿದ್ಯಾರ್ಥಿಗಳಿಗೆ ಇಂಗ್ಲೀಷ್ ಭಾಷೆ ಕಲಿಕೆಯ ಮಹತ್ವವನ್ನು ವಿವರಿಸಿದರು. ಚಾಮರಾಜನಗರ ಅಂಬೇಡ್ಕರ್ ವಿಶ್ವವಿದ್ಯಾಲಯದ ಕುಲಪತಿ ಡಾ.ಗಂಗಾಧರ ಅವರು ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಯಶಸ್ವಿಯಾಗಿ ಎದುರಿಸಲು ಇಂಗ್ಲಿಷ್ ಭಾಷೆಯ ಜ್ಞಾನ ಅಗತ್ಯವಾಗಿದೆ ಎಂದು ವಿದ್ಯಾರ್ಥಿಗಳಿಗೆ ಮನವರಿಕೆ ಮಾಡಿದರು. ಡಾ. ನೀಲಗಿರಿ ತಳವಾರ್ ಮಾತನಾಡುತ್ತಾ, 'ಸರ್ವಭಾಷಾಮಯಿ ಸರಸ್ವತಿ' ಎಂಬುದು ನಮ್ಮ ಪಾರಂಪರಿಕ ತಿಳಿವಳಿಕೆ. ಈ ಹಿನ್ನೆಲೆಯಲ್ಲಿ ಹೆಚ್ಚು ಹೆಚ್ಚು ಭಾಷೆಗಳನ್ನು ಕಲಿತಷ್ಟೂ ಅದು ನಮಗೆ ಶ್ರೀಮಂತಿಕೆ ತಂದು ಕೊಡುತ್ತದೆ. ಮಾತೃಭಾಷೆ ಕನ್ನಡದ ಬಗೆಗೆ ಅಭಿಮಾನವಿಟ್ಟುಕೊಂಡೇ ಇತರ ಭಾಷೆಗಳನ್ನು ಕಲಿಯುವುದು ನಮ್ಮ ಬೆಳವಣಿಗೆಯ ದೃಷ್ಟಿಯಿಂದ ಕ್ಷೇಮ ಎಂದು ಅಭಿಪ್ರಾಯಪಟ್ಟರು.

ಬೌದ್ಧ ಗುರು ಡಾ.ಕಲ್ಯಾಣಸಿರಿ ಭಂತೇಜಿ ಅವರು ಮಕ್ಕಳನ್ನು ಹಾರೈಸಿದರು. ಕಾರ್ಯಕ್ರಮದಲ್ಲಿ ಮುಡಾ ಮಾಜಿ ಅಧ್ಯಕ್ಷ ಸಿ. ಬಸವೇಗೌಡ, ವಿ.ರಾಮಸ್ವಾಮಿ, ಮಾಜಿ ಮೇಯರ್ ಪುರುಷೋತ್ತಮ್, ಜಿ. ಲಿಂಗಯ್ಯ, ಬಿ.ಎ.ಓ. ರಾಜು, ಶಾಲಾ ಶಿಕ್ಷಕರಾದ ಶಶಿಕಾಂತರಾಜೆ ಅರಸ್, ಮಹೇಶ್ವರಿ, ಪಿ.ನಂದಕುಮಾರ್, ಹೆಚ್.ಜಿ.ರಮೇಶ್, ವೆಂಕಟರಾಜು, ಸಿ.ಜಿ.ಶಿವಕುಮಾರ್, ಶಾಂತಾರಾಮ್ ಮೊದಲಾದವರು ಕಾರ್ಯಕ್ರಮದಲ್ಲಿದ್ದರು. ಪ್ರಕಾಶಕರಾದ ಭರತ್ ರಾಮಸ್ವಾಮಿ ಅವರ ಹುಟ್ಟುಹಬ್ಬದ ಅಂಗವಾಗಿ ಈ ಕಾರ್ಯಕ್ರಮ ಆಯೋಜಿಸಲಾಗಿತ್ತು.




ಮೈಸೂರು ಜಿಲ್ಲಾಡಳಿತದ ವತಿಯಿಂದ 2023ನೇ ಸಾಲಿನ ಪ್ರತಿಷ್ಠಿತ ಜಿಲ್ಲಾ ಕನ್ನಡ ರಾಜ್ಯೋತ್ಸವ ಪ್ರಶಸ್ತಿಯನ್ನು ಕವಯಿತ್ರಿ ಎ.ಹೇಮಗಂಗಾ ಅವರಿಗೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಪ್ರದಾನ ಮಾಡಿದರು. ಶಾಸಕ ಟಿ.ಎಸ್.ಶ್ರೀವತ್ಸ ಸೇರಿದಂತೆ ಇತರರು ಉಪಸ್ಥಿತರಿದ್ದರು. ಹೇಮಗಂಗಾ ಅವರು ಚಾಮರಾಜನಗರದ ದಿವಂಗತ ಲಕ್ಷ್ಮಿ ಮತ್ತು ಅಶ್ವತ್ಥನಾರಾಯಣ ದಂಪತಿಯ ಪುತ್ರಿ ಹಾಗೂ ಹೇಮಗಂಗಾ ಸಾಹಿತ್ಯ ಮತ್ತು ಸಾಂಸ್ಕೃತಿಕ ಪ್ರತಿಷ್ಠಾನದ ಸಂಸ್ಥಾಪಕ ಅಧ್ಯಕ್ಷರಾಗಿದ್ದಾರೆ.



ಮೈಸೂರಿನ ಭಾರತೀಯ ಜನತಾ ಪಕ್ಷದ ಕಚೇರಿಯಲ್ಲಿ 68ನೇ ಕನ್ನಡ ರಾಜ್ಯೋತ್ಸವ ಆಚರಿಸಲಾಯಿತು. ಈ ವೇಳೆ ಬಿಜೆಪಿ ಮುಖಂಡ ಎಸ್.ಜಯಪ್ರಕಾಶ್, ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಮಾಜಿ ಅಧ್ಯಕ್ಷ ಶ್ರೀನಿವಾಸಗೌಡ, ಬಿಜೆಪಿ ಮುಖಂಡರಾದ ರವಿಕುಮಾರ್, ಕಾಂತರಾಜ ಅರಸ್, ರಘು ಆಚಾರ್, ವೆಂಕಟೇಶ್ ಗೌಡ, ಮಹೇಶ್ ಗೌಡ, ವಿಶ್ವನಾಥ್, ಪ್ರವೀಣ್ ಕುಮಾರ್ ಮತ್ತಿತರರು ಭಾಗವಹಿಸಿದ್ದರು.

## ಪ್ರೊ.ವೆಂಕೋಬರಾವ್ ಇನ್ನಿಲ್ಲ




ಮೈಸೂರು, ನ. 3(ಆರ್‌ಕೆ)– ಮೈಸೂರಿನ ಜಯಲಕ್ಷ್ಮಿಪುರಂ ನಿವಾಸಿ ಹಾಗೂ ಮೈತ್ರಿ ಬುದ್ಧಿಮಾಂದ್ಯ ಮಕ್ಕಳ ಶಾಲೆ ಸಂಸ್ಥಾಪಕ ಪ್ರೊ.ಎನ್.ವೆಂಕೋಬರಾವ್ (87) ಶುಕ್ರವಾರ ಬೆಳಗ್ಗೆ ನಿಧನರಾದರು.

ಮೂಲತಃ ಯಳಂದೂರಿನವರಾದ ಇವರು, ಪತ್ನಿ ಮಾಯಾದೇವಿ, ಪುತ್ರ, ಪುತ್ರಿ ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಇಂದು ಸಂಜೆ ಗೋಕುಲಂನಲ್ಲಿರುವ ಚಿರಶಾಂತಿಧಾಮದಲ್ಲಿ ಪ್ರೊ. ವೆಂಕೋಬರಾವ್ ಅವರ ಅಂತ್ಯಕ್ರಿಯೆ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಬನುಮಯ್ಯ ಕಾಲೇಜಿನಲ್ಲಿ ಇತಿಹಾಸ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದ್ದ ಪ್ರೊ. ವೆಂಕೋಬರಾವ್ ಅವರು, 30 ವರ್ಷಗಳ ಕಾಲ ಆರ್‌ಎಸ್‌ಎಸ್ ರಾಷ್ಟ್ರೀಯ ಉಪಾಧ್ಯಕ್ಷರಾಗಿ, ಎಬಿವಿಪಿ ಕಾರ್ಯದರ್ಶಿಯಾಗಿ ಲಯನ್ಸ್ ಕ್ಲಬ್ ಇಂಟರ್‌ನ್ಯಾಷನಲ್ ಜಿಲ್ಲಾ ಗವರ್ನರ್ ಆಗಿಯೂ ಸೇವೆ ಸಲ್ಲಿಸಿದ್ದರು. 'ಶ್ರೀಕಾಂತೆ' ಎಂಬ ನಾಮಾಂಕಿತದೊಂದಿಗೆ ಸಣ್ಣ ಕಥೆಗಳಿಗೆ ಖ್ಯಾತಿಯಾಗಿದ್ದ ಅವರು, ರಾಜ್ಯೋತ್ಸವ ಪ್ರಶಸ್ತಿ, ಲಯನ್ ಭೀಷ್ಮ ಪ್ರಶಸ್ತಿ, ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರಶಸ್ತಿ ಸೇರಿದಂತೆ ಹಲವು ಪುರಸ್ಕಾರಗಳಿಗೆ ಭಾಜನರಾಗಿದ್ದರು.

ಸಂಸದರಾದ ಪ್ರತಾಪ್ ಸಿಂಹ, ವಿ. ಶ್ರೀನಿವಾಸಪ್ರಸಾದ್, ಮಾಜಿ ಶಾಸಕ ವಾಸು ಸೇರಿದಂತೆ ಹಲವು ಗಣ್ಯರು ಪ್ರೊ. ವೆಂಕೋಬರಾವ್ ಅವರ ನಿಧನಕ್ಕೆ ಸಂತಾಪ ಸೂಚಿಸಿದ್ದಾರೆ.

### ಆರ್.ಪಿ.ಸುಬ್ರಮಣಿಯನ್



ಮೈಸೂರು, ನ.3– ಮೈಸೂರಿನ ಬಂಡಿಕೇರಿ 8ನೇ ಕ್ರಾಸ್ (ಶಾಂತಲಾ ಚಿತ್ರಮಂದಿರದ ಹಿಂದೆ)ನಲ್ಲಿ ವಾಸವಾಗಿದ್ದ ಆರ್.ಪಿ.ಸುಬ್ರಮಣಿಯನ್ (65) ಅನಾರೋಗ್ಯದಿಂದ ಗುರುವಾರ ನಿಧನರಾದರು. ಮೃತರು ಕುವೆಂಪುನಗರದಲ್ಲಿರುವ ಅಲ್ಟ್ರಾ ಕಾರ್ಸ್ ಶೋರೂಂ ಮಾಲೀಕರಾಗಿದ್ದು, ಪತ್ನಿ, ಇಬ್ಬರು ಗಂಡು ಮಕ್ಕಳು ಹಾಗೂ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಶುಕ್ರವಾರ ಮಧ್ಯಾಹ್ನ ಚಾಮುಂಡಿ ಬೆಟ್ಟದ ತಪ್ಪಲಿನಲ್ಲಿರುವ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

# ಬೆಳೆ ಸಮೀಕ್ಷೆ ವರದಿಯ 'ಬೆಳೆ ದರ್ಶಕ್' ಆ್ಯಪ್ ಬಗ್ಗೆ ರೈತರಿಗೆ ಜಾಗೃತಿ ಕಾರ್ಯಕ್ರಮ



ಮೈಸೂರು, ನ.3(ಎಂಟಿವೈ)– ಅತಿವೃಷ್ಟಿ ಹಾಗೂ ಅನಾವೃಷ್ಟಿಯಿಂದ ಹಾನಿಯಾಗಿರುವ ಬೆಳೆ ಹಾನಿ ಹಾಗು ಭೂಮಿಯಲ್ಲಿ ಬೆಳೆದಿರುವ ಬೆಳೆ ಸಮೀಕ್ಷೆ ವರದಿ ಪರಿಶೀಲನೆಗಾಗಿ ಕೃಷಿ ಇಲಾಖೆ ಹೊಸದಾಗಿ ಪರಿಚಯಿಸಿರುವ 'ಬೆಳೆ ದರ್ಶಕ್' ಆ್ಯಪ್ ಬಳಕೆ ಕುರಿತಂತೆ ರೈತರಿಗೆ ಜಾಗೃತಿ ಮೂಡಿಸಲು ವಿವಿಧ ಕಾರ್ಯಕ್ರಮ ರೂಪಿಸಲಾಗಿದೆ.

ಕೃಷಿ ಇಲಾಖೆ ಈಗಾಗಲೇ ಬೆಳೆ ದರ್ಶಕ್ ಆ್ಯಪ್ ಪರಿಚಯಿಸಿದ್ದು, ರೈತರು ಬೆಳೆದ ಬೆಳೆಗಳ ಸಮೀಕ್ಷಾ ವರದಿಯನ್ನು ಆ್ಯಪ್ ಮೂಲಕ ವೀಕ್ಷಿಸಬಹುದಾಗಿದ್ದು, ಈ ಸಂಬಂಧ ಗ್ರಾಮ ಮಟ್ಟದಲ್ಲಿ ರೈತರಿಗೆ ಆ್ಯಪ್ ಬಳಕೆ ಕುರಿತಂತೆ ಪ್ರಾತ್ಯಕ್ಷಿಕೆ ಮೂಲಕ ಮಾಹಿತಿ ನೀಡಲಾಗುತ್ತಿದೆ. ಈ ಆ್ಯಪ್‌ನಲ್ಲಿ ಸಮೂದಾಗಿರುವ ಬೆಳೆ ಮಾಹಿತಿ ಸರಿಯಿದೆಯೋ ಅಥವಾ ತಪ್ಪಾಗಿದ್ದರೆ ಆಕ್ಷೇಪ ವ್ಯಕ್ತಪಡಿಸುವುದಕ್ಕೂ ಅವಕಾಶ ಕಲ್ಪಿಸಲಾಗಿದ್ದು, ಬೆಳೆ ನಷ್ಟದ ಮಾಹಿತಿಯನ್ನು ಸಮೀಕ್ಷೆಯಲ್ಲಿ ನಿಖರವಾಗಿ ಒದಗಿಸುವುದಕ್ಕೆ ಸಹಕಾರಿಯಾಗಿದೆ.

ಮೈಸೂರು ತಾಲೂಕಿನ ವರುಣಾ ಕೃಷಿ ಕೇಂದ್ರದ ವ್ಯಾಪ್ತಿಯ ಹೊಲದಲ್ಲಿ ಕೆಲ ರೈತರಿಗೆ ಪ್ರಾತ್ಯಕ್ಷಿಕೆ ಆಯೋಜಿಸಲಾಗಿತ್ತು. ಈ ವೇಳೆ ಮೈಸೂರು ತಾಲ್ಲೂಕಿನ ಸಹಾಯಕ ಕೃಷಿ ನಿರ್ದೇಶಕಿ ಹೆಚ್.ಬಿ.ಮಧುಲತಾ ಮಾತನಾಡಿ, ರಾಜ್ಯದಲ್ಲಿ ಕೃಷಿ ಇಲಾಖೆ 2023–24ನೇ ಸಾಲಿನಲ್ಲಿ, ಪೂರ್ವ ಮುಂಗಾರು ಹಾಗೂ ತಡವಾದ ಮುಂಗಾರು ಹಂಗಾಮಿನಲ್ಲಿ ಗ್ರಾಮಾವಾರು ಮಾಡಿರುವ ಬೆಳೆ ಸಮೀಕ್ಷೆ ನಡೆಸಿದೆ. ಈ ಸಮೀಕ್ಷೆಯಲ್ಲಿರುವ ವಿವರಗಳನ್ನು ರೈತರು ಪರಿಶೀಲಿಸಿಕೊಳ್ಳಲು ಹಾಗೂ ನಮೂದಿಸಿರುವ ಬೆಳೆ ವಿವರ ತಪ್ಪಾಗಿದ್ದರೆ ಆಕ್ಷೇಪಣೆ ಸಲ್ಲಿಸಲು ಅನುಕೂಲವಾಗುವಂತೆ, ಬೆಳೆ ದರ್ಶಕ್ ಆ್ಯಪ್ ಅಭಿವೃದ್ಧಿಪಡಿಸಲಾಗಿದೆ. ರೈತರು ಈ ಆ್ಯಪ್ ಮೂಲಕ ತಾವು ಬೆಳೆದಿರುವ ಬೆಳೆಯು ಸರಿಯಾಗಿ ನಮೂದಾಗಿದೆಯೋ, ಇಲ್ಲವೋ ಎಂಬ ಮಾಹಿತಿಯನ್ನು ಸುಲಭವಾಗಿ ಛಾಯಾಚಿತ್ರದೊಂದಿಗೆ ತಿಳಿಯಬಹುದಾಗಿದೆ. ಹೀಗಾಗಿ ಎಲ್ಲಾ ರೈತರು ಈ ಆ್ಯಪ್ ಅನ್ನು ಗೂಗಲ್ ಪ್ಲೇ ಸ್ಟೋರ್‌ನಲ್ಲಿ ಈ http://play.google.com/stpre/apps/details?id=com.crop.offcskharif_2021 ಲಿಂಕ್ ಮೂಲಕ ಡೌನ್‌ಲೋಡ್ ಮಾಡಿಕೊಂಡು ತಾವು ಬೆಳೆದಿರುವ ಬೆಳೆ ವಿವರ ಪರಿಶೀಲಿಸಿಕೊಳ್ಳುವಂತೆ ಸಲಹೆ ನೀಡಿದರು.

ಬೆಳೆ ಸಮೀಕ್ಷೆ ಆ್ಯಪ್ ಮೂಲಕ ಸಮೀಕ್ಷೆ ಮಾಡಲಾಗಿರುವ ಬೆಳೆ ವಿವರ, ಸರ್ಕಾರವು ಅನುಷ್ಠಾನಗೊಳಿಸುವ ವಿವಿಧ ಯೋಜನೆಗಳು, ಕಾರ್ಯಕ್ರಮಗಳಿಗೆ ಅಧಿಕೃತವಾಗಿ ಬಳಕೆ ಮಾಡಲಾಗುತ್ತದೆ. ಈ ಮಾಹಿತಿಯನ್ನು ಭತ್ತ, ರಾಗಿ ಸೇರಿದಂತೆ ಇತರೆ ಬೆಳೆಗಳಿಗೆ ನೀಡುವ ಬೆಂಬಲ ಬೆಲೆಯ ಪ್ರಯೋಜನ ಪಡೆಯಲು ಸಹಕಾರಿಯಾಗುತ್ತದೆ. ಅಲ್ಲದೆ, ಖರೀದಿ ಕೇಂದ್ರಗಳಿಗೆ ಸೂಕ್ತ ಮಾಹಿತಿ ಒದಗಿಸಲು ಸೂಕ್ತವಾಗಿದೆ. ಬೆಳೆ ವಿಮೆಗೆ ನೋಂದಾಯಿಸಲು ಹಾಗೂ ಪರಿಹಾರದ ಹಣ ಪಡೆಯಲು, ಅತಿ ವೃಷ್ಠಿ, ಅನಾವೃಷ್ಠಿ ಆದಾಗ ರೈತರಿಗೆ ಪರಿಹಾರ ನೀಡಲು, ಬ್ಯಾಂಕುಗಳಲ್ಲಿ ಮತ್ತು ರೈತ ಸಹಕಾರ ಸಂಘಗಳಲ್ಲಿ ಬೆಳೆ ಸಾಲ ಪಡೆಯಲು ಕಡ್ಡಾಯವಾಗಿ ಈ ಮಾಹಿತಿಯ ಅವಶ್ಯಕತೆಯಿರುತ್ತದೆ. ಹೀಗಾಗಿ ಎಲ್ಲಾ ರೈತರು ಈ ಬೆಳೆ ದರ್ಶಕ್ ಆ್ಯಪ್ ಅನ್ನು ಸದ್ಬಳಕೆ ಮಾಡಿಕೊಳ್ಳುವಂತೆ ಮನವಿ ಮಾಡಿದರು.



ಮೈಸೂರಿನ ಜೆಡಿಎಸ್ ಕಚೇರಿಯಲ್ಲಿ ಕನ್ನಡ ರಾಜ್ಯೋತ್ಸವವನ್ನು ಆಚರಿಸಲಾಯಿತು. ಶಾಸಕ ಜಿ.ಟಿ.ದೇವೇಗೌಡ ಅವರು ತಾಯಿ ಭುವನೇಶ್ವರಿಯ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಕಾರ್ಯಕ್ರಮ ಉದ್ಘಾಟಿಸಿದರು. ನಗರಾಧ್ಯಕ್ಷ ಕೆ.ಟಿ.ಚೆಲುವೆಗೌಡ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ವಿಧಾನ ಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ, ಮಾಜಿ ಮೇಯರ್ ಆರ್.ಲಿಂಗಪ್ಪ, ನಗರ ಪಾಲಿಕೆ ಸದಸ್ಯರಾದ ಎಸ್‌ಬಿಎಂ ಮಂಜು ರಮಣಿ, ರಾಜ್ಯ ಸಮಿತಿ ಸದಸ್ಯರಾದ ಎಚ್.ಕೆ.ರಮೇಶ್, ರಾಜ್ಯ ಪ್ರಧಾನ ಕಾರ್ಯದರ್ಶಿ ಎಚ್.ಕೆ.ರಾಮು, ನಗರ ಪ್ರಧಾನ ಕಾರ್ಯದರ್ಶಿ ಪಿ.ಸತೀಶ್ ಆರ್.ಮುದ್ದುರಾಜ್, ಎನ್‌ಆರ್ ಕ್ಷೇತ್ರದ ಅಧ್ಯಕ್ಷ ಎಂ.ಎನ್.ರಾಮು, ಚಾಮರಾಜ ಕ್ಷೇತ್ರದ ಅಧ್ಯಕ್ಷ ಪಿ ಮಂಜುನಾಥ್, ಉಪಾಧ್ಯಕ್ಷ ಬೋರೇಗೌಡ, ಶಾರದಾದೇವಿ ನಗರದ ಗ್ಲಾಸ್ ಅಂಗಡಿ ಶೇಖರ್, ಸುಂದರ್, ಕೈಲಾಸ ಪುರಂ ದೇವರಾಜ್, ಪ್ರಕಾಶ್, ಸುಮಿತ್ರ, ಇಂದ್ರಮ್ಮ, ಕೋದಂಡ, ನಾಗರಾಜ್ ಮತ್ತಿತರರು ಉಪಸ್ಥಿತರಿದ್ದರು.


## ನಾಳೆ ಡಿಎನ್ಕೆ ಮೂರು ಕಾದಂಬರಿಗಳ ಬಿಡುಗಡೆ

ಮೈಸೂರು, ನ. 3–ಕಳೆದ ಮೂವತ್ತೈದು ವರ್ಷಗಳಿಂದ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ನಿರಂತರವಾಗಿ ಸೇವೆ ಸಲ್ಲಿಸುತ್ತಿದ್ದು ಮೈಸೂರಿನ ಸಾಹಿತ್ಯ ವಲಯದಲ್ಲಿ ಡಿಎನ್ಕೆ ಎಂದೇ ಚಿರಪರಿಚಿತರಾಗಿರುವ ಡಿ.ಎನ್. ಕೃಷ್ಣಮೂರ್ತಿಯವರ ಮಹಾನದಿ, ನ್ಯಾಯದರ್ಶನ ಹಾಗೂ ಪರಿಕ್ರಮಣ ಮೂರು ಕಾದಂಬರಿಗಳು ನ.5ರಂದು ಬೆಳಗ್ಗೆ 10.30ಕ್ಕೆ ಮೈಸೂರಿನ ಗೋಪಾಲಸ್ವಾಮಿ ಪಿಯು ಕಾಲೇಜು ಸಭಾಂಗಣದಲ್ಲಿ ನಡೆಯುವ ಸಮಾರಂಭದಲ್ಲಿ ಲೋಕಾರ್ಪಣೆಗೊಳ್ಳಲಿವೆ.

ಇದೇ ವೇಳೆ ಅರವತ್ತು ವಸಂತಗಳನ್ನು ಪೂರೈಸಿರುವ ಡಿಎನ್ಕೆ ಅವರನ್ನು ಡಿಎನ್ಕೆ ಸ್ನೇಹ ಬಳಗದ ವತಿಯಿಂದ ಅಭಿನಂದಿಸಲಾಗುವುದು.

ಸಮಾರಂಭವನ್ನು ಮಾಜಿ ಸಚಿವ ಸಿ.ಹೆಚ್. ವಿಜಯಶಂಕರ್ ಉದ್ಘಾಟಿಸಲಿದ್ದು, ಮಹಾನದಿ ಕಾದಂಬರಿ ಯನ್ನು ಹಿರಿಯ ವಿದ್ವಾಂಸ ಡಾ.ಸಿ.ಪಿ.ಕೆ., ನ್ಯಾಯದರ್ಶನ ಕಾದಂಬರಿಯನ್ನು ಖ್ಯಾತ ಸಾಹಿತಿ ಹಾಗೂ ಪತ್ರಕರ್ತ ಬನ್ನೂರು ಕೆ. ರಾಜು ಮತ್ತು ಪರಿಕ್ರಮಣ ಕಾದಂಬರಿಯನ್ನು ಖ್ಯಾತ ಸಾಹಿತಿ, ಚಿಂತಕ ಪ್ರೊ.ಎಸ್.ಶಿವರಾಜಪ್ಪ ಬಿಡುಗಡೆಗೊಳಿಸುವರು. ಕೃಷ್ಣರಾಜ ಕ್ಷೇತ್ರದ ಶಾಸಕರಾದ ಟಿ.ಎಸ್.ಶ್ರೀವತ್ಸ ಅವರು ಡಿಎನ್ಕೆ ಅವರನ್ನು ಅಭಿನಂದಿಸಲಿದ್ದು, ಬಿಜೆಪಿ ಮುಖಂಡರಾದ ಎಸ್. ಆರ್. ಗೋಪಾಲರಾವ್ ಅಭಿನಂದನಾ ನುಡಿಗಳನ್ನಾಡುವರು. ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಧ್ಯಕ್ಷ ಅಶೋಕ ಹಾರನಹಳ್ಳಿ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಮಹಾರಾಜ ಎಜುಕೇಷನಲ್ ಟ್ರಸ್ಟ್ ಅಧ್ಯಕ್ಷ ಡಾ. ಎಸ್. ಮುರಳಿ, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಉಪಾಧ್ಯಕ್ಷ ನಂ.ಶ್ರೀಕಂಠ ಕುಮಾರ್ ಕಾರ್ಯಕಾರಿ ಸಮಿತಿ ಸದಸ್ಯರಾದ ಶಂಕರನಾರಾಯಣ ಭಾಗವಹಿಸುವರು. ಕೃತಿಗಳ ಕರ್ತೃ ಹಾಗೂ ಅಭಿನಂದಿತರಾದ ಡಿ.ಎನ್. ಕೃಷ್ಣಮೂರ್ತಿ ಉಪಸ್ಥಿತರಿರುವರು.

## ರಾಜ್ಯ ಮಟ್ಟದ ಸ್ಕೇಟಿಂಗ್ ಚಾಂಪಿಯನ್‌ಶಿಪ್‌ಗೆ ಆಯ್ಕೆ



34ನೇ ಜಿಲ್ಲಾ ರೋಲರ್ ಸ್ಕೇಟಿಂಗ್ ಚಾಂಪಿಯನ್‌ಶಿಪ್‌ನ 5–7 ವರ್ಷದ ಬಾಲಕಿಯರ ವಿಭಾಗದಲ್ಲಿ ಮೈಸೂರು ಬನ್ನಿಮಂಟಪದಲ್ಲಿರುವ ಸೆಂಟ್ ಜೋಸೆಫ್ ಸೆಂಟ್ರಲ್ ಶಾಲೆ ವಿದ್ಯಾರ್ಥಿನಿ ಹಾಗೂ ಜುಲ್ಫರ್ನೈನ್ ಮತ್ತು ಶ್ರೀಮತಿ ಶಬಿಸ್ತಾನೆ ಜೆಹ್ರಾ ಅವರ ಪುತ್ರಿ ಜೈನಬ್ ಅಲಿ, 2 ಬೆಳ್ಳಿ ಪದಕ ಗೆಲ್ಲುವ ಮೂಲಕ ನ.9 ರಿಂದ ಮಂಗಳೂರಿನಲ್ಲಿ ನಡೆಯುವ 39ನೇ ರಾಜ್ಯ ಮಟ್ಟದ ಸ್ಕೇಟಿಂಗ್ ಚಾಂಪಿಯನ್‌ಶಿಪ್‌ಗೆ ಆಯ್ಕೆಯಾಗಿದ್ದಾರೆ. ವಿದ್ಯಾರ್ಥಿಯನ್ನು ಫಾದರ್ ಪ್ರವೀಣ್ ಕುಮಾರ್, ಪ್ರಾಂಶುಪಾಲ ಮೈಕಲ್ ಜೋಶುವಾ ಇನ್ನಿತರರು ಅಭಿನಂದಿಸಿದರು.

## ಇಂದು ಹಲವೆಡೆ ನೀರು ಸರಬರಾಜಲ್ಲಿ ವ್ಯತ್ಯಯ

ಮೈಸೂರು, ನ.3–ಮೈಸೂರು ನಗರಕ್ಕೆ ನೀರು ಸರಬರಾಜು ಮಾಡುವ ಹೊಂಗಳ್ಳಿ 2ನೇ ಹಂತದ ನೀರು ಸರಬರಾಜು ಯೋಜನೆಯಲ್ಲಿ ತುರ್ತು ಕಾಮಗಾರಿ ಹಮ್ಮಿಕೊಂಡಿರುವುದರಿಂದ ನ.4ರಂದು ಮಂಡಿಮೊಹಲ್ಲಾ, ಲಷ್ಕರ್ ಮೊಹಲ್ಲಾ, ಯಾದವಗಿರಿ, ಬನ್ನಿಮಂಟಪ ಎ, ಬಿ, ಸಿ ಲೇಔಟ್, ಪುಲಿಕೇಶಿ ರಸ್ತೆ, ಮಂಡಿ ಮೊಹಲ್ಲಾ, ವೀರನಗೆರೆ, ಸಿದ್ದಿಖಿನಗರ, ಶಿವರಾತ್ರೀಶ್ವರನಗರ, ತಿಲಕ್‌ನಗರ, ಬಡೇಮಕಾನ್, ಹಲೀಂನಗರ, ದೇವರಾಜ ಮೊಹಲ್ಲಾ, ಲಷ್ಕರ್ ಮೊಹಲ್ಲಾ ಭಾಗಶಃ, ನಜರ್‌ಬಾದ್ ಮೊಹಲ್ಲಾ, ವಿದ್ಯಾರಣ್ಯಪುರಂ, ವಿಶ್ವೇಶ್ವರನಗರ, ಚಾಮುಂಡಿಪುರಂ, ಲೂರ್ದ್‌ನಗರ, ಮೀನಾಬಜಾರ್, ವಾರ್ಡ್ ಸಂಖ್ಯೆ: 8, 17, 18, 19, 23ರಿಂದ 27ರವರೆಗೆ 40, 41, 55, 60, 61, 62ನೇ ವಾರ್ಡ್‌ಗಳಲ್ಲಿ ನೀರು ಸರಬರಾಜು ವ್ಯತ್ಯಯವಾಗಲಿದೆ ಎಂದು ಪ್ರಕಟಣೆ ತಿಳಿಸಿದೆ.



ಮೈಸೂರು ಜಿಲ್ಲಾಡಳಿತದ ವತಿಯಿಂದ ಜೀವಧಾರ ರಕ್ತ ನಿಧಿ ಕೇಂದ್ರದ ನಿರ್ದೇಶಕರಾದ ಎಸ್.ಇ.ಗಿರೀಶ್ ಅವರಿಗೆ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಪ್ರದಾನ ಮಾಡಿದರು. ಶಾಸಕರಾದ ಟಿ.ಎಸ್.ವತ್ಸ, ಸಿ.ಎನ್.ಮಂಜೇಗೌಡ, ಮೇಯರ್ ಶಿವಕುಮಾರ್ ಇತರರು ಉಪಸ್ಥಿತರಿದ್ದರು.

## ಮೈಸೂರು ಹಾಗೂ ಸುತ್ತಮುತ್ತ ಇಂದು...



### ಇಂದಿನ ಪಂಚಾಂಗ

4.11.2023 ಶನಿವಾರ, ಮಳೆ ನಕ್ಷತ್ರ: ಸ್ವಾತಿ, 25.10.2023 ರಿಂದ 06.11.2023
ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಅಶ್ವಯುಜ ಮಾಸ, ಕೃಷ್ಣ ಪಕ್ಷ,
ತಿಥಿ: ಸಪ್ತಮಿ, ನಕ್ಷತ್ರ: ಪುನರ್ವಸು, ರಾಹುಕಾಲ: ಬೆಳಗ್ಗೆ 9 ರಿಂದ 10.30ರವರೆಗೆ

### ಮೈಸೂರು ಆಕಾಶವಾಣಿ



**ಬೆಳಗ್ಗೆ:** 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಸಿ.ಎಫ್.ಟಿ.ಆರ್.ಐ ಶೋಧ ಅನುಶೋಧ – ಪ್ರಾಯೋಜಿತ ಕಾರ್ಯಕ್ರಮ, ಪ್ರಸ್ತುತಿ– ಡಾ. ವಿ.ಬಿ. ಕುಡಚಿರ, 6.40 ರೈತರಿಗೆ ಸಲಹೆ, 6.45 ಕಲ್ಯಾಣ ಕರೆದಿದೆ ಕಲ್ಯಾಣ–ಪ್ರಾಯೋಜಿತ ಕಾರ್ಯಕ್ರಮ, 7.15 ಭಾವಗೀತೆಗಳು, 10.00 ಎನ್.ಭಾರತಿ –ವೀಣಾವಾದನ, 11.00 ಸ್ವರಾಜ್– ಭಾರತ ಸ್ವಾತಂತ್ರ್ಯ ಸಂಗ್ರಾಮದ ಸಮಗ್ರಗಾಥೆ

**ಮಧ್ಯಾಹ್ನ:** 12.30 ದೇವರನಾಮ, 12.45 ಜನಪದ ಸಂಗೀತ, 1.20 ಭಾವಗೀತೆ, 3.30 ಮಕ್ಕಳ ಮಂಟಪ – ಶ್ರೀ ಸತ್ಯಸಾಯಿಬಾಬಾ ವಿದ್ಯಾ ಸಂಸ್ಥೆಯ ಮಕ್ಕಳಿಂದ ಕಾರ್ಯಕ್ರಮ ವೈವಿಧ್ಯ, 4.00 ನಾಟಕ, 4.30 ನೆನಪಿನಂಗಳ, 6.50 ಕೃಷಿರಂಗ–ತೋರಣ ಹೂರಣ–ವಾರದ ಗ್ರಾಮೀಣ ಕಾರ್ಯಕ್ರಮ, ಪ್ರಸ್ತುತಿ– ಎನ್. ಕೇಶವಮೂರ್ತಿ, ಆರ್. ಲೋಕೇಶ್ವರಿ, ಡಾ. ಮೈಸೂರು ಉಮೇಶ್, ಪರಾಗ–ಬೇಸಾಯದ ಬದುಕು ಸರಾಗ – ಬಾನುಲಿ ಸರಣಿ, 8.00 ಯುವವಾಣಿ, 10.00 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ–ಪಂಡಿತ್ ಸಾಜನ್ ಮಿಶ್ರ – ಗಾಯನ

■ **ನವ ಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೇಟ್ ಲಿಮಿಟೆಡ್ :** ಕನ್ನಡ ರಾಜ್ಯೋತ್ಸವ ಪ್ರಯುಕ್ತ ವಿಶೇಷ ರಿಯಾಯಿತಿ ಮಾರಾಟ, ಸ್ಥಳ: ಮಾರಾಟ ಮಳಿಗೆ, ರಾಮಸ್ವಾಮಿ ವೃತ್ತ, ಬೆಳಗ್ಗೆ 9.30 ರಿಂದ.

■ **ರಾಮ್‌ಸನ್ಸ್ ಬೊಂಬೆ ಮನೆ :** ದಸರಾ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯರಸ್ತೆ, ಬೆಳಗ್ಗೆ 10ರಿಂದ ಸಂಜೆ 7 ಗಂಟೆವರೆಗೆ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಮೂತ್ರಪಿಂಡ ಕಾಯಿಲೆಗೆ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 10 ರಿಂದ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಸುವರ್ಣಪ್ರಾಶನ ಅಭಿಯಾನ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 8 ರಿಂದ.

■ **ಡಾ. ಬಿ.ಆರ್. ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರ ಮತ್ತು ಡಾ. ಬಿ.ಆರ್. ಅಂಬೇಡ್ಕರ್ ಪೀಠ:** ಒಳಗೊಳ್ಳುವ ರಾಜಕಾರಣದತ್ತ ಮಹಿಳೆಯರು ಕುರಿತು ವಿಚಾರ ಸಂಕಿರಣ, ಉದ್ಘಾಟನೆ: ಶಾಸಕರಾದ ಶ್ರೀಮತಿ ಭಾಗೀರಥಿ ಮುರುಳ್ಯ, ಆಶಯ ಮಾತು: ಸಾರ್ವಜನಿಕ ವ್ಯವಹಾರ ಕೇಂದ್ರ ನಿರ್ದೇಶಕರಾದ ಪ್ರೊ. ಛಾಯಾ ದೇಗಾಂವಕರ್, ಅಧ್ಯಕ್ಷತೆ: ಮೈಸೂರು ವಿವಿ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್, ಸ್ಥಳ: ಪ್ರೊ. ಬೆಟ್ರಿಕ್ಸ್ ಡಿಸೋಜ ಸಭಾಂಗಣ, ಮಾನಸಗಂಗೋತ್ರಿ, ಬೆಳಗ್ಗೆ 10.30ಕ್ಕೆ

■ **ಶರಣ ಸಾಹಿತ್ಯ ಪರಿಷತ್ತು, ಮೈಸೂರು ನಗರ ಘಟಕ, ಶಾರದಾ ವಿಲಾಸ ಪದವಿ ಕಾಲೇಜು, ಕನ್ನಡ ವಿಭಾಗ :** ದತ್ತಿ ಕಾರ್ಯಕ್ರಮ, ವಚನ ವಾಚನ–ವ್ಯಾಖ್ಯಾನ ಸ್ಪರ್ಧೆ, ಉದ್ಘಾಟನೆ : ಸಾಹಿತಿ ಪ್ರೊ. ಎಸ್.ಪಿ. ಉಮಾದೇವಿ, ಪ್ರೊ. ಮಲ್ಲಿಕಾರ್ಜುನ ಮೊರಬದ ಅವರಿಂದ ವಚನ ಸಾಹಿತ್ಯ ಮತ್ತು ದೇಶೀಯ ಜ್ಞಾನ ಕುರಿತು ಉಪನ್ಯಾಸ, ಬಹುಮಾನ ವಿತರಣೆ : ಶಾರದಾ ವಿಲಾಸ ಪದವಿ ಕಾಲೇಜು ಪ್ರಾಂಶುಪಾಲರಾದ ಡಾ. ಎಂ. ದೇವಿಕಾ, ಮುಖ್ಯ ಅತಿಥಿಗಳು : ಕಾರ್ಯದರ್ಶಿ ಎನ್. ಚಂದ್ರಶೇಖರ, ಅಧ್ಯಕ್ಷತೆ: ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಮ.ಗು. ಸದಾನಂದಯ್ಯ, ಸ್ಥಳ: ಶಾರದಾ ವಿಲಾಸ ಪದವಿ ಕಾಲೇಜು ಸಭಾಂಗಣ, ಕೃಷ್ಣಮೂರ್ತಿಪುರಂ, ಬೆಳಗ್ಗೆ 11ಕ್ಕೆ.

■ **ಮಹಾಜನ ವಿದ್ಯಾಸಂಸ್ಥೆ :** ಕನ್ನಡ ರಾಜ್ಯೋತ್ಸವ, ಅಧ್ಯಕ್ಷತೆ : ಮಹಾಜನ ವಿದ್ಯಾಸಂಸ್ಥೆ ಕಾರ್ಯದರ್ಶಿ ಡಾ. ಟಿ. ವಿಜಯಲಕ್ಷ್ಮಿ ಮುರಳೀಧರ್, ಮುಖ್ಯ ಅತಿಥಿಗಳು: ಹಾಸ್ಯ ಕಲಾವಿದ ಮೈಸೂರು ಆನಂದ್, ಅಧ್ಯಕ್ಷ ಟಿ. ಮುರಳೀಧರ್ ಭಾಗವತ್, ಆಡಳಿತಾಧಿಕಾರಿ ಪ್ರೊ. ಪಿ. ಸರೋಜಮ್ಮ, ಸ್ಥಳ: ವಿವೇಕಾನಂದ ಸಭಾಂಗಣ, ಜಯಲಕ್ಷ್ಮಿಪುರಂ, ಬೆಳಗ್ಗೆ 11ಕ್ಕೆ.

■ **ಪರಮಹಂಸ ಯೋಗ ಮಹಾವಿದ್ಯಾಲಯ :** ಇಂಟರ್‌ನ್ಯಾಷನಲ್ ಯೋಗ ಟೀಚರ್ ಟ್ರೈನಿಂಗ್ ಕೋರ್ಸ್ ಉದ್ಘಾಟನೆ ಹಾಗೂ ಯೋಗಾಚಾರ್ಯ ಪ್ರಶಸ್ತಿ ಪತ್ರಗಳ ವಿತರಣಾ ಸಮಾರಂಭ, ಉಪಸ್ಥಿತರು : ಮೇಯರ್ ಶಿವಕುಮಾರ್, ಜಿಲ್ಲಾ ಆಯುಷ್ ಅಧಿಕಾರಿ ಡಾ. ಪುಷ್ಪಾ, ಪರಮಹಂಸ ಯೋಗ ಮಹಾವಿದ್ಯಾಲಯ ಅಧ್ಯಕ್ಷ ಶಿವಪ್ರಕಾಶ್ ಗುರೂಜಿ, ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ. ರವಿಕುಮಾರ್, ಮೈಸೂರು ಯೋಗ ಒಕ್ಕೂಟದ ಉಪಾಧ್ಯಕ್ಷ ಎಂ.ಎಸ್. ರಮೇಶ್ ಕುಮಾರ್, ಮೈಸೂರು ಯೋಗ ಅಸೋಸಿಯೇಷನ್ ಅಧ್ಯಕ್ಷ ಯೋಗಪ್ರಕಾಶ್, ಸುಂದರ್‌ರಾಜ್, ಡಾ. ಭಾವನಾ, ಸ್ಥಳ: ಪತ್ರಕರ್ತರ ಭವನ, ತ್ಯಾಗರಾಜ ರಸ್ತೆ, ಬೆಳಗ್ಗೆ 11.30ಕ್ಕೆ

■ **ಮೈಸೂರು ಕನ್ನಡ ವೇದಿಕೆ :** ಸಾಧಕರಿಗೆ ಶ್ರೀ ಜಯಚಾಮರಾಜೇಂದ್ರ ಪ್ರಶಸ್ತಿ ಪ್ರದಾನ ಸಮಾರಂಭ, ಉದ್ಘಾಟನೆ : ಅಪರ ಜಿಲ್ಲಾಧಿಕಾರಿ ಆರ್. ಲೋಕನಾಥ್, ಪ್ರಧಾನ ಭಾಷಣ : ಕರಾಮುವಿವಿ ಸಹಾಯಕ ಪ್ರಾಧ್ಯಾಪಕ ಶೈಲೇಶ್ ರಾಜೇ ಅರಸ್, ಸನ್ಮಾನಿಸುವವರು : ಪೊಲೀಸ್ ನಿರೀಕ್ಷಕ ಎನ್.ಸಿ. ನಾಗೇಗೌಡ, ಸಮಾಜ ಸೇವಕ ಗುರುಪಾದಸ್ವಾಮಿ, ಅಧ್ಯಕ್ಷತೆ : ವೇದಿಕೆ ಅಧ್ಯಕ್ಷ ಎಸ್. ಬಾಲಕೃಷ್ಣ, ಸ್ಥಳ: ಸ್ವಾತಂತ್ರ್ಯ ಹೋರಾಟಗಾರರ ಉದ್ಯಾನವನ, ಬೆಳಗ್ಗೆ 11.30ಕ್ಕೆ.

■ **ಸಪ್ನ ಬುಕ್ ಹೌಸ್ :** 68ನೇ ಕನ್ನಡ ರಾಜ್ಯೋತ್ಸವದ ಪ್ರಯುಕ್ತ ರಿಯಾಯಿತಿ ಕನ್ನಡ ಪುಸ್ತಕಗಳ ಮಾರಾಟ ಮತ್ತು ಪ್ರದರ್ಶನ, ಸ್ಥಳ: ಸಪ್ನ ಬುಕ್ ಹೌಸ್, ದೇವರಾಜ ಮೊಹಲ್ಲಾ, ಬೆಳಗ್ಗೆ 10 ರಿಂದ.

■ **ಜೆಎಸ್‌ಎಸ್ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್ ಅಂಡ್ ಟೆಕ್ನಾಲಜಿ ಫಾರ್ ವುಮೆನ್ :** ಪದವೀಧರರ ದಿನಾಚರಣೆ, ಮುಖ್ಯ ಅತಿಥಿಗಳು: ಪ್ರೋಸೆಸ್ ಅಂಡ್ ಕ್ವಾಲಿಟಿ ಎಲ್ ಅಂಡ್ ಟಿ ಟೆಕ್ನಾಲಜಿ ಸರ್ವೀಸಸ್ ಗ್ಲೋಬಲ್ ಹೆಡ್ ಶಶಿಧರ್ ಡೋಂಗ್ರೆ, ಗೌರವ ಅತಿಥಿಗಳು: ಶಿಲ್ಪಾ ಬಾಲಗೋಪಾಲನ್, ಅಧ್ಯಕ್ಷತೆ : ಜೆಎಸ್‌ಎಸ್‌ಎಸ್ ಅಧ್ಯಕ್ಷ ಡಾ. ಎಂ. ಜಗನ್ನಾಥ ಶೆಣೈ, ಕಾರ್ಯದರ್ಶಿ ಶ್ರೀಮತಿ ವನಜಾ ಬಿ.ಪಂಡಿತ್, ಸ್ಥಳ: ಎಂ.ಗೋವಿಂದರಾವ್ ಮೆಮೋರಿಯಲ್ ಹಾಲ್, ಬೆಳಗ್ಗೆ 10ಕ್ಕೆ.

■ **ರಾಷ್ಟ್ರಭಾರತಿ ಚಾರಿಟೆಬುಲ್ ಟ್ರಸ್ಟ್:** ಕನ್ನಡ ಹಬ್ಬ, ಬೆಳಗ್ಗೆ 10.30 ರಿಂದ ಶಾಲಾ ಕಾಲೇಜು ವಿದ್ಯಾರ್ಥಿಗಳಿಗೆ ಸಮೂಹ ನೃತ್ಯ ಸ್ಪರ್ಧೆ, ಸಂಜೆ 4.30 ರಿಂದ ತಾಯಿ ಭಾರತಿಗೆ ಕನ್ನಡದಾರತಿ–ಕನ್ನಡ ಗೀತೆಗಳು, ನಿರ್ದೇಶನ: ಶ್ರೀಮತಿ ಗೌರವ್ ಸುಧಾ ಮುರಳಿ ಮತ್ತು ತಂಡ, ಸಂಜೆ 5.30 ರಿಂದ ಕನ್ನಡ ಸಂವಾದ, ಉಪಸ್ಥಿತರು :ಡಾ. ರೋಹಿಣಾಕ್ಷ ಶಿರ್ಲಾಲು, ಡಾ.ಹೆಚ್.ಆರ್. ಪವಿತ್ರ, ವಿಷಯ : ಭಾರತ–ಕರ್ನಾಟಕ ಸಮನ್ವಯ, ಕುವೆಂಪು ಮಾದರಿ, ಸಂಜೆ 7ರಿಂದ ಸಾಂಸ್ಕೃತಿಕ ಕಾರ್ಯಕ್ರಮ, ಮರ್ಸಿ ಕಾನ್ವೆಂಟ್ ಮಕ್ಕಳಿಂದ ನೃತ್ಯ, ರಶ್ಮಿ ಅದೀಶ್ ಅವರಿಂದ ಕನ್ನಡ ಗೀತೆಗಳು, ಎಫ್.ಎಂ. ಖ್ಯಾತಿಯ ಅವಿನಾಶ್ ಅವರಿಂದ ಒಂದು ಸಂಜೆ, ಸ್ಥಳ : ಕಲಾಮಂದಿರ.

■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಮಹಿಪಾಲಾನಂದ ಅವರಿಂದ ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ವಸುಂಧರ ಪ್ರದರ್ಶಕ ಕಲೆಗಳ ಕೇಂದ್ರ :** ವಸುಂಧರೋತ್ಸವ–2023, ರಾಷ್ಟ್ರ ಮಟ್ಟದ ಶಾಸ್ತ್ರೀಯ ನೃತ್ಯ ಮತ್ತು ಸಂಗೀತ ಹಬ್ಬ, ಉದ್ಘಾಟನೆ : ರಾಜವಂಶಸ್ಥರಾದ ಕುಮಾರಿ ಕಾಮಾಕ್ಷಿದೇವಿ, ಮುಖ್ಯ ಅತಿಥಿಗಳು : ಶ್ರೀಮತಿ ಪೂರ್ಣಾದೇವಿ ಕೆ. ಅರಸ್, ಮಾಜಿ ಶಾಸಕ ವಾಸು, ಗೌರವ ಅತಿಥಿಗಳು : ರೋಟರಿ ಉತ್ತರ ಮೈಸೂರು ಅಧ್ಯಕ್ಷ ರೋಟೇರಿಯನ್ ಎಂ.ಕೆ. ಶ್ರೀಧರ್, ಅಧ್ಯಕ್ಷತೆ : ವಿಪಿಎಸಿ ಮತ್ತು ಸಿ ಟ್ರಸ್ಟ್ ಅಧ್ಯಕ್ಷರಾದ ಶ್ರೀಮತಿ ಸವಿತಾ ರಮೇಶ್, ಕಾರ್ಯಕ್ರಮ ಪಾವನಗಂಗಾ, ವಿದುಷಿ ಡಾ. ವಸುಂಧರಾ ದೊರೆಸ್ವಾಮಿ ಅವರಿಂದ ಭರತನಾಟ್ಯ (ವಸುಂಧರ ಬಾನಿ), ಪರಿಕಲ್ಪನೆ ಹಾಗೂ ಸಾಹಿತ್ಯ : ವಿದುಷಿ ಡಾ.ಜ್ಯೋತಿ ಶಂಕರ್, ಸ್ಥಳ: ಶ್ರೀ ನಾದಬ್ರಹ್ಮ ಸಂಗೀತ ಸಭಾ, ಜೆಎಲ್‌ಬಿ ರಸ್ತೆ, ಸಂಜೆ 6ಕ್ಕೆ.

■ **ಜೆಪಿಐಇಆರ್ ರಂಗ ತಂಡ :** ಜೆಪಿಐಇಆರ್ ತಂಡದಿಂದ ಡಾ. ಹೆಚ್.ಎಸ್. ಶಿವಪ್ರಕಾಶ್ ರಚಿಸಿರುವ ಮಂಟೇಸ್ವಾಮಿ ಕಥಾ ಪ್ರಸಂಗ ನಾಟಕ ಪ್ರದರ್ಶನ, ನಿರ್ದೇಶನ : ಮೈಮ್ ರಮೇಶ್, ಸ್ಥಳ: ಕಿರು ರಂಗಮಂದಿರ, ಕಲಾಮಂದಿರ, ಸಂಜೆ 6.30ಕ್ಕೆ.

# ಮೈಸೂರು ಸೇರಿದಂತೆ ಎಲ್ಲಾ ಜಿಲ್ಲೆಗಳಲ್ಲಿ 3 ತಿಂಗಳಲ್ಲಿ ಆಸ್ತಿ ಸಮೀಕ್ಷೆ ಪೂರ್ಣಗೊಳಿಸಿ

● ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ಆದೇಶ ● ಇಲಾಖಾ ಕಾರ್ಯದರ್ಶಿಗೆ ಸುತ್ತೋಲೆ ಹೊರಡಿಸಲು ಸೂಚನೆ ● ಪಂಚಾಯತ್ ರಾಜ್ಯ ಇಲಾಖೆ ಪ್ರಗತಿ ಕುಂಠಿತಕ್ಕೆ ಕಿಡಿ ● ವರ್ಗಾವಣೆಗೆ ಜಾಂಡಾ ಹೂಡುತ್ತೀರಾ... ● ಹಳೇ ಮೈಸೂರಿಗಿಂತ ನಾವೇ ಮೇಲು ● ಸಬೂಬು ಹೇಳಿದರೆ ಕ್ಷಮೆ ಇಲ್ಲ



ಮೈಸೂರು, ನ.3(ಬಿಎಲ್‌ಯು)– ಮೈಸೂರು, ಮಂಡ್ಯ, ಚಾಮರಾಜನಗರ, ಹಾಸನ ಸೇರಿದಂತೆ ಕರ್ನಾಟಕದ ಎಲ್ಲಾ ಜಿಲ್ಲೆಗಳ ಗ್ರಾಮೀಣ ಪ್ರದೇಶಗಳಲ್ಲಿ ಆಸ್ತಿಗಳ ಸಮೀಕ್ಷೆಯನ್ನು ಮೂರು ತಿಂಗಳಲ್ಲಿ ಪೂರ್ಣಗೊಳಿಸಬೇಕು ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಅಧಿಕಾರಿಗಳಿಗೆ ತಾಕೀತು ಮಾಡಿದ್ದಾರೆ.

ಮೈಸೂರಿನ ಜಿಲ್ಲಾ ಪಂಚಾಯತ್ ಕಚೇರಿಯ ಡಿ.ದೇವರಾಜ ಅರಸ್ ಸಭಾಂಗಣದಲ್ಲಿ ಇಂದು ಇಲಾಖೆಯ ಪ್ರಗತಿ ಪರಿಶೀಲನೆ ನಡೆಸಿದ ಅವರು, ಮೈಸೂರು ಜಿಲ್ಲೆಯಲ್ಲಿ ಆಸ್ತಿಗಳ ಸಮೀಕ್ಷೆ ಕುಂಠಿತವಾಗಿರುವುದಕ್ಕೆ ಅಧಿಕಾರಿಗಳನ್ನು ತೀವ್ರವಾಗಿ ತರಾಟೆಗೆ ತೆಗೆದುಕೊಂಡರು.

ಮೈಸೂರು ಜಿಲ್ಲೆಯಲ್ಲಿ 256 ಗ್ರಾಮ ಪಂಚಾಯಿತಿಗಳಿದ್ದು, ಒಟ್ಟು 7,36,088 ಆಸ್ತಿಗಳಿವೆ. ಆದರೆ ಇದರಲ್ಲಿ ಶೇಕಡ 53.01 ರಷ್ಟು ಆಸ್ತಿಗಳ ಸಮೀಕ್ಷೆಯಾಗಿದೆ. ಹಾಗಾದರೆ ಪೂರ್ಣ ಪ್ರಮಾಣದಲ್ಲಿ ಆಸ್ತಿಗಳ ಸಮೀಕ್ಷೆ ಯಾವಾಗ ಮಾಡುತ್ತೀರಾ. ಆಸ್ತಿ ಸಮೀಕ್ಷೆ ಮಾಡದಿದ್ದರೆ ಕಂದಾಯ ಹೇಗೆ ವಸೂಲಿ ಮಾಡುತ್ತೀರಾ ಎಂದು ಪ್ರಶ್ನಿಸಿದರು.

ಮೈಸೂರು ಮಾತ್ರವಲ್ಲದೆ ಇಡೀ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಇನ್ನು ಮೂರು ತಿಂಗಳಲ್ಲಿ ಆಸ್ತಿಗಳ ಸಮೀಕ್ಷೆ ಮುಗಿಸಬೇಕು. ಈ ಸಂಬಂಧ ಕೂಡಲೇ ಸುತ್ತೋಲೆ ಹೊರಡಿಸಿ ಎಂದು ಸಭೆಯಲ್ಲಿ ಹಾಜರಿದ್ದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಕಾರ್ಯದರ್ಶಿ ಪ್ರಿಯಾಂಕಗೆ ಸಚಿವರು ಸ್ಥಳದಲ್ಲೇ ಆದೇಶ ನೀಡಿದರು.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಯೋಜನೆಗಳ ಪ್ರಗತಿ ಪರಿಶೀಲನೆ ಮಾಡಿದ ವೇಳೆ ಎಲ್ಲಾ ವಿಭಾಗಗಳಲ್ಲಿ ಪ್ರಗತಿ ಕುಂಠಿತವಾಗಿರುವ ಅಂಕಿ ಅಂಶ ನೋಡಿ ಕೆಂಡಮಂಡಲ ರಾದ ಪ್ರಿಯಾಂಕ್ ಖರ್ಗೆ, ಯಾವುದೇ ವಿಚಾರದ ಪ್ರಗತಿ ನೋಡಿದರೂ ಶೇಕಡ 50 ಮೀರಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಹಳೇ ಮೈಸೂರು ಭಾಗದವರು ಪ್ರಬುದ್ಧರಿದ್ದೀರಾ. ಅಭಿವೃದ್ಧಿಯಲ್ಲಿ ನಿಮ್ಮ ಸರಿಸಮಾನರಾಗಿ ನಾವು ಬರಬೇಕು ಎಂದು ಹೈದರಾಬಾದ್ ಕರ್ನಾಟಕಕ್ಕೆ 371 ಜೆ ಸ್ಥಾನಮಾನ ಪಡೆದಿದ್ದೇವೆ. ಆದರೆ ನಿಮ್ಮ ಪ್ರಗತಿ ನೋಡಿದರೆ ನಮ್ಮ ಹೈದರಾಬಾದ್ ಕರ್ನಾಟಕದ ಪ್ರಗತಿಯೇ ಪರವಾಗಿಲ್ಲ ಎಂದರು.

ಹಲವು ಇಲಾಖೆಗಳಲ್ಲಿ ಅಧಿಕಾರಿಗಳು ಹಾಗೂ ಸಿಬ್ಬಂದಿಗಳಿಂದ 1 ಕೋಟಿ 81 ಲಕ್ಷ ದುರುಪಯೋಗವಾಗಿದೆ. ಆದರೆ ಈ ತನಕ ಯಾರ ವಿರುದ್ಧವೂ ಕ್ರಮ ಕೈಗೊಂಡಿಲ್ಲ. ಎಲ್ಲಾ ವಿಚಾರಣೆ ತನಿಖಾ ಹಂತದಲ್ಲಿದೆ ಎಂದು ಸಬೂಬು ಹೇಳುತ್ತೀರಾ ಎಂದು ಕಿಡಿಕಾರಿದರು.

ಬಾಕಿ ಪ್ರಕರಣಗಳ ಬಗ್ಗೆ ಬೇಗ ತನಿಖೆ ಮಾಡಬೇಕು. ಹಣ ದುರುಪಯೋಗ ಮಾಡಿಕೊಂಡಿರುವವರು ಕೆಲಸದಲ್ಲಿ ಇರುವಾಗಲೇ ಆ ಹಣವನ್ನು ಅವರಿಂದ ವಸೂಲಿ ಮಾಡಬೇಕು, ಅವರು ನಿವೃತ್ತರಾದ ಮೇಲೆ ಏನು ಮಾಡಲು ಆಗುವುದಿಲ್ಲ. ಹಾಗೆ ಬಿಟ್ಟರೆ ಇಲಾಖೆಗೆ ಕೆಟ್ಟ ಹೆಸರು ಬರುತ್ತದೆ. ಇನ್ನು ಮುಂದೆ ಎಲ್ಲೇ ಭ್ರಷ್ಟಾಚಾರ ನಡೆದರೂ ಮುಲಾಜಿಲ್ಲದೆ ಅಮಾನತು ಮಾಡುತ್ತೇವೆ ಎಂದು ಪ್ರಿಯಾಂಕ್ ಖರ್ಗೆ ಎಚ್ಚರಿಸಿದರು.

ಕುಡಿಯುವ ನೀರಿನ ಯೋಜನೆಯ ಕಾಮಗಾರಿ ಕುಂಠಿತವಾಗಿರುವ ಬಗ್ಗೆ ಅಧಿಕಾರಿಗಳನ್ನು ಮತ್ತೆ ತರಾಟೆಗೆ ತೆಗೆದುಕೊಂಡ ಪ್ರಿಯಾಂಕ್ ಖರ್ಗೆ, ನಾನು ಈಗ ವರ್ಗಾವಣೆಯಾಗಿ ಬಂದಿದ್ದೇನೆ ಎಂದು ಸಮಜಾಯಿಷಿ ನೀಡುತ್ತೀರಾ. ನಾನು ನಿನ್ನೆ ಬಂದೆ, ಮೊನ್ನೆ ಬಂದೆ ಎಂದು ಹೇಳಿದರೆ ಕ್ಷಮೆ ನೀಡುವುದಿಲ್ಲ. ನಾನು ಎಂಎಲ್‌ಎ ಆಗಿ ಆರು ತಿಂಗಳಾಗಿದೆ ಎಂದು ಜನರಿಗೆ ಹೇಳಿದರೆ ಕೇಳುತ್ತಾರೆಯೇ ಎಂದು ಪ್ರಶ್ನಿಸಿದರು.

ನಿಮಗೆ ಬೇಕಾದ ಸ್ಥಾನಕ್ಕೆ ವರ್ಗಾವಣೆ ಆಗಬೇಕಾದರೆ ಮೂರು ತಿಂಗಳು ಬೆಂಗಳೂರಿನಲ್ಲೇ ಜಾಂಡ ಹೂಡುತ್ತೀರಾ. ಇಲ್ಲಿ ಮೂರು ದಿನ ಕೆಲಸ ಮಾಡುವುದಿಲ್ಲ. ಹೋಗಲಿ ಪ್ರಗತಿ ಪರಿಶೀಲನಾ ಸಭೆಗೆ ಸಿದ್ಧತೆ ಮಾಡಿಕೊಳ್ಳಲು ಮೂರು ದಿನ ಸಮಯ ವಿನಿಯೋಗ ಮಾಡುವುದಿಲ್ಲ. ಇನ್ನು ಮುಂದೆ ಹೀಗೆ ಬೇಜವಾಬ್ದಾರಿ ತೋರಿದರೆ ಮುಲಾಜಿಲ್ಲದೆ ಅಮಾನತು ಮಾಡಲಾಗುವುದು ಎಂದು ಪ್ರಿಯಾಂಕ್ ಖರ್ಗೆ ಮತ್ತೊಮ್ಮೆ ಎಚ್ಚರಿಸಿದರು.

ಏಕ ಗ್ರಾಮ ಕುಡಿಯುವ ನೀರಿನ ಯೋಜನೆಯಲ್ಲಿ ಕೆಲವು ಗ್ರಾಮಗಳಲ್ಲಿ ಕಾಮಗಾರಿ ಆರಂಭಿಸಲು ಟೆಂಡರ್ ಪಡೆಯಲು ಗುತ್ತಿಗೆದಾರರು ಮುಂದೆ ಬಂದಿಲ್ಲ ಎಂದು ಅಧಿಕಾರಿಗಳು ಸ್ಪಷ್ಟನೆ ನೀಡಿದಾಗ ಕೋಪೋದ್ರಿಕ್ತರಾದ ಪ್ರಿಯಾಂಕ್ ಖರ್ಗೆ, ನಿಮಗೆ ಬೇಕಾದ ಗುತ್ತಿಗೆದಾರರು ಟೆಂಡರ್ ಪಡೆಯಲಿಲ್ಲ ಅಂದರೆ ಮತ್ತೆ ಮತ್ತೆ ಟೆಂಡರ್ ಕರೆಯುತ್ತೀರಾ. ಇಷ್ಟೇ ಕಾರಣ ಎಂದು ಕಿಡಿಕಾರಿದರು. ಗುತ್ತಿಗೆದಾರರು ನಿಗದಿತ ಸಮಯದಲ್ಲಿ ಕಾಮಗಾರಿ ಪೂರ್ಣಗೊಳಿಸಬೇಕು. ಇಲ್ಲದಿದ್ದರೆ ಅಂತಹ ಗುತ್ತಿಗೆದಾರರನ್ನು ಬ್ಲ್ಯಾಕ್ ಲೀಸ್ಟ್‌ಗೆ ಸೇರಿಸಲಾಗುವುದು. ಬ್ಲ್ಯಾಕ್ ಲೀಸ್ಟ್‌ಗೆ ಸೇರಿಸುವ ಗುತ್ತಿಗೆದಾರರ ಪಟ್ಟಿಯನ್ನು ನಾಳೆಯೇ ನನಗೆ ಕಳುಹಿಸಿ, ಬ್ಲ್ಯಾಕ್ ಲೀಸ್ಟ್ ಸೇರಿಸಿ ನಾನೇ ಆದೇಶ ಮಾಡುತ್ತೇನೆ ಎಂದು ತಿಳಿಸಿದರು. ಕಂದಾಯ ಸಂಗ್ರಹ ಕೂಡ ಬಹಳ ಕಡಿಮೆಯಾಗಿದೆ. ಹೀಗಾದರೆ ನಾವು ಗುರಿ ಮುಟ್ಟುವುದು ಹೇಗೆ ಎಂದು ಪ್ರಶ್ನಿಸಿದ ಪ್ರಿಯಾಂಕ್ ಖರ್ಗೆ, ನಮ್ಮ ಇಲಾಖೆಯಿಂದ 2 ಸಾವಿರ ಕೋಟಿ ಕಂದಾಯ ಸಂಗ್ರಹಿಸುವುದಾಗಿ ಮುಖ್ಯಮಂತ್ರಿಗಳಿಗೆ ಹೇಳಿದ್ದೇನೆ. ನೀವು ಪೂರ್ಣ ಪ್ರಮಾಣದಲ್ಲಿ ಕಂದಾಯ ಸಂಗ್ರಹ ಮಾಡದಿದ್ದರೆ ಗುರಿ ಸಾಧಿಸುವುದು ಹೇಗೆ ಎಂದು ಮರು ಪ್ರಶ್ನಿಸಿದರು.

ಗಿರಿಜನರು ತಯಾರಿಸುವ ವಸ್ತುಗಳಿಗೆ ಸೂಕ್ತ ಮಾರುಕಟ್ಟೆ ಒದಗಿಸಬಹುದು ಎಂದು ಹೇಳುವುದಲ್ಲ, ಮಾರುಕಟ್ಟೆ ಒದಗಿಸುತ್ತೇವೆ ಎಂದು ಹೇಳಿ. ಇನ್ನು ಮೂರು ತಿಂಗಳಾದ ಮೇಲೆ ಮತ್ತೆ ಸಮಜಾಯಿಸಿ ನೀಡಬೇಡಿ, ಈ ವಿಚಾರದ ಬಗ್ಗೆ ಮತ್ತೆ ಚರ್ಚೆ ಮಾಡುವಂತೆ ಮಾಡಬೇಡಿ. ಮುಂದಿನ ಸಭೆ ವೇಳೆಗೆ ಪ್ರಗತಿ ಸಾಧಿಸಿರಬೇಕು ಎಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಾಹಣಾಧಿಕಾರಿ ಗಾಯತ್ರಿ ಅವರಿಗೆ ಸೂಚಿಸಿದರು. ಶಾಸಕರಾದ ಕೆ.ಹರೀಶ್ ಗೌಡ, ರವಿಶಂಕರ್, ದರ್ಶನ್ ಧ್ರುವ ನಾರಾಯಣ್, ಜಿ.ಡಿ.ಹರೀಶ್ ಗೌಡ, ಸಿ.ಎನ್.ಮಂಜೇಗೌಡ, ಡಾ. ತಿಮ್ಮಯ್ಯ ಸೇರಿದಂತೆ ಹಲವು ಅಧಿಕಾರಿಗಳು ಸಭೆಯಲ್ಲಿ ಉಪಸ್ಥಿತರಿದ್ದರು.

## ಸಚಿವರು ಗಂಭೀರ ಚರ್ಚೆಯಲ್ಲಿ ತೊಡಗಿದ್ದರೆ ಶಾಲಾ ಮಕ್ಕಳಂತೆ ಹರಟೆ ಹೊಡೆಯುತ್ತಿದ್ದ ಅಧಿಕಾರಿಗಳು!

### ನೀವೇನು ಕತ್ತೆ ಕಾಯಕ್ಕೆ ಬರುತ್ತೀರೇನ್ರಿ...: ಸಚಿವರ ಆಕ್ರೋಶ

ಮೈಸೂರು, ನ.3(ಬಿಎಲ್‌ಯು)–ಸಚಿವರನ್ನು ಯಾಮಾರಿಸಿದ ಅಧಿಕಾರಿಗಳು... ನಂಬರ್ ಗೇಮ್ ಆಟ... ಸ್ಲೋ ಇದ್ದೇವೆ... ಹಾಗಂತ ದಡ್ಡರಲ್ಲ... ನೀವು ತೀಸ್ ಮಾರ್... ಹಾಗಾದ್ರೆ ನಾವೇನು... ಮೈಸೂರಿನವರು ಏನು ಮಂತ್ರ ಮಾಡ್ತೀರೀ... ಕತ್ತೆ ಕಾಯಲು ಬರುತ್ತೀರಾ... ಭವಿಷ್ಯ, ಭೂತ ಕಾಲ ಹೇಳಬೇಡ್ರಿ... ಆಕಾಶವಾಣಿ ಯಾರು ಕೇಳಲ್ಲ... ಎಲ್ಲಾ ಎಫ್ ಎಂ ಕೇಳ್ತಾರೆ...

ಮೈಸೂರಿನ ಜಿಲ್ಲಾ ಪಂಚಾಯತ್ ಕಚೇರಿಯ ಡಿ.ದೇವರಾಜ್ ಅರಸ್ ಸಭಾಂಗಣದಲ್ಲಿ ಇಂದು ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಅವರು ನಡೆಸಿದ ಇಲಾಖೆಯ ಪ್ರಗತಿ ಪರಿಶೀಲನಾ ಸಭೆಯಲ್ಲಿ ಕೇಳಿಬಂದ ಎಚ್ಚರಿಕಾ ನುಡಿಗಳು.

ಉದ್ಯೋಗ ಖಾತ್ರಿ ಯೋಜನೆಯಲ್ಲಿ ಮಾನವ ದಿನಗಳ ಬಗ್ಗೆ ಪ್ರಿಯಾಂಕ್ ಖರ್ಗೆ ಅವರಿಗೆ ಅಧಿಕಾರಿಗಳು ಮಾಹಿತಿ ನೀಡುತ್ತಾ, ಮೈಸೂರಿನ ನರಸೀಪುರದಲ್ಲಿ ಶೇಕಡ 57 ರಷ್ಟು ಗುರಿ ಇದ್ದರೆ, ಶೇಕಡ 43 ರಷ್ಟು ಪ್ರಗತಿ ಸಾಧಿಸಲಾಗಿದೆ. ನಂಜನಗೂಡಿನಲ್ಲಿ ಶೇಕಡ 59 ಗುರಿ ಇದ್ದರೆ, ಶೇಕಡ 44 ರಷ್ಟು ಪ್ರಗತಿ ಸಾಧಿಸಲಾಗಿದೆ. ಇನ್ನು ಪಿರಿಯಾಪಟ್ಟಣದಲ್ಲಿ ಶೇ. 60 ಗುರಿ ಇದ್ದರೆ ಶೇ.45 ರಷ್ಟು ಪ್ರಗತಿ ಸಾಧಿಸಲಾಗಿದೆ ಎಂದು ಸಂಬಂಧಿಸಿದ ಇಲಾಖಾ ಅಧಿಕಾರಿ ಈ ಎಲ್ಲಾ ಅಂಕಿ ಅಂಶಗಳನ್ನು ಪವರ್ ಪಾಯಿಂಟ್ ಪ್ರೆಸೆಂಟೇಷನ್‌ನಲ್ಲಿ ನೀಡಲಾಗಿತ್ತು. ತರುವಾಯ ತಮಗೆ ನೀಡಲಾಗಿದ್ದ ಅಜೆಂಡಾ ಪುಸ್ತಕದ ಅಂಶಗಳನ್ನು ಪ್ರಿಯಾಂಕ್ ಖರ್ಗೆ ನೋಡಿದಾಗ ಅವರಿಗೆ ಶಾಕ್ ಆಯಿತು. ತಮಗೆ ಕೊಟ್ಟಿರುವ ಮಾಹಿತಿಗೂ ಇಲ್ಲಿ ನೀಡುತ್ತಿರುವ ಮಾಹಿತಿಗೂ ಅಜಗಜಾಂತರ ವ್ಯತ್ಯಾಸವಿತ್ತು. ಒಂದು ಕಡೆ ಕೋಪ, ಮತ್ತೊಂದು ಕಡೆ ಅಚ್ಚರಿಯಿಂದ, ಎರಡು ಮಾಹಿತಿಯನ್ನು ನೀವೇ ಕೊಟ್ಟಿದ್ದೀರಾ, ಹಾಗಾದರೆ ಯಾವುದು ನಿಜ, ಯಾವುದು ಸುಳ್ಳು ಎಂದು ಪ್ರಶ್ನಿಸಿದರು.

ನೀವು ನೀಡಿರುವ ಮಾಹಿತಿ ವೈಜ್ಞಾನಿಕವಾಗಿಲ್ಲ, ಜೊತೆಗೆ ಪ್ರಗತಿಯೂ ಇಲ್ಲ. ಇಲ್ಲಿ 50 ಇರೋದು, ಅಲ್ಲಿ 100 ಆಗಿದೆ, ಹೀಗಾದರೆ ಹೇಗೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ತರುವಾಯ ಸಂಜೀವಿನಿ ಕಟ್ಟಡದ ಮಾಹಿತಿಯನ್ನು ಹೋಲಿಕೆ ಮಾಡಿದರೆ ಅದರಲ್ಲೂ ವ್ಯತ್ಯಾಸವಿತ್ತು. ಮೈಸೂರಿನವರು ಏನು ಮಂತ್ರ ಮಾಡುತ್ತೀರಾ ರೀ ನೀವು. ನಾನು ರಾತ್ರಿ ಮಲಗಿ ಬೆಳಿಗ್ಗೆ ಎದ್ದು ಬರುವಷ್ಟರಲ್ಲಿ ಎಲ್ಲಾ ಉಲ್ಟಾ ಮಾಡಿದ್ದೀರಾ ಎಂದು ಪ್ರಿಯಾಂಕ್ ಖರ್ಗೆ ಆಶ್ಚರ್ಯ ವ್ಯಕ್ತಪಡಿಸಿದರು.

ಮಹಾತ್ಮ ಗಾಂಧಿ ನರೇಗಾ ಯೋಜನೆಯಲ್ಲಿ ಎಲ್ಲಾ ವಿವರ ಇದೆ. ಆದರೆ ಮನೆ ನಿರ್ಮಾಣದ ಬಗ್ಗೆ ಮಾಹಿತಿನೆ ಇಲ್ಲ. ಹಾಗಾದರೆ ಮನೆ ನಿರ್ಮಾಣ ಮಾಡಿಲ್ಲವೆ ಎಂದು ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡ ಪ್ರಿಯಾಂಕ್ ಖರ್ಗೆ, ನಾವು ಸ್ಲೋ ಇದ್ದೇವೆ. ಆದರೆ ಅಷ್ಟೇನು ದಡ್ಡರಲ್ಲ. ನೀವು ಎಸಗಿರುವ ಎಲ್ಲಾ ಲೋಪಗಳು ನನಗೆ ಗೊತ್ತಾಗುತ್ತೆ ಎಂದು ಕಿಡಿಕಾರಿದರು. ಇಲಾಖೆಯ ಯಾವುದೇ ವಿಭಾಗ ತೆಗೆದುಕೊಂಡರೂ ಅಂಕಿ ಅಂಶಗಳ ವ್ಯತ್ಯಾಸವಿದೆ. ಇದು ನನಗೆ ಗೊತ್ತಾಗಲ್ಲ ಅಂದುಕೊಂಡಿದ್ದೀರಾ. ನೀವು ತೀಸ್ ಮಾರ್ (ಚಾಣಾಕ್ಷ), ಹಾಗಾದರೆ ನಾವು ಏನು ಎಂದು ಕೋಪೋದ್ರಿಕ್ತರಾಗಿ ಪ್ರಶ್ನಿಸಿದರು.

ಕುಡಿಯುವ ನೀರಿನ ಯೋಜನೆ ರೂಪಿಸುವ ಕೆಲವು ಕಾಮಗಾರಿಗೆ ಇನ್ನು ಡಿಪಿಆರ್ ಸಿದ್ಧಪಡಿಸಿಲ್ಲವೇಕೆ ಎಂದು ಪ್ರಿಯಾಂಕ್ ಖರ್ಗೆ ಪ್ರಶ್ನಿಸಿದಾಗ, ಅಧಿಕಾರಿಗಳು ಹಾರಿಕೆಯ ಉತ್ತರ ನೀಡಿದರು. ಅಲ್ಲಾ ರೀ, ಡಿಪಿಆರ್ ಸಿದ್ಧ ಮಾಡಲು ವಿಳಂಬ ಯಾಕೆ ಆಯಿತು ಅಂತ ನಾನು ಇಂಗ್ಲಿಷ್‌ನಲ್ಲಿ ಕೇಳಿದರೆ, ನೀವು ಕನ್ನಡದಲ್ಲಿ ಅದೇ ಮಾತನ್ನು ಉಲ್ಟಾ ಮಾಡಿ ಹೇಳುತ್ತೀರಾ, ಭವಿಷ್ಯ, ಭೂತ ಕಾಲದ ಮಾತು ಹೇಳುವುದಲ್ಲ. ವರ್ತಮಾನದಲ್ಲಿ ಏನು ಆಗಿದೆ ಎಂದು ಹೇಳಿ ಎಂದು ತರಾಟೆಗೆ ತೆಗೆದುಕೊಂಡರು.

ಪ್ರಿಯಾಂಕ್ ಖರ್ಗೆಯವರು ಗಂಭೀರ ಚರ್ಚೆಯಲ್ಲಿ ತೊಡಗಿರುವಾಗ ಕೆಲವು ಅಧಿಕಾರಿಗಳು ಗುಸು ಗುಸು ಅಂತ ಮಾತನಾಡುತ್ತಿದ್ದರು. ಇದನ್ನು ಗಮನಿಸಿದ ಸಚಿವರು, ನಾನು ಸೀರಿಯಸ್ ಆಗಿ ಮಾತನಾಡುತ್ತಿದ್ದರೆ, ನೀವು ಹರಟೆ ಹೊಡೆಯುತ್ತಿದ್ದೀರಲ್ಲ, ಕತ್ತೆ ಕಾಯಲು ಇಲ್ಲಿಗೆ ಬರುತ್ತೀರೇನ್ರಿ, ಚಿಕ್ಕ ಮಕ್ಕಳಂತೆ ಮಾತನಾಡುತ್ತೀರಲ್ಲ, ಮೊದಲು ನಿಮ್ಮ ವರ್ತನೆ ಬದಲಿಸಿಕೊಳ್ಳಿ ಎಂದು ತಾಕೀತು ಮಾಡಿದರು.

ತೋಟಗಾರಿಕೆ ಇಲಾಖೆಯ ಯೋಜನೆಗಳ ಬಗ್ಗೆ ಆಕಾಶವಾಣಿಯಲ್ಲಿ ಪ್ರಚಾರ ಮಾಡುತ್ತಿದ್ದೇವೆ ಎಂದು ಅಧಿಕಾರಿಯೊಬ್ಬರು ಹೇಳಿದರು. ಈಗ ಸೋಷಿಯಲ್ ಮೀಡಿಯಾ ತುಂಬಾ ಪ್ರಭಾವವಾಗಿದೆ. ಅದನ್ನು ಬಳಸಿಕೊಂಡು ಪ್ರಚಾರ ಮಾಡಬೇಕು. ಎಫ್ ಎಂ ಆದರೆ ಕೇಳುತ್ತಾರೆ, ಆಕಾಶವಾಣಿ ಯಾರು ಕೇಳುತ್ತಾರೆ ಎಂದು ಕೆ.ಆರ್.ನಗರ ಶಾಸಕ ರವಿಶಂಕರ್ ಹೇಳಿದರು.

ಬಹಳಷ್ಟು ಜನರು ಆಕಾಶವಾಣಿಯ ಕಾರ್ಯಕ್ರಮಗಳನ್ನು ಈಗಲೂ ಆಲಿಸುತ್ತಾರೆ. ಬೆಳಿಗ್ಗೆ 7 ರಿಂದ 9 ಗಂಟೆ ತನಕ ನಾನು ಆಕಾಶವಾಣಿ ಕಾರ್ಯಕ್ರಮ ಆಲಿಸುತ್ತೇನೆ ಎಂದು ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಸ್ಪಷ್ಟಪಡಿಸಿದರು.

ಮೈಸೂರಿನ ಚಾಮುಂಡಿಬೆಟ್ಟ ಹಾಗೂ ನಂಜನಗೂಡು ದೇವಸ್ಥಾನದ ಹೂವಿನ ತ್ಯಾಜ್ಯದಿಂದ ಗಂಧದ ಕಡ್ಡಿ ತಯಾರು ಮಾಡಲು ಚಿಂತನೆ ಇದೆ. ಈ ಸಂಬಂಧ ಸೈಕಲ್ ಅಗರ ಬತ್ತಿ ಕಂಪನಿಯವರ ಜೊತೆ ಮಾತುಕತೆ ನಡೆಸುತ್ತಿದ್ದೇನೆ ಪ್ರಿಯಾಂಕ್ ಖರ್ಗೆ ತಿಳಿಸಿದರು.

## ರಾಜಸ್ಥಾನದಲ್ಲಿ ಎಸಿಬಿಯಿಂದ ಇಬ್ಬರು ಇಡಿ ಅಧಿಕಾರಿಗಳ ಬಂಧನ

ಜೈಪುರ, ನ.3–ರಾಜಸ್ಥಾನ ಭ್ರಷ್ಟಾಚಾರ ನಿಗ್ರಹ ದಳ(ಎಸಿಬಿ) ಗುರುವಾರ ಅಲ್ವಾರ್‌ನಲ್ಲಿ ಇಡಿ ಅಧಿಕಾರಿ ನೌಲ್ ಕಿಶೋರ್ ಮೀನಾ ಮತ್ತು ಅವರ ಸಹಾಯಕರನ್ನು ಬಂಧಿಸಿದೆ. ಮಣಿಪುರದ ಚಿಟ್ ಫಂಡ್ ಕಂಪನಿಯೊಂದರ ಪ್ರಕರಣಕ್ಕೆ ಸಂಬಂಧಿಸಿದಂತೆ ಸಂತ್ರಸ್ತ ಮಹಿಳೆಗೆ 17 ಲಕ್ಷ ರೂ. ನೀಡುವಂತೆ ಒತ್ತಾಯಿಸುತ್ತಿದ್ದ ವೇಳೆ ದಾಳಿ ನಡೆಸಿದ ಇಡಿ ಇನ್ಸ್‌ಪೆಕ್ಟರ್ ಅನ್ನು ವಶಕ್ಕೆ ಪಡೆಯಲಾಗಿದೆ ಎಂದು ಎಸಿಬಿ ಹೇಳಿಕೊಂಡಿದೆ.

## ನಕ್ಕರೆ ಅದೇ ಸ್ವರ್ಗ

ಆತ : "ಸಾರ್, ನೀವು ಕೊಟ್ಟ ಲಕೋಟೆ ಅಂಚೆ ಡಬ್ಬದಲ್ಲಿ ಹಾಕಿ ಬಂದೆ. ಅದರ ಮೇಲೆ ವಿಳಾಸ ಬರೆದಿರಲಿಲ್ಲ"

ಅವರು : "ಮೊದಲೇ ಯಾಕೆ ಹೇಳಬಾರದಿತ್ತು!"

ಆತ : "ನೀವು ಯಾರಿಗೆ ಪತ್ರ ಕಳಿಸ್ತಿದ್ದೀರಿ ಅನ್ನೋದು ನನಗೆ ಸಹ ತಿಳಿಯಬಾರದು ಅಂತ ನೀವು ವಿಳಾಸ ಬರೆದಿಲ್ಲ ಅಂದುಕೊಂಡೆ ಸಾರ್!"

ಮೈಸೂರು ಮಿತ್ರ

ಶನಿವಾರ, 4 ನವೆಂಬರ್ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

### ಅಮೃತವಾಹಿನಿ..........

ಬುದ್ಧಿವಂತರು ತಾವು ಇಚ್ಛಾ ಪೂರ್ವಕವಾಗಿ ಕೈಗೊಂಡ ಕಾರ್ಯವನ್ನು ಕೈಗೂಡುವವರೆಗೂ ಬಿಡುವುದಿಲ್ಲ –ಸಮಯೋಚಿತ ಪದ್ಯಮಾಲಿಕಾ

**ವೇದ ಸುಳ್ಳಾದರೂ ಗಾದೆ ಸುಳ್ಳಾಗದು** { ಎಣ್ಣೆ ಹಾಕಿದರೆ ಕಣ್ಣಿಗೆ ಗುಣ, ಮಣ್ಣು ಹಾಕಿದರೆ ಬುಡಕ್ಕೆ ಗುಣ

## ನಿಮ್ಮ ಪತ್ರಗಳು

### ಲೋಕಾಯುಕ್ತ ದಾಳಿ ಒಂದು ಪ್ರಹಸನವಾಗದಿರಲಿ

ಮಾನ್ಯರೆ,

ಇತ್ತೀಚೆಗೆ ರಾಜ್ಯದ ವಿವಿಧೆಡೆ ಲೋಕಾಯುಕ್ತ ಪೊಲೀಸರು ಮತ್ತು ಅಧಿಕಾರಿಗಳು ದಾಳಿ ನಡೆಸಿದ ಬಗ್ಗೆ ಮಾಧ್ಯಮಗಳಲ್ಲಿ ವರದಿ ಪ್ರಕಟವಾಗಿದೆ. 17 ಸರ್ಕಾರಿ ಅಧಿಕಾರಿಗಳ ಕಚೇರಿ, ನಿವಾಸ ಸೇರಿದಂತೆ 70ಕ್ಕೂ ಹೆಚ್ಚು ಕಡೆ ದಾಳಿ ನಡೆಸಿರುವ ಲೋಕಾಯುಕ್ತ ಪೊಲೀಸರು ಅಪಾರ ಪ್ರಮಾಣದ ನಗದು, ಚಿನ್ನ, ಸ್ಥಿರಾಸ್ತಿ, ಐಷಾರಾಮಿ ವಾಹನಗಳು ಹಾಗೂ ಹೂಡಿಕೆಗಳ ದಾಖಲೆ ಪತ್ರಗಳನ್ನು ವಶಪಡಿಸಿಕೊಂಡಿದ್ದಾರೆ ಎನ್ನಲಾಗಿದೆ. ಲೋಕಾಯುಕ್ತ ದಾಳಿ ಹೊಸದೇನಲ್ಲ. ಲೋಕಾಯುಕ್ತರ ದಾಳಿ ಹೆಚ್ಚಿನ ಮಟ್ಟದಲ್ಲಿ ನಡೆಯುತ್ತಿದ್ದರೂ ಸಹ ಭ್ರಷ್ಟಾಚಾರ ಮಾತ್ರ ನಿಯಂತ್ರಣಕ್ಕೆ ಬರುತ್ತಿಲ್ಲ. ಲೋಕಾಯುಕ್ತ ದಾಳಿ ಕೇವಲ ಪ್ರಚಾರಕ್ಕೆ ಹಾಗೂ ಜನರ ಗಮನವನ್ನು ಬೇರೆಡೆಗೆ ಸೆಳೆಯುವ ತಂತ್ರ ಎಂದು ವಿಶ್ಲೇಷಿಸಲಾಗುತ್ತದೆ. ಏಕೆಂದರೆ, ಲೋಕಾಯುಕ್ತ ಅಥವಾ ಇತರ ತನಿಖಾ ಸಂಸ್ಥೆಗಳ ಕಣ್ಣಿಗೆ ಮಣ್ಣೆರೆಚುವ ತಂತ್ರವನ್ನು ಭ್ರಷ್ಟ ಅಧಿಕಾರಿಗಳು ಮತ್ತು ನೌಕರರು ಚೆನ್ನಾಗಿ ಕರಗತ ಮಾಡಿಕೊಂಡಿರುತ್ತಾರೆ. ಅನೇಕ ಭ್ರಷ್ಟ ಅಧಿಕಾರಿಗಳಿಗೆ ಅಧಿಕಾರಸ್ಥರ ಜೊತೆ ನಂಟು ಇರುವುದರಿಂದ, ಆರೋಪಿಗಳು ಪ್ರಭಾವ ಬಳಸಿ, ಲೋಕಾಯುಕ್ತರ ತನಿಖೆಯಿಂದ ನಿರಾಯಾಸವಾಗಿ ಹೊರ ಬರುತ್ತಿದ್ದಾರೆ. ಆರೋಪಿಗಳಿಗೆ ಶಿಕ್ಷೆ ಆಗುವ ಹೊತ್ತಿಗೆ ಈ ಸರ್ಕಾರ ಬಿದ್ದು ಮತ್ತೊಂದು ಪಕ್ಷದ ಸರ್ಕಾರವೇ ಅಧಿಕಾರಕ್ಕೆ ಬರಬಹುದು. ರಾಜಕೀಯ ಮತ್ತು ಹಣದ ಪ್ರಭಾವ ಬೀರಿ ಆರೋಪಿಗಳು ಶಿಕ್ಷೆಯಿಂದ ಪಾರಾಗುವುದು ಸಹ ಉಂಟು. ಆರೋಪಿತ ಅಧಿಕಾರಿಗಳನ್ನು ಸರ್ಕಾರವೇ ಮತ್ತೇ ಉನ್ನತ ಹುದ್ದೆಯಲ್ಲಿ ಕೂರಿಸಿರುವ ಉದಾಹರಣೆ ಸಾಕಷ್ಟಿದೆ. ಈ ರೀತಿ ಲೋಕಾಯುಕ್ತ ದಾಳಿ ಒಂದು ಪ್ರಹಸನವೋ ಏನೋ ಎಂಬ ಶಂಕೆ ಮೂಡುತ್ತದೆ. ಆದ್ದರಿಂದ ಕಳೆದ ಹತ್ತು ವರ್ಷಗಳ ಅವಧಿಯಲ್ಲಿ ಆರೋಪಿ ನೌಕರರು ಮತ್ತು ಅಧಿಕಾರಿಗಳ ವಿರುದ್ಧ ಕೈಗೊಂಡ ಕ್ರಮಗಳ ಬಗ್ಗೆ ರಾಜ್ಯ ಸರ್ಕಾರ ಶ್ವೇತ ಪತ್ರ ಹೊರಡಿಸುವುದು ಅಗತ್ಯವಾಗಿದೆ.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು

### ನಿಗದಿತ ದರದೊಂದಿಗೆ ಕಾರ್ಯ ನಿರ್ವಹಿಸಲಿ

ಮಾನ್ಯರೆ,

ರಾಜ್ಯದಲ್ಲಿ ಇಂದು ಸೈಬರ್ ಸೆಂಟರ್‌ಗಳು ಹೆಚ್ಚಾಗುತ್ತಿದ್ದು, ಇಲ್ಲಿ ರಾಜ್ಯ ಮತ್ತು ಕೇಂದ್ರ ಸರ್ಕಾರಗಳಿಂದ ಬರುವ ಅನೇಕ ಸೌಲಭ್ಯಗಳನ್ನು ಸಾರ್ವಜನಿಕರಿಗೆ ಒದಗಿಸುವುದುಂಟು. ಆದರೆ ಸರ್ಕಾರಗಳ ವಿವಿಧ ಇಲಾಖೆಯಲ್ಲಿ ಅನೇಕ ಸೌಲಭ್ಯಗಳನ್ನು ಸಾರ್ವಜನಿಕರಿಗೆ ತಲುಪಿಸಲು ಅರ್ಜಿಯನ್ನು ಆನ್‌ಲೈನ್‌ಗಳಲ್ಲಿ ಆಹ್ವಾನಿಸುತ್ತಾರೆ ಮತ್ತು ವಿದ್ಯಾಭ್ಯಾಸಕ್ಕೆ ಸಂಬಂಧಪಟ್ಟ ಮತ್ತು ಸರ್ಕಾರಗಳ ನೌಕರಿಗಳಿಗೆ ಸಂಬಂಧಪಟ್ಟ ಅರ್ಜಿಗಳನ್ನು ಆನ್‌ಲೈನ್‌ನಲ್ಲಿ ಭರ್ತಿ ಮಾಡಲು ಆಹ್ವಾನಿಸಿದ ನಂತರ ಇದನ್ನೆ ಬಂಡವಾಳವಾಗಿ ಮಾಡಿಕೊಂಡು ರಾಜ್ಯದ ವ್ಯಾಪ್ತಿಯಲ್ಲಿ ಕಾರ್ಯ ನಿರ್ವಹಿಸುವ ಸೈಬರ್ ಸೆಂಟರ್‌ಗಳು ಮತ್ತು ಅರ್ಜಿಯನ್ನು ಆನ್‌ಲೈನ್‌ಗಳಲ್ಲಿ ಹಾಕುವ ಅಂಗಡಿಗಳಲ್ಲಿ ವಿವಿಧ ದರಗಳನ್ನು ಸ್ವಯಂ ಪ್ರೇರಿತವಾಗಿ ಅಂಗಡಿ ಮಾಲೀಕರೇ ನಿರ್ಧರಿಸಿ ಶಾಲಾ ಕಾಲೇಜಿನಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳ ಬಳಿ ಮತ್ತು ಬಡವರು ಕೂಲಿ ಕಾರ್ಮಿಕರ ಇನ್ನಿತರರು ಅರ್ಜಿಯನ್ನು ಆನ್‌ಲೈನ್‌ನಲ್ಲಿ ಹಾಕಲು ಬಂದಾಗ ಹೆಚ್ಚೆಚ್ಚು ಹಣ ಪಡೆಯುತ್ತಿದ್ದಾರೆ. ಕೂಡಲೇ ಈ ಸಮಸ್ಯೆಗೆ ಕಡಿವಾಣ ಹಾಕಲು ಸರ್ಕಾರವೇ ಇಂತಿಂಥ ಅರ್ಜಿಗಳಿಗೆ ಇಷ್ಟೇ ಹಣ ಪಡೆಯಬೇಕೆಂದು ಸೈಬರ್ ಸೆಂಟರ್‌ಗಳಿಗೆ, ಆನ್‌ಲೈನ್ ಅರ್ಜಿ ಹಾಕುವ ಅಂಗಡಿಗಳಿಗೆ ಸೂಚಿಸಿ ಸಾರ್ವಜನಿಕರಿಗೆ ಮತ್ತು ವಿದ್ಯಾರ್ಥಿಗಳಿಗೆ ಅನುಕೂಲ ಮಾಡಿಕೊಡಲು ಕಠಿಣ ನಿರ್ಧಾರಗಳನ್ನು ತೆಗೆದುಕೊಳ್ಳಬೇಕು.

–ನಾಗೇಶ್, ಮಾನಸಗಂಗೋತ್ರಿ, ಮೈಸೂರು.

### ಪಕ್ಕದ ಮನೆಗೆ ಕನ್ನಡ ಕನ್ನಡಿಯಾಗಲಿ

ಮಾನ್ಯರೇ,

ಕನ್ನಡವೇ ಸತ್ಯ, ಕನ್ನಡವೇ ನಿತ್ಯ ಎಂದು ಕನ್ನಡ ಹಬ್ಬ 'ಕನ್ನಡ ರಾಜ್ಯೋತ್ಸವ' ದಿನದಂದು ಹರ್ಷಾಚರಣೆ ಒಳ್ಳೆಯ ಸಂಗತಿ. ಆದರೆ ಆ ಹರ್ಷವು ವರ್ಷಾಚರಣೆ ಆಗಲಿ.

ಪಕ್ಕದ ಮನೆಗೆ ಆಂಧ್ರಪ್ರದೇಶ, ಮಹಾರಾಷ್ಟ್ರ ಅಥವಾ ಕೇರಳದಿಂದ ಜನರು ಬಂದಾಗ ಅವರನ್ನು ಮೆಚ್ಚಿಸಲು ಅವರ ಮಾತೃ ಭಾಷೆಯಲ್ಲಿ ಮಾತನಾಡಿಸುತ್ತೇವೆ. ಅದು ತಪ್ಪಲ್ಲ, ಹಾಗಂತ ವರ್ಷ ಕಳೆದರೂ ಅವರಿಗೆ 'ಕನ್ನಡ ಗೊತ್ತಿಲ್ಲ' ಅಂದರೆ ಅದು ನಮ್ಮ ತಪ್ಪು ಅಲ್ಲವೆ? ಇತ್ತೀಚಿಗೆ ರೈಲ್ವೆ ಪಯಣದಲ್ಲಿ ಅನಾಮಿಕ ಯುವಕ ಬೆಂಗಳೂರಿನಲ್ಲಿ ಓದುತ್ತಿದ್ದು 6 ತಿಂಗಳು ಆಗಿದ್ದು, ಕನ್ನಡದವರು ಎಂದು ತಿಳಿದ ಬಳಿಕ ಆತ ಕನ್ನಡದಲ್ಲಿ ಮಾತನಾಡಲು ಪ್ರಯತ್ನ ಮಾಡಿದ, ಹಾಗೆಯೇ ಇದೆ ರೀತಿಯಲ್ಲಿ ಕನ್ನಡದ 'ಸರಿಗಮಪ –20' ಯಲ್ಲಿ ಪಂಜಾಬ್ ಯುವಕ ಕನ್ನಡ ಹಾಡುಗಳ ರಸದೌತ್ತಣ ಬಡಿಸುತ್ತಿದ್ದಾನೆ. ಇದು ಒಂದೆಡೆಯಾದರೆ, ಇನ್ನೊಂದೆಡೆ ವರ್ಷ ಕಳೆದರೂ ಇಲ್ಲಿ ಬೇರೂರಿದ ಕೆಲ ಜನರಿಗೆ 'ಕನ್ನಡ ಗೊತ್ತಿಲ್ಲ' ಎಂದಾಗ ಬೇಸರವನ್ನುಂಟು ಮಾಡುವ ಸಂಗತಿ. ಹಾಗಂತ ಅವರ ಮೇಲೆ ಭಾಷೆಯ ದಬ್ಬಾಳಿಕೆ ಮಾಡಬೇಕು ಎಂದಲ್ಲ, ಸರಳವಾಗಿ ಒಂದು ಚಿಕ್ಕ ಪ್ರಯತ್ನದಂತೆ ಅವರಿಗೆ ಒಂದು ಪದ ಒಂದೊಂದು ದಿನ ಕಲಿಸುವುದರ ಜೊತೆಗೆ ನಾವೆಲ್ಲರೂ ಹೆಮ್ಮೆಯಿಂದ ಕನ್ನಡ ಬಳಸೋಣ ಕಣ್ರೀ, ಏನಂತೀರಿ...?


– ಆನಂದ ಜೇವೂರ್, ಕಲಬುರಗಿ.

### ಮೈಸೂರು ಜಯರಾಂರವರ ನಿಸ್ವಾರ್ಥ ಸೇವೆ ಶ್ಲಾಘನೀಯ

ಮಾನ್ಯರೆ,

ಮೈಸೂರಿನ ಡಾ.ರಾಜ್‌ಕುಮಾರ್ ಕಲಾ ಸೇವಾ ಟ್ರಸ್ಟ್‌ನ ಮೈಸೂರು ಜಯರಾಂರವರು ನಿಸ್ವಾರ್ಥ ಸೇವೆಯಿಂದ ಜನಾನುರಾಗಿಯಾಗಿದ್ದಾರೆ. ಅವರು ಆಯಾ ಸಮಯಕ್ಕೆ ಸರಿಯಾಗಿ ಏನೂ ಫಲಾಪೇಕ್ಷೆಯಿಲ್ಲದೇ ಕೆಲಸ ಕಾರ್ಯಗಳಲ್ಲಿ ತೊಡಗಿರುತ್ತಾರೆ. ಇತ್ತೀಚೆಗೆ ನಗರದ ಪುರಭವನ ಆವರಣದಲ್ಲಿ ಉಚಿತ ಕಣ್ಣಿನ ತಪಾಸಣಾ ಶಿಬಿರವನ್ನು ಆಯೋಜಿಸಿ, ಅದರಲ್ಲಿ ಸುಮಾರು 200 ಮಂದಿ ಇದರ ಪ್ರಯೋಜನ ಪಡೆದುಕೊಂಡರು. 21 ಮಂದಿಗೆ ಉಚಿತ ಕಣ್ಣಿನ ಶಸ್ತ್ರ ಚಿಕಿತ್ಸೆ ಮಾಡಿಸಿ ತಮ್ಮ ಹೃದಯ ವೈಶಾಲ್ಯತೆಯನ್ನು ಮೆರೆದಿದ್ದಾರೆ. ಅಂಚೆ ಇಲಾಖೆಯಲ್ಲಿ ನೌಕರರಾಗಿರುವ ಇವರು ತಮಗೆ ಬರುವ ಸಂಪಾದನೆಯಲ್ಲಿ ಇಂತಹ ಶಿಬಿರಗಳನ್ನು ಉಚಿತವಾಗಿ ಒದಗಿಸುತ್ತಾ ಬರುತ್ತಿರುವುದು ತುಂಬಾ ಹೆಮ್ಮೆಯ ವಿಷಯ. ಇವರು ಡಾ.ರಾಜ್‌ಕುಮಾರ್ ಅವರ ಪರಮ ಭಕ್ತ. ಅನೇಕ ಸಂಗೀತ ರಸಸಂಜೆಗಳನ್ನು ನಗರದಲ್ಲಿ ಆಯೋಜಿಸುತ್ತಾ ಬಂದಿದ್ದಾರೆ. ಇತ್ತೀಚೆಗೆ ಮಹಿಳೆಯರಿಗಾಗಿಯೇ 'ಭಾವವೆಂಬ ಹೂವು ಅರಳಿ' ಶೀರ್ಷಿಕೆಯಡಿಯಲ್ಲಿ ಮಹಿಳೆಯರಿಂದಲೇ ಮಹಿಳಾ ಪ್ರಧಾನ ಗೀತೆಗಳನ್ನು ಆಯೋಜಿಸಿ ಅತ್ಯಂತ ಯಶಸ್ವಿಯಾಗಿದ್ದರು. ಮೈಸೂರು ಜಯರಾಂರವರಿಂದ ಇನ್ನೂ ಹೆಚ್ಚಿನ ಇಂತಹ ಸಮಾಜಮುಖಿ ಕೈಂಕರ್ಯಗಳು ನಡೆದು ಸಾರ್ವಜನಿಕರಿಗೆ ಹೆಚ್ಚಿನ ರೀತಿಯಲ್ಲಿ ಪ್ರಯೋಜನವಾಗಲಿ.

–ನಟರಾಜ್, ಹಿರಿಯ ನಾಗರಿಕ, ಕೆ.ಆರ್.ಮೊಹಲ್ಲಾ, ಮೈಸೂರು



ಡಾ. ವಿ. ರಂಗನಾಥ್
ಲೇಖಕರು ಹಾಗೂ ನಿವೃತ್ತ ತಹಸೀಲ್ದಾರರು
ಮೊ : 94482 08746 / 97421 79000

ಚಿಂತನೆ

# ಸಾಹಸಿಯ ಸತತ ಪರಿಶ್ರಮವೇ 'ಸಾಧನೆ'

ನಾವು ಕಾಣುವ ಬೆಳವಣಿಗೆ ಎರಡು ರೀತಿಯಲ್ಲಿರುತ್ತದೆ. ಒಂದು ಸಿಕ್ಕ ಅವಕಾಶಗಳನ್ನು ಉಪಯೋಗಿಸಿಕೊಂಡು ಬೆಳೆಯುವುದು, ಮತ್ತೊಂದು ಸಿಕ್ಕಿದ್ದರಲ್ಲೇ ಜೀವನ ಮಾಡುವುದು. ಎರಡನೆಯದು ಯಾವುದೇ ರಿಸ್ಕ್ ತೆಗೆದುಕೊಳ್ಳದ ಜೀವನ. ಬಂದುದರಲ್ಲೇ ಹೇಗೋ ಜೀವನ ಮಾಡಿದರಾಯಿತು. ನಾನು ಪಡೆದುಕೊಂಡು ಬಂದಿದ್ದೇ ಇಷ್ಟು. ಅದರಂತೆ ಜೀವನ ಮಾಡಿಬಿಡೋಣ. ಹೊಸದಾಗಿ ಏನನ್ನಾದರೂ ಮಾಡುವುದಕ್ಕೆ ಹೊರಟು, ಇದ್ದುದನ್ನೂ ಕಳೆದುಕೊಂಡರೆ ಜೀವನ ನಿರ್ವಹಣೆ ಹೇಗೆ? ಅದ್ದರಿಂದ ಹಾಸಿಗೆ ಇದ್ದಷ್ಟು ಕಾಲುಚಾಚು ಎಂಬಂತೆ ಇದ್ದುದರಲ್ಲಿಯೇ ಜೀವನ ನಡೆಸುವ ರೀತಿ. ಇದು ತಪ್ಪು ಎಂದಲ್ಲ. ನಮ್ಮಲ್ಲಿ ಅನೇಕರಿಗೆ ಇಂತಹ ಕಂಫರ್ಟ್ ಝೋನ್‌ನಿಂದ ಹೊರಗೆ ಬರಲಾಗುವುದಿಲ್ಲ.

ಮತ್ತೊಂದು ಗುಂಪು ಅಪರೂಪವಾದರೂ ಅಲ್ಲಲ್ಲಿ ಕಂಡುಬರುವಂತಹುದು. ಅವರು ಏನನ್ನೇ ಕಂಡರೂ ಅದನ್ನು ಹೇಗೆ ಉಪಯೋಗಿಸಬಹುದು ಎಂದು ಚಿಂತಿಸುತ್ತಾರೆ. ಜೋಗ್‌ಫಾಲ್ಸ್ ವೀಕ್ಷಣೆ ಅನೇಕರಿಗೆ ಮುದ ನೀಡುತ್ತದೆ. ಎತ್ತರದಿಂದ ಬೀಳುವ ನೀರು ಕಂಡು ಜನರು ಪುಳಕಿತರಾಗುತ್ತಾರೆ. ಕಂಡ ದೃಶ್ಯವನ್ನು ಹಲವಾರು ದಿನಗಳವರೆಗೆ ನೆನಸಿಕೊಂಡು ಸಂಭ್ರಮಿಸುತ್ತಾಷ್ಟೇ. ಆದರೆ ವಿಶ್ವೇಶ್ವರಯ್ಯನಂತಹವರು ಜಲಪಾತದಲ್ಲಿ ನೀರು ಬೀಳುವುದನ್ನು ಕಂಡು ಅಯ್ಯೋ ಎಷ್ಟೊಂದು ಶಕ್ತಿ ವ್ಯರ್ಥವಾಗಿ ಹೋಗುತ್ತಿದೆಯಲ್ಲಾ, ಇದನ್ನು ಹೇಗಾದರೂ ಬಳಸಿಕೊಳ್ಳಬೇಕು ಎನ್ನುತ್ತಾರೆ. ಅದರ ಫಲವೇ ಇಂದು ಗೇರುಸೊಪ್ಪೆಯ ವಿದ್ಯುತ್ ಉತ್ಪಾದನಾ ಘಟಕ. ರಾಜ್ಯಕ್ಕೆ ವಿದ್ಯುತ್ ನೀಡುತ್ತಿದೆ. ನೀರು ಮೇಲಿನಿಂದ ಬಿದ್ದು ಮುಂದೆ ಸಾಗಿ ಸಮುದ್ರ ಸೇರುತ್ತದೆ. ಹಾಗೆ ಮೇಲಿನಿಂದ ಬೀಳುವ ನೀರನ್ನು ಹೇಗೆ ಬಳಸಬಹುದು ಎಂಬುದು ಅಂತಹ ದಾರ್ಶನಿಕರಿಗೆ ಮಾತ್ರ ಗೊತ್ತಾಗುತ್ತದೆ. ಯೋಜನೆ ಒಂದು ಸಿದ್ಧವಾದರೆ ಹಣಕಾಸು ಹೇಗೋ ಹೊಂದುತ್ತದೆ, ಯೋಜನೆ ಸಾಕಾರವಾಗುತ್ತದೆ. ಅದನ್ನು ಯೋಚಿಸಿ, ಅನುಷ್ಠಾನಕ್ಕೆ ತಂದವರಿಗಿಂತ ಅದರ ಉಪಯೋಗ ಇತರರಿಗೆ ಹೆಚ್ಚಾಗುತ್ತದೆ. ಇದು ಎರಡನೇ ವರ್ಗ. ಯಾವುದೇ ವಸ್ತು ವ್ಯರ್ಥವಾಗಬಾರದು, ಉಪಯೋಗಕ್ಕೆ ಬರಬೇಕು ಎಂದು ಚಿಂತಿಸುತ್ತಾರೆ. ಅವರುಗಳು ಸ್ವಲ್ಪ ರಿಸ್ಕ್ ತೆಗೆದುಕೊಳ್ಳುತ್ತಾರೆ. ತಾವು ಹೇಳಿದ್ದು ಕೆಲಕಾಲ ನಗೆಪಾಟಲಿಗೆ ಈಡಾಗಬಹುದು ಎಂಬುದು ಅವರಿಗೆ ಗೊತ್ತಿರುತ್ತದೆ. ಆದರೆ ಅದನ್ನು ಅನುಷ್ಠಾನಗೊಳಿಸಿದರೆ ಮುಂದೆ ಸಾವಿರಾರು, ಲಕ್ಷಾಂತರ ಜನರಿಗೆ ಅನುಕೂಲವಾಗುತ್ತದೆ ಎಂದು ಅವರ ಅಂತರ್ಯ ಅವರಿಗೆ ಭರವಸೆ ನೀಡುತ್ತಿರುತ್ತದೆ.

ಹಾಗೆ ಸಿಕ್ಕಿದ ಅವಕಾಶವನ್ನು ಉಪಯೋಗಿಸಿಕೊಳ್ಳುವುದನ್ನು ಬುದ್ಧಿವಂತಿಕೆ ಎಂದು ಹೇಳಬಹುದು. ತಾವು ಏನೋ ಮಾಡಲು ಹೊರಡುವವರು, ಅಲ್ಲಿಯ ಪರಿಸ್ಥಿತಿ ಗಮನಿಸಿ ಮೂಲ ಯೋಚನೆಯ ಬದಲು ಅಲ್ಲಿಯ ಪರಿಸ್ಥಿತಿಗೆ ಅನುಗುಣವಾಗಿ ಮತ್ತೊಂದು ಯೋಜನೆ ತಯಾರಿಸಿ ಅನುಷ್ಠಾನಗೊಳಿಸುವುದು ಕೆಲವರಿಂದ ಮಾತ್ರ ಸಾಧ್ಯ. ಇದು ಎಲ್ಲರಿಗೂ ಸಾಧ್ಯವಾಗುವುದಾದರೂ ಎಲ್ಲರೂ ಈ ರಿಸ್ಕ್ ತೆಗೆದುಕೊಳ್ಳಲು ಧೈರ್ಯ ಮಾಡದ ಕಾರಣ ಅವರು ಇದ್ದುದರಲ್ಲಿಯೇ ಸಂತೋಷಪಡುವ ಗುಣವನ್ನು ಬೆಳೆಸಿಕೊಂಡುಬಿಡುತ್ತಾರೆ.

ಪರಿಸ್ಥಿತಿಯನ್ನು ಉಪಯೋಗಿಸಿಕೊಂಡು, ತಾನೂ ಬೆಳೆದು ಇತರರಿಗೂ ದಾರಿ ದೀಪವಾಗಬಲ್ಲವರ ಜೀವನವನ್ನು ನಾವು ಅವಲೋಕಿಸಬೇಕು. ಅಂತಹ ಹಲವಾರು ಜನರು ನಮ್ಮ ಕಣ್ಣಮುಂದೆ ಇರುತ್ತಾರೆ, ಹುಡುಕಬೇಕಷ್ಟೇ.

ಇತ್ತೀಚೆಗೆ ಇಂತಹ ಸಾಧಕರಲ್ಲೊಬ್ಬರಾದ ಪದ್ಮಶ್ರೀ ಪುರಸ್ಕೃತ ಡಾ॥ ಟಿಎಂಎ ಪೈಯವರ ಜೀವನಗಾಥೆಯನ್ನು ಓದುವ ಅವಕಾಶ ಸಿಕ್ಕಿತು.



ಟಿಎಂಎ ಪೈ

ಅವರ ಪೂರ್ತಿ ಹೆಸರು ಡಾ॥ ತೋನ್ಸೆ ಮಾಧವ ಅನಂತ ಪೈ. ಆದರೆ ಟಿಎಂಎ ಪೈ ಎಂದೇ ಖ್ಯಾತರಾದವರು. ಜನಿಸಿದ್ದು 1898ರ ಏಪ್ರಿಲ್ 30 ರಂದು. ಬದುಕಿದ್ದು 82 ವರ್ಷಗಳು. ಅವರ ಸಾಧನೆಗಳನ್ನು ಗಮನಿಸಿದಾಗ ಎರಡೆರಡು ಜನ್ಮವೆತ್ತಿದರೂ ಸಾಧಿಸಲಾಗದ್ದನ್ನು ಸಾಧಿಸಿದ್ದು ಕಂಡುಬರುತ್ತದೆ!!

ಅವರು ಸ್ಥಾಪಿಸಿದ್ದ ಸಿಂಡಿಕೇಟ್ ಬ್ಯಾಂಕ್ ಕೆನರಾ ಬ್ಯಾಂಕಿನೊಡನೆ ವಿಲೀನವಾದದ್ದು 2020 ರಲ್ಲಿ. ಸಿಂಡಿಕೇಟ್ ಬ್ಯಾಂಕ್ ಬಹಳ ದೊಡ್ಡದಾಗಿ ಬೆಳೆದು ವಿಶ್ವಖ್ಯಾತಿಯನ್ನು ಗಳಿಸಿತ್ತು. ಈ ಬ್ಯಾಂಕ್ ಸ್ಥಾಪಿಸಿದವರು ಪೈಯವರು. ಬ್ಯಾಂಕ್ ಸ್ಥಾಪನೆಯಾದ ಸನ್ನಿವೇಶ ಬೆರಗು ಮೂಡಿಸುವಂತಹುದು. ಖಾಸಗಿ ಬ್ಯಾಂಕಾಗಿದ್ದ ಸಿಂಡಿ ಕೇಟ್ ಬ್ಯಾಂಕ್‌ನ ಆರಂಭ 25 ಪೈಸೆಗಳ ಪಿಗ್ಮಿ ಸಂಗ್ರಹದಿಂದ ಆರಂಭವಾಯಿತು. ಒಬ್ಬ ವ್ಯಕ್ತಿ ತಾನೇ ಬೃಹತ್ ಹಣವನ್ನು ಹೊಂದಿಸಲಾಗುವುದಿಲ್ಲ. ಆದರೆ ಮನಸ್ಸು ಮಾಡಿದರೆ ತನ್ನ ಸಮಾಜದ ಜನರನ್ನು ಆರ್ಥಿಕವಾಗಿ ಅವರು ಸಬಲ ಮಾಡ ಬಲ್ಲರು. ಸಿಂಡಿಕೇಟ್ ಬ್ಯಾಂಕ್ ಅಷ್ಟು ಬೃಹತ್ತಾಗಿ ಬೆಳೆದರೂ ಅದರ ಕೇಂದ್ರ ಆಗ ಒಂದು ಗ್ರಾಮೀಣ ಪ್ರದೇಶ ಎನಿಸಿಕೊಳ್ಳುತ್ತಿದ್ದ ಮಣಿಪಾಲದಲ್ಲಿತ್ತು. 1930ರ ವೇಳೆಗೆ ಮಣಿಪಾಲ ಒಂದು ಸಣ್ಣ ಗ್ರಾಮವಾಗಿತ್ತು. ಆ ಸಮಯದಲ್ಲಿದ್ದ ಇತರೆ ಬ್ಯಾಂಕುಗಳು ತಮ್ಮ ಖಾತೆಯಲ್ಲಿ ಕನಿಷ್ಠ ಮೊತ್ತ ರೂ. 5 ಇರಬೇಕೆಂದು ಒತ್ತಾಯಿಸು ತ್ತಿದ್ದರೆ, ಸಿಂಡಿಕೇಟ್ ಬ್ಯಾಂಕ್‌ನಲ್ಲಿ ಕೇವಲ 25 ಪೈಸೆಯಿಂದ ಖಾತೆ ತೆರೆಯಬಹುದಾಗಿತ್ತು. ಈ ಬ್ಯಾಂಕಿನ ಹಿಂದಿನ ಕಲ್ಪನೆ ಹಾಗೂ ಶಕ್ತಿ ಟಿಎಂಎ ಪೈಯವರಾಗಿದ್ದರು.

ಪೈಯವರು ಬೆಂಗಳೂರಿನಲ್ಲಿ ತಮ್ಮ ವೈದ್ಯಕೀಯ ವಿದ್ಯಾಭ್ಯಾಸ ಮುಗಿಸಿದ ನಂತರ ವಾಪಸು ಊರಿಗೆ ಬಂದರು. ಅವರಿಗೆ ಜಪಾನ್‌ನಲ್ಲಿ ಮುಂದಿನ ಶಿಕ್ಷಣ ಪಡೆಯಬೇಕೆಂಬ ಆಸೆ ಇತ್ತು. ಆದರೆ ತಾಯಿ ಒಪ್ಪಲಿಲ್ಲ. ಅವರು ನೀನು ಓದಿರುವುದಕ್ಕೆ ಅನುಗುಣವಾಗಿ ಇದೇ ಊರಿನಲ್ಲಿದ್ದು ಜನರ ಹಿತಕ್ಕಾಗಿ ಕ್ಲಿನಿಕ್ ತೆಗೆದು ಕೆಲಸ ಮಾಡುವಂತೆ ತಿಳಿಸಿದರು. ಇದು ಪೈಯವರಿಗೆ ಆಘಾತದ ವಿಷಯವಾಗಿತ್ತು. ಮಲ್ಪೆಯಂತಹ ಮೀನು ವ್ಯಾಪಾರದ ಸಣ್ಣಸ್ಥಳದಲ್ಲಿ ತಮ್ಮ ಕ್ಲಿನಿಕ್ ಆರಂಭಿಸಿ ಜನ ಸೇವೆ ಮಾಡು ಎಂದರೆ ಹೇಗೆ? ಆವರೆವಿಗೆ ವಿದೇಶದಲ್ಲಿ ಹೆಚ್ಚಿನ ವ್ಯಾಸಂಗ ಮಾಡಬೇಕೆಂದು ಬಯಸಿದ್ದ ಅವರನ್ನು ತಾಯಿಯ ಮಾತು ಬಂಧನಕ್ಕೆ ಒಳಪಡಿಸಿತು. ಊರಲ್ಲಿ ನೆಲೆ ನಿಂತರೆ ಹಣದ ಸಂಪಾದನೆಯೂ ಆಗುವುದಿಲ್ಲ, ಕೆಲಸದಲ್ಲಿ ಯಾವ ಸಾಧನೆ ಸಹ ಇರುವುದಿಲ್ಲ ಎಂಬುದು ಅವರ ನಿಲುವಾಗಿತ್ತು. ಮತ್ತೆ ಮತ್ತೆ ತಂದೆ–ತಾಯಿಯರಲ್ಲಿ ವಿದೇಶದ ವ್ಯಾಸಂಗದ ಬಗ್ಗೆ ಪ್ರಸ್ತಾಪ ಮಾಡಿದರಾದರೂ ಒಪ್ಪಿಗೆ ಸಿಗಲಿಲ್ಲ. ಪೈಯವರು ಬಹಳ ನಿರಾಸೆ ಅನುಭವಿಸಿದರು.

ಕ್ಲಿನಿಕನ್ನು ಮಲ್ಪೆಯಲ್ಲಿ ಆರಂಭಿಸಿದರು. ಕೆಲ ದಿನಗಳ ನಂತರ ಅವರಿಗೆ ಒಂದು ವಿಷಯ ಅರಿವಾಯಿತು. ತನಗೆ ಏಕೆ ಹೆಚ್ಚಿನ ಹಣ ಸಂಪಾದನೆಯಾಗುತ್ತಿಲ್ಲವೆಂದರೆ, ತನ್ನ ಸುತ್ತಲಿನ ಸಾಮಾನ್ಯ ಜನರೂ ಕಡಿಮೆ ಸಂಪಾದಿಸುತ್ತಿದ್ದಾರೆ. ಹಾಗಾಗಿ

> "ಸಿಕ್ಕಿದ ಅವಕಾಶವನ್ನು ಉಪಯೋಗಿಸಿ ಕೊಳ್ಳುವುದನ್ನು ಬುದ್ಧಿವಂತಿಕೆ ಎಂದು ಹೇಳಬಹುದು. ತಾವು ಏನೋ ಮಾಡಲು ಹೊರಡುವವರು, ಅಲ್ಲಿಯ ಪರಿಸ್ಥಿತಿ ಗಮನಿಸಿ ಮೂಲ ಯೋಚನೆಯ ಬದಲು ಅಲ್ಲಿಯ ಪರಿಸ್ಥಿತಿಗೆ ಅನುಗುಣವಾಗಿ ಮತ್ತೊಂದು ಯೋಜನೆ ತಯಾರಿಸಿ ಅನುಷ್ಠಾನಗೊಳಿಸುವುದು ಕೆಲವರಿಂದ ಮಾತ್ರ ಸಾಧ್ಯ. ಇದು ಎಲ್ಲರಿಗೂ ಸಾಧ್ಯವಾಗುವುದಾದರೂ ಎಲ್ಲರೂ ಈ ರಿಸ್ಕ್ ತೆಗೆದುಕೊಳ್ಳಲು ಧೈರ್ಯ ಮಾಡದ ಕಾರಣ ಅವರು ಇದ್ದುದರಲ್ಲಿಯೇ ಸಂತೋಷಪಡುವ ಗುಣವನ್ನು ಬೆಳೆಸಿಕೊಂಡುಬಿಡುತ್ತಾರೆ.

ಅವರ ಬಳಿ ಹಣವಿಲ್ಲ. ಅವರ ಮನಸ್ಸು ಇದನ್ನು ಬದಲಿಸಬಹುದೇ ಎಂಬ ಬಗ್ಗೆ ಯೋಚಿಸುವಂತೆ ಮಾಡಿತು. ಅದಕ್ಕಾಗಿ ಅವರು ನಿರಂತರವಾಗಿ ಯೋಚಿಸಿದರು. ಅವರಿಗೆ ಗೊತ್ತಿತ್ತು, ಮಕ್ಕಳು ಖಾಯಿಲೆ ಬಿದ್ದಾಗ ಸಾಮಾನ್ಯವಾಗಿ ತಾಯಿಯರೇ ಅವರನ್ನು ಕ್ಲಿನಿಕ್‌ಗೆ ಕರೆತರುತ್ತಾರೆ ಎಂಬುದು. ಅದರಂತೆ ಆ ತಾಯಿಯರ ಸ್ಥಿತಿಗತಿಯ ಬಗ್ಗೆ ಅವಲೋಕಿಸಿದರು. ಅಂತಹ ತಾಯಂದಿರಿಗೆ ಅವರು ಹೇಳಲು ಪ್ರಾರಂಭಿಸಿದರು: ನೀವು ಮಕ್ಕಳನ್ನು ಅವರ ತಂದೆಯಂತೆ ಕೇವಲ ಮೀನು ಹಿಡಿಯುವ ಕೆಲಸಕ್ಕೆ ಕಳುಹಿಸಬೇಕೆಂಬ ಬಗ್ಗೆ ಯೋಚಿಸದಿರಿ. ಅವರ ಗಂಡಂದಿರು ಮೀನು ಹಿಡಿದು ಬಂದ ಹಣವನ್ನು ಕುಡಿಯುವುದಕ್ಕೆ ಉಪಯೋಗಿಸುತ್ತಿದ್ದರು. ಮೀನುಗಳನ್ನು ಶುದ್ಧಗೊಳಿಸುವುದು, ಮಾರುವುದು, ಮನೆಯನ್ನು ನಡೆಸುವುದು ಹೆಂಗಸರ ಕೆಲಸವಾಗಿತ್ತು. ಆದ್ದರಿಂದ ಅವರ ಮಕ್ಕಳು ತಂದೆಯಂತಾಗಬಾರದು ಎಂದು ಸಮಯ ಸಿಕ್ಕಾಗ ಒತ್ತಿ ಹೇಳಿದರು. ಆ ಗಂಡಂದಿರು ತಮ್ಮ ಹೆಂಡತಿಯ ಬಳಿ ಉಳಿಯುತ್ತಿದ್ದ ಅಲ್ಪಸ್ವಲ್ಪ ಹಣವನ್ನು ಸಹ ಕಿತ್ತುಕೊಂಡು ಹೋಗಿ ಕುಡಿಯುತ್ತಿದ್ದರು. ನೀವೂ ನಮ್ಮ ಬಳಿ ಇರುವ ಹಣ ಉಳಿತಾಯ ಮಾಡಿ ಎಂದರು. ಆದರೆ ನಮ್ಮಲ್ಲಿ ಹಣ ಉಳಿಯುವುದಿಲ್ಲ ಎಂದು ಆ ಹೆಂಗಸರು ಹೇಳಿದರು. ಹಾಗಿದ್ದರೆ ನಿಮ್ಮಲ್ಲಿ ಎಷ್ಟು ಹಣ ಇದೆ ತೋರಿಸಿ ಎಂದಾಗ ಅವರು ಕೆಲವು ಪುಡಿಗಾಸು ಮಾತ್ರ ಎಂದು ತೋರಿಸಿದರು. ಅವರು ಅದರಲ್ಲಿ 25 ಪೈಸೆಯನ್ನು ತೆಗೆದುಕೊಂಡು ಉಳಿತಾಯ ಪ್ರಾರಂಭಿಸಿ ಎಂದರು. ಪೈಯವರು ಆಗಿನ್ನೂ ಬ್ಯಾಂಕಿನವರಾಗಿರಲಿಲ್ಲ. ಹೀಗೆ ಹೆಂಗಸರಿಂದ ಸಂಗ್ರಹಿಸಿದ ಹಣದ ಲೆಕ್ಕ ಹೇಗೆ ಇಡುವುದು ಎಂಬ ಬಗ್ಗೆ ಅವರು ಯೋಚಿಸಿ ಪ್ರತಿಯೊಬ್ಬರಿಗಾದರೂ ಎರಡು ನೋಟ್‌ಬುಕ್ ತರಿಸಿದರು. ಒಂದು ಇವರ ಬಳಿ ಇದ್ದರೆ ಮತ್ತೊಂದು ಆ ಹೆಂಗಸರ ಬಳಿ ಇರುತ್ತಿತ್ತು. ಪ್ರತಿದಿನ ಸಂಗ್ರಹವಾದುದರ ಬಗ್ಗೆ ಎರಡೂ ಪುಸ್ತಕಗಳಲ್ಲೂ ದಾಖಲಾಗುತ್ತಿತ್ತು. ಪ್ರತಿದಿನ ಹಣ ಸಂಗ್ರಹಕ್ಕೆ ತನ್ನ ಕ್ಲಿನಿಕ್‌ನ ಕಾಂಪೌಂಡರ್‌ನ್ನು ಕಳುಹಿಸುವುದಾಗಿ ತಿಳಿಸಿದರು. ಇದು ದೈನಂದಿನ ಚಟುವಟಿಕೆಯಾಯಿತು. ಇದು ಪರಿಣಾಮ ಬೀರಿತು. ಕೆಲವು ತಿಂಗಳ ನಂತರ ನೋಡಿದರೆ ಹೀಗೆ ಸಂಗ್ರಹವಾದ ಹಣ ಸಾವಿರ ರೂಪಾಯಿ ಮೀರಿತ್ತು. ಅಂದರೆ ಅದು ಇಂದಿನ ಲೆಕ್ಕದಲ್ಲಿ ಲಕ್ಷಗಟ್ಟಲೆ ಬೆಲೆಯಾಗುವಂತಹುದಾಗಿತ್ತು. ಈ ಸಂಗತಿಯೇ ಮುಂದೆ 'ಪಿಗ್ಮಿ' ಎಂಬ ಹೆಸರಿನಿಂದ ಹೆಸರುವಾಸಿಯಾಯಿತು.


ನಂತರ ಪೈಯವರು ಅಲ್ಲಿನ ಮಕ್ಕಳು ಏಕೆ ಪದೇಪದೆ ಖಾಯಿಲೆಗೆ ಬೀಳುತ್ತಾರೆ ಎಂಬ ಬಗ್ಗೆ ಯೋಚಿಸಿದಾಗ, ಅವರಿಗೆ ಕಂಡದ್ದು ಮಕ್ಕಳಿಗೆ ಪೌಷ್ಠಿಕ ಆಹಾರದ ಕೊರತೆ. ಅವರು ತಾಯಿಯರಿಗೆ ಹೇಳಿದರು ನಿಮ್ಮ ಮಕ್ಕಳಿಗೆ ದಿನ ಒಂದು ಲೋಟ ಹಾಲು ನೀಡಿ ಎಂದು. ಆದರೆ ಆ ಹೆಂಗಸರಿಗೆ ಹಾಲು ಕೊಳ್ಳುವ ಶಕ್ತಿ ಇರಲಿಲ್ಲ. ಆಗ ಪೈಯವರು ಹಸುವನ್ನು ಕೊಂಡುಕೊಳ್ಳಲು ತಿಳಿಸಿದರು. ಆದರೆ ಹಣ? ಆಗ ಪೈ ಹಸುವನ್ನು ಕೊಂಡುಕೊಳ್ಳಲು ತಾನು ಹಣವನ್ನು ಸಾಲವಾಗಿ ನೀಡುವುದಾಗಿ ಹೇಳಿದರು. ಹಣದ ಮರು ಪಾವತಿ ಕಷ್ಟವಲ್ಲವೇ? ಮಕ್ಕಳಿಗೆ ಹಾಲು ನೀಡಿದ ನಂತರ ಉಳಿಯುವ ಹೆಚ್ಚುವರಿ ಹಾಲನ್ನು ತಾವು ಕೊಂಡುಕೊಳ್ಳುವುದಾಗಿ ತಿಳಿಸಿದರು. ಅದರಲ್ಲಿಯೇ ಅವರ ಸಾಲದ ಹಣ ಹಿಡಿದುಕೊಂಡು ಉಳಿಕೆ ಹಣ ನೀಡಲು ಪ್ರಾರಂಭಿಸಿದರು. ಮಹಿಳೆಯರು ಒಪ್ಪಿದರು. ಇವರಲ್ಲಿ ಸಂಗ್ರಹವಾಗಿದ್ದ ಹಣದಿಂದ ಹಸು ಕೊಡಿಸಿದರು. ಕೆಲವೇ ಸಮಯದಲ್ಲಿ ಊರಲ್ಲಿ ಹಸುಗಳ ಸಂಖ್ಯೆ ಜಾಸ್ತಿಯಾಯಿತು. ಅವುಗಳಿಂದ ಬರುತ್ತಿದ್ದ ಹಾಲಿನ ಪ್ರಮಾಣವೂ ಜಾಸ್ತಿಯಾಗಿ ಅದನ್ನು ಕೊಂಡುಕೊಳ್ಳುವುದು ಕಷ್ಟವಾಗತೊಡಗಿತು. ಆಗ ಒಂದು ಹಾಲಿನ ಸೊಸೈಟಿ ಸ್ಥಾಪಿಸಿದರು. ಹಣ ಹೆಚ್ಚಾಗಿ ಬರತೊಡಗಿದಾಗ ಅದರ ಸದ್ಬಳಕೆಗಾಗಿ ಒಂದು ಬ್ಯಾಂಕ್ (ಕೆನರಾ ಇಂಡಸ್ಟ್ರಿಯಲ್ ಅಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್) ಸ್ಥಾಪಿಸಿದರು. ಬ್ಯಾಂಕಿನ ಮೊದಲ ಶಾಖೆಯನ್ನು 1925 ರಲ್ಲಿ ಉಡುಪಿಯಲ್ಲಿ ಸ್ಥಾಪಿಸಿದರು. ಅದಕ್ಕೆ ಮುಂಬೈನ ಕ್ಲಿಯರಿಂಗ್ ಹೌಸ್ ಮಾನ್ಯತೆ 1935 ರಲ್ಲಿ ದೊರಕಿತು. ನಂತರ ಅವರು ಬ್ಯಾಂಕಿನ ವತಿಯಿಂದ ಬಟ್ಟೆ ನೇಯ್ಗೆಯ ಸಹಕಾರ ಸಂಘ ಸ್ಥಾಪಿಸಿದರು. ನಂತರ ತಮ್ಮ ಸಮಾಜಕ್ಕಾಗಿ ಶಾಲೆ ಆರಂಭಿಸಿದರು. ನಂತರ ಕಾಲೇಜು ತೆರೆದರು. ನಂತರ ಇಂಜಿನಿಯರಿಂಗ್, ವೈದ್ಯಕೀಯ ಕಾಲೇಜುಗಳೂ ಆರಂಭವಾದವು. ಒಮ್ಮೆ ಅವರ ಪ್ರವಾಸದ ಸಮಯದಲ್ಲಿ ಅವರಿಗೆ ಒಬ್ಬ ಬಟ್ಟೆ ಉದ್ಯಮಿಯ ಪರಿಚಯವಾಯಿತು. ಮುಂದೆ ಅವರು ಇವರಿಗೆ ಬಟ್ಟೆ ಉದ್ಯಮದ ಲೈಸೆನ್ಸ್ ಪಡೆಯಲು ಸಹಕರಿಸಿದರು. ಅವರೇ ಧೀರೂಭಾಯಿ ಅಂಬಾನಿ. ಇದರಿಂದ ಮುಂದೆ ಪೈಯವರು ರಿಲೆಯನ್ಸ್ ಉದ್ಯಮದ ಬೋರ್ಡ್‌ಗೆ ಸೇರ್ಪಡೆಯಾದರು. ಹೀಗೆ ಪೈಯವರು ಹಲವಾರು ಉದ್ಯಮಗಳ ಸ್ಥಾಪನೆಗೆ ಕಾರಣಕರ್ತರಾದರು.

ಅವರ ಜೀವನ ಸಾಧನೆ ಬಗ್ಗೆ ಒಬ್ಬರು ಕೇಳಿದಾಗ ಅವರು ತಮ್ಮ ಮನೆ ಬಳಿಯಿದ್ದ ಎರಡು ತೆಂಗಿನ ಮರ ತೋರಿಸಿದ್ದರು. ಅದರಲ್ಲಿ ಒಂದು ಸೊಗಸಾದ ಗೊನೆಗಳಿಂದ ಕೂಡಿದ್ದರೆ, ಮತ್ತೊಂದು ಪೀಚಲಾಗಿತ್ತು. ಅವರು ಹೇಳಿದ್ದರು, ಗೊಬ್ಬರ, ನೀರು ಹಾಕಿ ಬೆಳೆಸಿದರೆ ಅಂತಹ ಮರ ಫಲಭರಿತವಾಗುತ್ತದೆ. ಪೋಷಣೆ ಇಲ್ಲದಿದ್ದರೆ ಅದು ನಲುಗಿ ಹೋಗುತ್ತದೆ. ಯಾವುದೇ ಮರವನ್ನು ಜತನವಾಗಿ ಬೆಳೆಸಿದರೆ ಫಲ ಕೊಡುತ್ತದೆ. ತಾತ್ಸಾರ ಮಾಡಿದರೆ ಪೀಚಾಗುತ್ತದೆ ಎಂದು. ಅದು ಅವರ ಜೀವನದ ದಾರಿಯಂತೆ ಕಂಡುಬರುತ್ತದೆ.

ಕಸದಲ್ಲಿಯೂ ರಸ ತೆಗೆಯಬಹುದು, ಬಡವರು ಶ್ರೀಮಂತರಾಗಬಹುದು ಎಂಬುದನ್ನು ಪೈಯವರು ಸಾಧಿಸಿ ತೋರಿಸಿದ್ದಾರೆ. ಸಾಧಿಸುವ ಇಚ್ಛೆಯುಳ್ಳವರಿಗೆ ಇವರಿಗಿಂತ ಮಾದರಿ ಬೇಕೆ?

# ಜಾತಿಗಣತಿ; ಕಾಂತರಾಜ್ ವರದಿ ಮುಂದಿಟ್ಟುಕೊಂಡು ಕಾಂಗ್ರೆಸ್ ಕಂಗಾಲಾಗಿಸಲು ಬಿಜೆಪಿ ರಣತಂತ್ರ

**• ಈಗಾಗಲೇ ವರದಿಗೆ ಒಕ್ಕಲಿಗ, ವೀರಶೈವ ಸಮುದಾಯ ತೀವ್ರ ವಿರೋಧ • ಹಿಂದುಳಿದ ಮುಖಂಡರ ದೆಹಲಿಗೆ ಕರೆಸಿಕೊಂಡು ಬಿಜೆಪಿ ವರಿಷ್ಠರ ಪಾಠ • ಕಾಂತರಾಜ್ ವರದಿ ಸ್ವೀಕರಿಸಿದ ದಿನವೇ ಸಿದ್ದರಾಮಯ್ಯ ಅಧಿಕಾರ ಕಳೆದುಕೊಳ್ಳುತ್ತಾರೆ : ಈಶ್ವರಪ್ಪ ಭವಿಷ್ಯ**



ಬೆಂಗಳೂರು, ನ.3(ಕೆಎಂಶಿ)– ಕಾಂತರಾಜ್ ವರದಿಯನ್ನು ಮುಂದಿಟ್ಟುಕೊಂಡು ಕರ್ನಾಟಕದಲ್ಲಿನ ಕಾಂಗ್ರೆಸ್ ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸಲು ಬಿಜೆಪಿ ವರಿಷ್ಠರು ತಂತ್ರ ರೂಪಿಸಿದ್ದಾರೆ.

ಹಿಂದುಳಿದ ವರ್ಗಗಳ ಆಯೋಗದ ವರದಿಗೆ ಕಾಂಗ್ರೆಸ್ ಅಧಿನಾಯಕ ರಾಹುಲ್ ಗಾಂಧಿ ಬೆಂಬಲ ಸೂಚಿಸಿರುವ ಬೆನ್ನಲ್ಲೇ ಬಿಜೆಪಿ ವರದಿಗೆ ವಿರೋಧ ವ್ಯಕ್ತಪಡಿಸಿದೆ.

ಮುಂಬರುವ ಲೋಕಸಭಾ ಚುನಾವಣೆಗೂ ಮುನ್ನ ಸಾಮಾಜಿಕ, ಶೈಕ್ಷಣಿಕ ಹಾಗೂ ಆರ್ಥಿಕ ಸಮೀಕ್ಷಾ ವರದಿ (ಕಾಂತರಾಜ್ ವರದಿ) ಸ್ವೀಕರಿಸುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಘೋಷಿಸಿದ್ದಾರೆ.

ಇದರ ಬೆನ್ನಲ್ಲೇ ಕಾಂತರಾಜ್ ವರದಿಯ ಪರ ಮತ್ತು ವಿರೋಧದ ಚರ್ಚೆ ತಾರಕಕ್ಕೇರಿದ್ದು, ಈ ವಿಚಾರ ಆಡಳಿತ ಮತ್ತು ಪ್ರತಿಪಕ್ಷಗಳ ನಡುವೆ ರಾಜಕೀಯ ಸಂಘರ್ಷಕ್ಕೆ ಅಸ್ತ್ರವಾಗಿದೆ.

ಸಿಎಂ ನಿರ್ಧಾರ ಅವರಿಗೇ ಮುಳುವಾಗಿಸಲು ಬಿಜೆಪಿ ನಿನ್ನೆ ದೆಹಲಿಯಲ್ಲಿ ಕಾರ್ಯತಂತ್ರ ರೂಪಿಸಿದೆ.

ಕರ್ನಾಟಕದ ಹಿಂದುಳಿದ ವರ್ಗಕ್ಕೆ ಸೇರಿದ ಕೆ.ಎಸ್. ಈಶ್ವರಪ್ಪ ಸೇರಿದಂತೆ ಬಿಜೆಪಿಯ ಪ್ರಮುಖರನ್ನು ನಿನ್ನೆ ದೆಹಲಿಗೆ ಕರೆಸಿಕೊಂಡ ಕೇಂದ್ರ ಗೃಹ ಸಚಿವ ಅಮಿತ್ ಷಾ ಹಾಗೂ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ, ರಾಜ್ಯ ನಾಯಕರೊಂದಿಗೆ ಈ ಸಂಬಂಧ ಸುದೀರ್ಘ ಚರ್ಚೆ ನಡೆಸಿ ವರದಿಯನ್ನು ವಿರೋಧಿಸುವಂತೆ ಆದೇಶ ಮಾಡಿ ಕಳುಹಿಸಿದ್ದಾರೆ.

ದೆಹಲಿಯಲ್ಲಿ ಬಿಜೆಪಿ ನಾಯಕರು ಸಭೆ ನಡೆಸುತ್ತಿದ್ದ ಸಮಯದಲ್ಲೇ ರಾಜ್ಯ ಒಕ್ಕಲಿಗರ ಸಂಘ, ಸಮುದಾಯದ ಮಠಾಧೀಶರ ಸಮ್ಮುಖದಲ್ಲಿ ಜನಪ್ರತಿನಿಧಿಗಳ ಸಭೆ ನಡೆಸಿ ಕಾಂತರಾಜ್ ವರದಿಗೆ ವಿರೋಧ ವ್ಯಕ್ತಪಡಿಸಿದ್ದಾರೆ.

ದೆಹಲಿಯಿಂದ ಹಿಂದಿರುಗುತ್ತಿದ್ದಂತೆ ಈಶ್ವರಪ್ಪ ಸುದ್ದಿಗಾರರೊಂದಿಗೆ ಮಾತನಾಡಿ, ಕಾಂತರಾಜ್ ವರದಿ ಸ್ವೀಕರಿಸಿದ ದಿನವೇ ಸಿದ್ದರಾಮಯ್ಯ ಅಧಿಕಾರ ಕಳೆದುಕೊಳ್ಳುತ್ತಾರೆ ಎಂದು ತಿಳಿಸಿದ್ದಾರೆ.

ವರದಿಯನ್ನು ಬೆಂಕಿಗೆ ಹಾಕಿ, ಅದನ್ನು ಒಪ್ಪಲು ಸಾಧ್ಯವಿಲ್ಲ ಎಂದು ನಾನು ಮುಖ್ಯಮಂತ್ರಿ ಅವರಿಗೆ ಕಿವಿಮಾತು ಹೇಳುತ್ತೇನೆ. ಜಾತಿ–ಜಾತಿ ನಡುವೆ ಸಂಘರ್ಷ ಹುಟ್ಟುಹಾಕುವ ಇಂತಹ ವರದಿಗೆ ಆಸ್ಪದ ಕೊಡಬೇಡಿ.

ಕಳೆದ 8 ವರ್ಷಗಳ ಹಿಂದೆ ಅವೈಜ್ಞಾನಿಕವಾಗಿ ಸಿದ್ಧಗೊಂಡಿರುವ ವರದಿಗೆ ಕಾರ್ಯದರ್ಶಿಗಳ ಸಹಿಯೇ ಇಲ್ಲ. ಅಂತಹ ಸಮೀಕ್ಷೆಯನ್ನು ಒಪ್ಪಲು ಸಾಧ್ಯವಿಲ್ಲ.

ನಾನೂ ಹಿಂದುಳಿದ ವರ್ಗಕ್ಕೆ ಸೇರಿದವನೇ ಈ ವರದಿಯಿಂದ ಯಾವ ವರ್ಗಕ್ಕೂ ಲಾಭವಾಗುವುದಿಲ್ಲ. ಅಪ್ಪ–ಅಮ್ಮ ಇಲ್ಲದ ಕೂಸನ್ನು ಬೀದಿಗೆ ತಂದು ಬೆಂಕಿ ಹಚ್ಚಬೇಡಿ. ಅದರ ಬದಲು ವರದಿಯನ್ನೇ ಸುಟ್ಟುಹಾಕಿ ಎಂದು ಖಾರವಾಗಿ ತಿಳಿಸಿದ್ದಾರೆ.

ಸಿದ್ದರಾಮಯ್ಯ ಹಿಂದುಳಿದ ವರ್ಗಗಳ ಛಾಂಪಿಯನ್ ಎಂದು ಬಿಂಬಿಸಿಕೊಳ್ಳಲು ಅವೈಜ್ಞಾನಿಕ ವರದಿಗೆ ಜೀವ ತುಂಬಲು ಹೊರಟಿದ್ದಾರೆ. ಈ ವರದಿಗೆ ಒಕ್ಕಲಿಗ ಮತ್ತು ವೀರಶೈವ ಸಮುದಾಯದ ಸಂಘಟನೆಗಳು ಮತ್ತು ಮುಖಂಡರು ಈಗಾಗಲೇ ವಿರೋಧ ವ್ಯಕ್ತಪಡಿಸಿ ಯಾವುದೇ ಕಾರಣಕ್ಕೂ ಅನುಷ್ಠಾನಗೊಳಿಸಬಾರದೆಂದು ಮನವಿ ಮಾಡಿದ್ದಾರೆ.

ಕರ್ನಾಟಕದ ಪ್ರಮುಖ ಸಮುದಾಯಗಳ ವಿರೋಧ ವ್ಯಕ್ತಪಡಿಸಿರುವುದನ್ನೇ ಬಿಜೆಪಿ ರಾಜಕೀಯವಾಗಿ ಬಳಸಿಕೊಳ್ಳಲು ಹೊರಟಿದ್ದು, ಕಾಂತರಾಜ್ ವರದಿಗೆ ನೇರವಾಗಿಯೇ ವಿರೋಧ ವ್ಯಕ್ತಪಡಿಸಿದೆ.

ಇದಕ್ಕೂ ಮೊದಲು ವರದಿ ಅನುಷ್ಠಾನಗೊಳಿಸುವಂತೆ ಪಕ್ಷದ ಹಿರಿಯ ನಾಯಕ ಹಾಗೂ ಮಾಜಿ ಸಚಿವ ಕೋಟಾ ಶ್ರೀನಿವಾಸ ಪೂಜಾರಿ, ಸಂಸದ ಪಿ.ಸಿ ಮೋಹನ್ ಎಲ್ಲರೂ ಒತ್ತಾಯಿಸಿದ್ದರು.

ನಿನ್ನೆ ದೆಹಲಿಯಲ್ಲಿ ನಡೆದ ಸಭೆಯಿಂದ ಹಿಂದಿರುಗುತ್ತಿದ್ದಂತೆ ವರದಿಗೆ ವಿರೋಧ ವ್ಯಕ್ತಪಡಿಸಿದ್ದಾರೆ. ಅಷ್ಟೇ ಅಲ್ಲದೆ, ಬಹುಸಂಖ್ಯಾತರ ವಿರುದ್ಧವಾಗಿ ವರದಿ ಸ್ವೀಕರಿಸಿದ್ದೇ ಆದರೆ, ಬೀದಿಗೆ ಇಳಿದು ಹೋರಾಟ ಮಾಡಬೇಕಾಗುತ್ತದೆ ಮತ್ತು ಸರ್ಕಾರ ಪತನಗೊಳಿಸಲು ಸಮುದಾಯಗಳು ಒಂದಾಗಿ ಸಂಘರ್ಷಕ್ಕೆ ಇಳಿಯಬೇಕಾಗುತ್ತದೆ ಎಂದು ಎಚ್ಚರಿಸಿದ್ದಾರೆ.

*Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com*

ಮೈಸೂರು ಮಿತ್ರ ಶನಿವಾರ 4 ನವೆಂಬರ್ 2023



ಮೈಸೂರು ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್ ಪಡೆದ 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಡಾ. ಕೆ.ಬಿ.ಗಣಪತಿ ಅವರನ್ನು ಎಪಿಎನ್ ಪ್ರಾಪರ್ಟೀಸ್ ಮ್ಯಾನೇಜಿಂಗ್ ಪಾರ್ಟನರ್‌ಗಳಾದ ಎ.ಪಿ.ನಾಗೇಶ್ ಮತ್ತು ವೈ.ಸಚಿನ್ ಹೃತ್ಪೂರ್ವಕವಾಗಿ ಅಭಿನಂದಿಸಿದರು.

# ಮೈಸೂರಲ್ಲಿ 62ನೇ ರಾಷ್ಟ್ರೀಯ ಫಾರ್ಮಸಿ ಸಪ್ತಾಹ ಆರಂಭ



ಮೈಸೂರು, ನ 3(ಆರ್‌ಕೆ)– ಮೈಸೂರಿನ ಜೆಎಸ್‌ಎಸ್ ಫಾರ್ಮಸಿ ಕಾಲೇಜಿನಲ್ಲಿ 62ನೇ ರಾಷ್ಟ್ರೀಯ ಫಾರ್ಮಸಿ ಸಪ್ತಾಹ ಇಂದಿನಿಂದ ಆರಂಭವಾಯಿತು.

ದಿ ಇಂಡಿಯನ್ ಫಾರ್ಮಾಸ್ಯುಟಿಕಲ್ ಅಸೋಸಿಯೇಷನ್ (ಐಪಿಎ) ಮೈಸೂರು ಶಾಖೆಯು ಜೆಎಸ್‌ಎಸ್ ಫಾರ್ಮಸಿ ಕಾಲೇಜು ಸಹಯೋಗದೊಂದಿಗೆ ಆಯೋಜಿಸಿದ್ದ ಸಪ್ತಾಹವನ್ನು ತಮಿಳುನಾಡಿನ ಡ್ರಗ್ಸ್ ಕಂಟ್ರೋಲರ್ ಮಾಜಿ ನಿರ್ದೇಶಕ ಡಾ. ಜಿ. ಸೆಲ್ವರಾಜ್ ಉದ್ಘಾಟಿಸಿದರು.

ನಂತರ ಸಮಾರಂಭವನ್ನುದ್ದೇಶಿಸಿ ಮಾತನಾಡಿದ ಅವರು, ರೋಗಿಗಳ ಸುರಕ್ಷತೆಗಾಗಿ ಫಾರ್ಮಸಿಸ್ಟ್‌ಗಳು, ಔಷಧಿ ಉತ್ಪಾದನಾ ಕಂಪನಿಗಳು, ಮೆಡಿಕಲ್ ರೆಪ್ರಸೆಂಟೇಟಿವ್‌ಗಳು, ಔಷಧ ದಾಸ್ತಾನುದಾರರು, ವಿತರಕರು ಹಾಗೂ ವ್ಯಾಪಾರಿಗಳು ಆದ್ಯತೆ ನೀಡಬೇಕು. ಆ ಮೂಲಕ ರೋಗಿಗಳ ಮೇಲೆ ಅಡ್ಡ ಪರಿಣಾಮಗಳಾಗದಂತೆ ಎಚ್ಚರ ವಹಿಸುವುದು ಅತ್ಯಗತ್ಯ ಎಂದರು.

ಭಾರತ ದೇಶವು ಗುಣಮಟ್ಟದ ಔಷಧ ಅನ್ವೇಷಣೆ, ಸಂಶೋಧನೆಯಲ್ಲಿ ವಿಶ್ವದಲ್ಲಿ 3ನೇ ಸ್ಥಾನದಲ್ಲಿದೆ. ಕೋವಿಡ್‌ನಂತಹ ಸಂಕಷ್ಟ ಪರಿಸ್ಥಿತಿಯಲ್ಲೂ ಮಾರಣಾಂತಿಕ ರೋಗದ ವಿರುದ್ಧ ಹೋರಾಡುವ ಔಷಧಿ, ಲಸಿಕೆ ಕಂಡುಹಿಡಿದು ಪ್ರಪಂಚದ ಹಲವು ದೇಶಗಳಿಗೆ ಸರಬರಾಜು ಮಾಡಿದ ಕೀರ್ತಿ ನಮ್ಮ ದೇಶಕ್ಕೆ ಸಲ್ಲುತ್ತದೆ ಎಂದು ಅವರು ಇದೇ ಸಂದರ್ಭ ನುಡಿದರು.

ವೈದ್ಯರು, ಆಸ್ಪತ್ರೆಗಳು, ಸಮುದಾಯವು ರೋಗಿಗಳ ಸುರಕ್ಷತೆಗೆ ಕೈ ಜೋಡಿಸಿ ಫಾರ್ಮಾಸ್ಯುಟಿಕಲ್ ಉದ್ದಿಮೆಯನ್ನು ಬಲಪಡಿಸುವ ಬಗ್ಗೆ ಆದ್ಯತೆ ನೀಡಬೇಕು ಎಂದ ಡಾ. ಸೆಲ್ವರಾಜ್, ಔಷಧ ನಿಯಂತ್ರಣ ಪ್ರಾಧಿಕಾರಗಳೂ ಸಹ ತೀವ್ರ ಕಟ್ಟೆಚ್ಚರ ವಹಿಸುವ ಮೂಲಕ ವೈದ್ಯಕೀಯ ಕ್ಷೇತ್ರವನ್ನು ಬಲಪಡಿಸಬೇಕೆಂದು ಸಲಹೆ ನೀಡಿದರು.

ರೋಗಿಗಳ ಸುರಕ್ಷತೆ ಖಚಿತ ಪಡಿಸಿಕೊಳ್ಳಲು ಫಾರ್ಮಸಿಸ್ಟ್‌ಗಳನ್ನು ಸೇರಿಸಿಕೊಳ್ಳಿ ಎಂಬ ಧ್ಯೇಯದೊಂದಿಗೆ ಆಚರಿಸುತ್ತಿರುವ ಸಪ್ತಾಹದಲ್ಲಿ ಇಂಡಿಯನ್ ಫಾರ್ಮಾಸ್ಯುಟಿಕಲ್ ಅಸೋಸಿಯೇಷನ್ ಮೈಸೂರು ಶಾಖೆ ಅಧ್ಯಕ್ಷ ಡಾ. ಟಿ.ಎಂ. ಪ್ರಮೋದ್ ಕುಮಾರ್, ಉಪಾಧ್ಯಕ್ಷ ಡಾ. ಎಂ. ಮಂಜುನಾಥ್, ಫಾರೂಖಿಯ ಫಾರ್ಮಸಿ ಕಾಲೇಜು ಪ್ರಾಂಶುಪಾಲ ಡಾ. ಹನುಮಂತಾಚಾರ್ ಜೋಷಿ, ಐಪಿಎ ಕಾರ್ಯದರ್ಶಿ ಡಾ. ಆರ್.ಎಸ್. ಚಂದನ್, ಖಜಾಂಚಿ ಡಾ. ಬಿ.ಎಂ. ಗುರುಪಾದಯ್ಯ, ಡಾ. ಶಿಲ್ಪಾ ಪಾಲಾಕ್ಷ, ಡಾ. ಎಸ್. ಮೇಘನಾ, ಎಸ್. ಪ್ರೀತಿ ಪಾಲ್ಗೊಂಡಿದ್ದರು.

# ಕವಿಗಳು ಮನಮುಟ್ಟುವಂತಹ ಕಾವ್ಯಗಳನ್ನು ರಚಿಸಬೇಕು: ಸಾಹಿತಿ ಜಯಪ್ಪ ಹೊನ್ನಾಳಿ ಸಲಹೆ

ಮೈಸೂರು, ನ.3(ಎಸ್‌ಪಿಎನ್)– ಕವಿಗಳು ಅನಂತದಗಲ ಚಿಂತಿಸಬೇಕು. ಅಧ್ಯಯನ ಶೀಲರಾಗಬೇಕು ಹಾಗೂ ಎಲ್ಲರಿಗೂ ಮನಮುಟ್ಟುವಂತಹ ಕಾವ್ಯಗಳನ್ನು ರಚಿಸುವಂತಾಗಬೇಕು ಎಂದು ಹಿರಿಯ ಸಾಹಿತಿ ಜಯಪ್ಪ ಹೊನ್ನಾಳಿ (ಜಯಕವಿ) ಸಲಹೆ ನೀಡಿದರು.



ಮೈಸೂರು ಕಲಾಮಂದಿರದಲ್ಲಿ ರಾಷ್ಟ್ರ ಭಾರತಿ ಚಾರಿಟೆಬಲ್ ಟ್ರಸ್ಟ್ ವತಿಯಿಂದ ಆಯೋಜಿಸಿದ್ದ 'ಕನ್ನಡ ಹಬ್ಬ' ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಸಾಹಿತ್ಯ ಕ್ಷೇತ್ರದಲ್ಲಿ ಕಿರಿಯರು, ಹಿರಿಯರ ಸಾಧನೆಯನ್ನು ಅನುಸರಿಸಿ, ಬೃಹತ್ ಮಟ್ಟಕ್ಕೆ ಬೆಳೆಯಬೇಕು. ಅಲ್ಲದೆ, ಕವಿತೆಗಳನ್ನು ರಚಿಸುವುದಕ್ಕೂ ಮೊದಲು ಅಧ್ಯಯನ ಅಧ್ಯಯನ ಶೀಲತೆ ಮುಖ್ಯ ಇಲ್ಲದಿದ್ದರೆ, ಉತ್ಕೃಷ್ಟ ಕಾವ್ಯ ಮೂಡಿ ಬರುವುದಿಲ್ಲ ಎಂದು ಸಲಹೆ ನೀಡಿದರು.


ಚಿನ್ನದ ಅಂಗಡಿಗೆ ಹೆಚ್ಚಿನ ಜನ ಹೇಗೆ ಬರುವುದಿಲ್ಲವೋ ಹಾಗೆಯೇ ಕವಿಗೋಷ್ಠಿಗಳಿಗೂ ಹೆಚ್ಚಿನ ಜನರು ಬರುವುದಿಲ್ಲ. ಹಾಗಾಗಿ ತಮ್ಮ ಕಾವ್ಯವೋ ಜನರಿಗೆ ಮುಟ್ಟುತ್ತಿಲ್ಲ ಎಂದು ಕೊರಗುವ ಬದಲು ಜನರಿಗೆ, ಸಮಾಜದಲ್ಲಿನ ನೈಜ ಘಟನೆಗಳ ಕುರಿತು ಕವಿತೆಗಳನ್ನು ರಚಿಸುವಂತೆ ಕಿವಿಮಾತು ಹೇಳಿದರು.

ರಾಷ್ಟ್ರ ಭಾರತಿ ಚಾರಿಟೆಬಲ್ ಟ್ರಸ್ಟ್ ವತಿಯಿಂದ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ಹಾಗೂ ಆಸಕ್ತರಿಗೆ ತಮ್ಮ ಸ್ವರಚಿತ ಕಾವ್ಯ ವಾಚನಕ್ಕೆ ವೇದಿಕೆ ಕಲ್ಪಿಸಿರುವುದು ಉತ್ತಮ ಸಂಗತಿ. ಅಲ್ಲದೆ, ಈಗ ತಾನೇ ಕಾವ್ಯಲೋಕಕ್ಕೆ ಪರಿಚಿತರಾಗುವವರು ಈ ವೇದಿಕೆಯನ್ನು ಬಳಸಿ ಕೊಂಡು ಮತ್ತಷ್ಟು ಬೆಳೆಯಲಿ ಎಂದು ಆಶಿಸಿದರು.

ಈ ವೇಳೆ ಲಿಖಿತ, ಮೋನಿಷ, ಮಹೇಶ್ ಮಲೆಯೂರು, ಹಿತಶ್ರೀ, ಸಂಜನ, ಎಸ್.ಕಾರ್ತಿಕ್, ಅನಿಲ್ ಗುಂಡಪ್ಪ ಬಿರಾದ್, ಮನು, ಯಶೋಧ ರಾಮಕೃಷ್ಣ, ರಂಜಿತ, ಸತೀಶ್ ಮೈತ್ರಿ ರಕ್ಷಿತ್, ಇಂದು ಕುಮಾರ್, ಕೃಷ್ಣಮೂರ್ತಿ ಗಣಿಗನೂರು, ಡಾ.ಪಳಿನಿ ಸ್ವಾಮಿ ಮೂಡುಗೂರು, ಪ್ರೇಮಕುಮಾರಿ, ಶಿವರಾಮ ಮಜ್ಜಿಗೆಪುರ, ರೋಷನ್ (ಭೋಪ್ರಾ), ಆಶಾ ಹನಿಯಂಬಾಡಿ, ಬಿ.ಆರ್.ಅನಿತಾ ಚೇತನ, ಭಾರ್ಗವ, ನಂದೀಶ ಬಿ.ಹದಿನಾರು, ಎನ್.ಎಲ್. ಇಂದ್ರಾಣಿ ಕವನ ವಾಚಿಸಿದರು.

# ನಿವೃತ್ತ ಐಬಿ ಅಧಿಕಾರಿ ಆರ್.ಎನ್.ಕುಲಕರ್ಣಿ ಹತ್ಯೆ ಆರೋಪಿಗಳ ಜಾಮೀನು ತಿರಸ್ಕೃತ

ಮೈಸೂರು, ನ.3–ನಿವೃತ್ತ ಐಬಿ ಅಧಿಕಾರಿ ಆರ್.ಎನ್.ಕುಲಕರ್ಣಿ ಅವರ ಹತ್ಯೆ ಪ್ರಕರಣದ ಇಬ್ಬರೂ ಆರೋಪಿಗಳ ಜಾಮೀನು ಅರ್ಜಿಯನ್ನು ಹೈಕೋರ್ಟ್ ಕಳೆದ ಆಗಸ್ಟ್ 18ರಂದು ವಜಾ ಮಾಡಿದೆ. ಕುಲಕರ್ಣಿ ಅವರ ಕೊಲೆ ಪ್ರಕರಣದಲ್ಲಿ ಬಂಧಿತರಾಗಿರುವ ಕುಲಕರ್ಣಿಯವರ ನೆರೆ ಮನೆಯವರಾದ ಮಾದಪ್ಪ ಪುತ್ರ ಮನು ಮತ್ತು ಆತನ ಸ್ನೇಹಿತ ಚಂದ್ರಕಾಂತ್ ಎಂಬುವರ ಪುತ್ರ ವರುಣ್, ಹೈಕೋರ್ಟ್‌ಗೆ ಜಾಮೀನು ಅರ್ಜಿ ಸಲ್ಲಿಸಿದ್ದರು. ಅರ್ಜಿಯ ವಿಚಾರಣೆ ನಡೆಸಿದ ಹೈಕೋರ್ಟ್, ಇದೊಂದು ಗಂಭೀರ ಅಪರಾಧ ಪ್ರಕರಣವಾಗಿದ್ದು, ಆರೋಪಿಗಳನ್ನು ಬಿಡುಗಡೆ ಮಾಡಿದರೆ ಸಾಕ್ಷಿಗಳ ಮೇಲೆ ಪ್ರಭಾವ ಬೀರುವ ಸಾಧ್ಯತೆ ಇದೆ. ಅಲ್ಲದೇ ಈ ಆರೋಪಿಗಳು ಸಾಕ್ಷ್ಯ ನಾಶ ಮಾಡಬಹುದು ಎಂದು ಸರ್ಕಾರಿ ವಕೀಲರು ಮಂಡಿಸಿದ ವಾದವನ್ನು ಮನ್ನಿಸಿ ಇವರಿಬ್ಬರ ಜಾಮೀನು ಅರ್ಜಿಯನ್ನು ಕೋರ್ಟ್ ತಿರಸ್ಕರಿಸಿದೆ.





ಮೈಸೂರಿನ ಹೆಬ್ಬಾಳ್‌ನಲ್ಲಿರುವ ಕನ್ನಿಕಾ ಕಾವೇರಿ ಎಜುಕೇಷನಲ್ ಸೊಸೈಟಿಯಲ್ಲಿ 68ನೇ ಕನ್ನಡ ರಾಜ್ಯೋತ್ಸವ ಆಚರಿಸಲಾಯಿತು.

## ಮೈಸೂರು ದಿ ಬಿಗ್‌ಟೆಕ್ ಶೋ-2023ಕ್ಕೆ ತೆರೆ

# ಪ್ರಾಶಸ್ತ್ಯದ ಸಾರ್ವಜನಿಕ ಸಂಗ್ರಹಣಾ ನೀತಿ ರೂಪಿಸಲು ಚಿಂತನೆ

● ಐಟಿ–ಬಿಟಿ ಸಚಿವರೂ ಆದ ಪ್ರಿಯಾಂಕ್ ಖರ್ಗೆ ಅಭಿಮತ ● ಕರ್ನಾಟಕ ದೇಶ–ವಿದೇಶಕ್ಕೆ ಪ್ರತಿಭೆ, ತಂತ್ರಜ್ಞಾನ ಕಲ್ಪಿಸುತ್ತಿದೆ

ಮೈಸೂರು, ನ.3(ಎಂಕೆ)– ಮೇಡ್ ಇನ್ ಕರ್ನಾಟಕದ ಉತ್ಪನ್ನಗಳ ಜೊತೆಗೆ ನವೋದ್ಯಮಗಳನ್ನು ಉತ್ತೇಜಿಸುವ ನಿಟ್ಟಿನಲ್ಲಿ 'ಪ್ರಾಶಸ್ತ್ಯದ ಸಾರ್ವಜನಿಕ ಸಂಗ್ರಹಣೆ ನೀತಿ'(Preferential Public Procurement Policy) ರೂಪಿಸಲು ಉದ್ದೇಶಿಸಲಾಗಿದೆ ಎಂದು ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ಮೈಸೂರಿನ ಇನ್ಫೋಸಿಸ್ ಕ್ಯಾಂಪಸ್‌ನಲ್ಲಿರುವ ಸಭಾಂಗಣದಲ್ಲಿ ಕರ್ನಾಟಕ ಡಿಜಿಟಲ್ ಎಕಾನಮಿ ಮಿಷನ್ (ಕೆಡಿಇಎಂ) ಹಾಗೂ ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮದ(ಕೆಎಸ್‌ಡಿಸಿ) ಸಹಯೋಗದೊಂದಿಗೆ ಹಮ್ಮಿಕೊಂಡಿರುವ ಎರಡು ದಿನಗಳ 'ಮೈಸೂರು ದಿ ಬಿಗ್‌ಟೆಕ್ ಶೋ–2023' ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, ಬಿಯಾಂಡ್ ಬೆಂಗಳೂರು ಯೋಜನೆಯಡಿ ಹೂಡಿಕೆ ಮಾಡಿ, ಸ್ಟಾರ್ಟ್‌ಅಪ್ ಸೆಲ್‌ನಲ್ಲಿ ನೋಂದಣಿಯಾದ ನವೋದ್ಯಮಗಳ ಉತ್ಪನ್ನವನ್ನು ಮೊದಲು ಸರ್ಕಾರವೇ ಖರೀದಿಸುವ ಉದ್ದೇಶದಿಂದ ಈ ನೀತಿ ರೂಪಿಸಲಾಗುವುದು ಎಂದರು.

ಮೇಕ್ ಇನ್ ಇಂಡಿಯಾ, ಆತ್ಮನಿರ್ಭರ್ ಭಾರತ್ ಎಂಬ ಯೋಜನೆಗಳಿಗೂ ಮೊದಲೇ ಕರ್ನಾಟಕ ಅದರಲ್ಲೂ ಮೈಸೂರಿಗರು ವೋಕಲ್ ಫಾರ್ ಲೋಕಲ್ ಎಂಬುದನ್ನು ಸಾಕಾರಗೊಳಿಸಿದ್ದಾರೆ. ಮೈಸೂರು ಬಲ್ಬ್, ಮೈಸೂರು ಸಿಲ್ಕ್, ಮೈಸೂರು ಕಾಗದ, ಮೈಸೂರು ಶಾಹಿ, ಸಕ್ಕರೆ, ಮೈಸೂರು ತಿಂಡಿ–ಕಾಫಿ ಎಲ್ಲದಕ್ಕೂ ಬ್ರ್ಯಾಂಡ್ ಮೌಲ್ಯ ತಂದುಕೊಟ್ಟಿದ್ದಾರೆ. ಕರ್ನಾಟಕ ನಮ್ಮ ದೇಶಕ್ಕೆ ಮಾತ್ರವಲ್ಲ, ಇಡೀ ವಿಶ್ವಕ್ಕೆ ಪ್ರತಿಭೆ ಹಾಗೂ ತಂತ್ರಜ್ಞಾನವನ್ನು ಕೊಡುಗೆಯಾಗಿ ನೀಡುತ್ತಿದೆ. ಕರ್ನಾಟಕ ಸಮೃದ್ಧವಾದಾಗ ಮಾತ್ರ ಭಾರತ ಸಮೃದ್ಧ ಎನ್ನಬಹುದು ಎಂದು ಹೇಳಿದರು.

ಬೆಂಗಳೂರು ತಂತ್ರಜ್ಞಾನದ ತವರೂರಾಗಿದ್ದು, 4ನೇ ಅತಿ ದೊಡ್ಡ ತಾಂತ್ರಿಕ ಕೇಂದ್ರವಾಗಿ ಬೆಳೆದಿದೆ. ಈ ಸಾಧನೆಗೆ 3 ದಶಕಗಳು ಬೇಕಾದವು. ಕಾಲ್ ಸೆಂಟರ್‌ನಿಂದ ಆರಂಭವಾಗಿ ಜಾಗತಿಕ ಟೆಕ್ ಹಬ್ ಆಗಿ ರೂಪುಗೊಂಡಿದೆ. ರಾಜ್ಯದಲ್ಲಿಂದು 400 ಸಂಶೋಧನೆ ಮತ್ತು ಅಭಿವೃದ್ಧಿ ಕೇಂದ್ರಗಳಿದ್ದು, ಜ್ಞಾನ ಕೇಂದ್ರವಾಗಿ ಗುರುತಿಸಿಕೊಂಡಿದ್ದೇವೆ ಎಂದು ತಿಳಿಸಿದರು.

**ಕೌಶಲ್ಯಾಭಿವೃದ್ಧಿಗೆ ಮೊದಲ ಆದ್ಯತೆ:** ರಾಜ್ಯ ಸರ್ಕಾರದ ಎದುರು ಪ್ರಮುಖ ಮೂರು ಗುರಿಗಳಿದ್ದು, ಅವುಗಳಲ್ಲಿ ಮೊದಲನೆಯದು ಕೌಶಲ್ಯಾಭಿವೃದ್ಧಿಯಾಗಿದೆ. ಅಮೆರಿಕಕ್ಕೆ ಭೇಟಿ ನೀಡಿದ್ದ ಸಂದರ್ಭದಲ್ಲಿ ಹಲವಾರು ಸಭೆಗಳಲ್ಲಿ ಪಾಲ್ಗೊಂಡಿದ್ದೆ. ಅಲ್ಲಿ ಅವರು ಮುಂದಿಟ್ಟ ಬೇಡಿಕೆ ಒಂದೇ ಆಗಿತ್ತು. ಅದು ಪ್ರತಿ ಭಾನ್ವಿತರ ಬೇಡಿಕೆ. ಭಾರತದಿಂದ ಮಾತ್ರ ಪ್ರತಿಭಾನ್ವಿತರನ್ನು ಪೂರೈಸಲು ಸಾಧ್ಯ ಎಂಬುದು ಅವರ ನಂಬಿಕೆಯಾಗಿದೆ. ದೇಶದಿಂದ ಅಂದರೆ ಅದು ರಾಜ್ಯದಿಂದ ಎಂಬುದು ನಮಗೆ ಸ್ಪಷ್ಟವಾಗಿದೆ. ಅದಕ್ಕಾಗಿಯೇ 'ಕೌಶಲ ಸಲಹಾ ಸಮಿತಿ'ಯ ನೇತೃತ್ವವನ್ನು ನಾನೇ ವಹಿಸಿದ್ದೇನೆ. ದೇಶದಲ್ಲಿಯೇ ಮೊದಲ ಬಾರಿಗೆ ಇಂತಹ ಸಮಿತಿ ರಚನೆಯಾಗಿದೆ ಉದ್ಯಮಗಳ ಬೇಡಿಕೆಗೆ ಪೂರಕವಾಗಿ ನುರಿತ ಕೆಲಸಗಾರರನ್ನು ಪೂರೈಸುವ ಸಾಮರ್ಥ್ಯ ನಮ್ಮ ರಾಜ್ಯಕ್ಕಿದ್ದು, ಇತರೆ ರಾಜ್ಯಗಳಿಗಿಂತಲೂ ನಾವು ಮುಂದಿದ್ದೇವೆ ಎಂದು ಹೇಳಿದರಲ್ಲದೆ ಸೆಂಟರ್ ಆಫ್ ಎಕ್ಸಲೆನ್ಸ್ –ಫಿನ್‌ಟೆಕ್, ಗೇಮಿಂಗ್ ಆಕ್ಸಿಲರೇಟರ್, ಹೆಲ್ತ್ ಸೈನ್ಸ್, ಬಯೋಟೆಕ್ ಆಕ್ಸಿಲರೇಟರ್‌ಗಳನ್ನು ಸ್ಥಾಪಿಸುವ ಗುರಿ ಇದ್ದು, ಈ ಕ್ಷೇತ್ರಗಳಲ್ಲಿ ಪ್ರಾವಿಣ್ಯತೆ ಇರುವವರಿಗೆ ಇವುಗಳನ್ನು ಮುನ್ನಡೆಸುವ ಜವಾಬ್ದಾರಿ ವಹಿಸಲಾಗುತ್ತದೆ. ಈ ಶ್ರೇಷ್ಠತಾ ಕೇಂದ್ರಗಳಿಗೆ ಎಲ್ಲಾ ರೀತಿಯ ಬೆಂಬಲ ನೀಡಲು ಸರ್ಕಾರ ಸಿದ್ಧವಾಗಿದೆ ಎಂದರು.

**ಬಿಯಾಂಡ್ ಬೆಂಗಳೂರಿಗೆ ಮತ್ತಷ್ಟು ಬಲ:** ಪ್ರತಿ ದೇಶದೊಂದಿಗೆ ನಿರ್ದಿಷ್ಟ ಕಾರಿಡಾರ್ ಸ್ಥಾಪಿಸಲು ಅವಕಾಶವಿದ್ದು, ಅದರ ಸದುಪಯೋಗ ಮಾಡಿಕೊಳ್ಳಲಾಗುವುದು. ಅದಕ್ಕಾಗಿ ರಾಜ್ಯದ ಎರಡು ಮತ್ತು ಮೂರನೇ ಹಂತದ ನಗರಗಳ ಅಭಿವೃದ್ಧಿಗಾಗಿ ಬಿಯಾಂಡ್ ಬೆಂಗಳೂರು ಯೋಜನೆಗೆ ಮತ್ತಷ್ಟು ಬಲ ತುಂಬಲಾಗುವುದು. ಇಂಥ ನಗರಗಳಲ್ಲಿ ಹೆಚ್ಚು ಉದ್ಯಮಗಳು ಸ್ಥಾಪನೆಯಾದರೆ, ಸ್ಥಳೀಯವಾಗಿ ಹೆಚ್ಚು ಉದ್ಯೋಗಾವಕಾಶಗಳು ಸೃಷ್ಟಿಯಾಗುತ್ತದೆ. ಹಾಗೆಯೇ ಸ್ಟಾರ್ಟ್‌ಅಪ್‌ಗಳಿಗೆ ಪ್ರತ್ಯೇಕ ಕಾರಿಡಾರ್ ಸ್ಥಾಪಿಸಲು ಸರ್ಕಾರ ಬದ್ಧವಾಗಿದೆ ಎಂದರು.

**ಬೆಂಗಳೂರು ಟೆಕ್ ಸಮ್ಮಿಟ್:** ನ.29 ರಿಂದ ಡಿ.1ರವರೆಗೆ ನಡೆಯುವ ಬೆಂಗಳೂರು ಟೆಕ್ ಸಮ್ಮಿಟ್‌ನಲ್ಲಿ ಪಾಲ್ಗೊಂಡು ಕಾರ್ಯಕ್ರಮವನ್ನು ಯಶಸ್ವಿಗೊಳಿಸುವಂತೆ ಕೋರಿದ ಸಚಿವರು, ಸರ್ಕಾರ ನಿಮ್ಮ ಬೇಡಿಕೆಗಳನ್ನು ಕೇಳಲು ಸಿದ್ಧವಿದ್ದು, ನಿಮ್ಮ ಅಗತ್ಯಗಳಿಗೆ ತಕ್ಕಂತೆ ಕ್ರಮವಹಿಸಲಾಗುವುದು ಎಂದು ಭರವಸೆ ನೀಡಿದರು. ಬಳಿಕ ಪ್ರಾದೇಶಿಕ ಸೈಬರ್ ಸೆಕ್ಯೂರಿಟಿ ಶ್ರೇಷ್ಠತಾ ಕೇಂದ್ರ(ಸೈಸೆಕ್), ವಲ್ಲಿಯಪ್ಪ ಫೌಂಡೇಷನ್, ಸ್ಟಾರ್ಟ್‌ಅಪ್ ಪಯಣಂ ಹಾಗೂ ಕೆಡಿಇಎಂ ನಡುವಿನ ಒಪ್ಪಂದ ಪತ್ರಕ್ಕೆ ಸಮಾರಂಭದಲ್ಲಿ ಸಹಿ ಹಾಕಲಾಯಿತು. ಇದೇ ವೇಳೆ 'ಮೈಸೂರು ದಿ ಬಿಗ್‌ಟೆಕ್ ಶೋ–2023'ನಲ್ಲಿ ಭಾಗವಹಿಸಿದ ಉದ್ಯಮಿಗಳಿಗೆ ಪ್ರಶಂಸನಾ ಪತ್ರ ಹಾಗೂ ಸ್ಮರಣಿಕೆ ನೀಡಿ ಅಭಿನಂದಿಸಲಾಯಿತು.

ಐಟಿ–ಬಿಟಿ, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಕಾರ್ಯದರ್ಶಿ ಏಕರೂಪ ಕೌರ್, ಕೆಡಿಇಎಂನ ಸಿಇಓ ಸಂಜೀವ್ ಗುಪ್ತಾ, ಎಕ್ಸೆಲ್ ಸಾಫ್ಟ್ ಟೆಕ್ನಾಲಜೀಸ್ ಸಂಸ್ಥಾಪಕ ಮತ್ತು ಸಿಇಓ ಸುಧನ್ವ ಧನಂಜಯ, ಗ್ಲೋಬಲ್ ಫ್ಯಾಬ್ ಇಂಜಿನಿಯರಿಂಗ್‌ನ ಜಿತೇಂದ್ರ ಛಡ್ಡ, ಜಯಶಂಕರ್ ಸೀತಾರಾಮನ್ ಮತ್ತಿತರರಿದ್ದರು.





ಮೈಸೂರು ದಿ ಬಿಗ್‌ಟೆಕ್ ಶೋ–2023 ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಆರ್.ಪ್ರೊಸೆಸ್ಸ್ ಔಟ್‌ಸೋರ್ಸ್ ಸರ್ವೀಸ್ ಪ್ರೈ.ಲಿ. ಸಂಸ್ಥಾಪಕಿ ಸವಿತಾ ಮಲ್ಲಪ್ಪ ಅವರಿಗೆ ಐಟಿ–ಬಿಟಿ ಸಚಿವ ಪ್ರಿಯಾಂಕ್ ಖರ್ಗೆ ಸ್ಮರಣಿಕೆ ನೀಡಿ ಅಭಿನಂದಿಸಿದರು. ಐಟಿ–ಬಿಟಿ, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಕಾರ್ಯದರ್ಶಿ ಏಕರೂಪ ಕೌರ್, ಕರ್ನಾಟಕ ಡಿಜಿಟಲ್ ಎಕಾನಮಿ ಮಿಷನ್(ಕೆಡಿಇಎಂ) ಅಧ್ಯಕ್ಷ ಬಿ.ವಿ.ನಾಯ್ಡು, ಸಿಇಓ ಸಂಜೀವ್ ಗುಪ್ತಾ, ಎಕ್ಸೆಲ್ ಸಾಫ್ಟ್ ಟೆಕ್ನಾಲಜೀಸ್ ಸಂಸ್ಥಾಪಕ ಸುಧನ್ವ ಧನಂಜಯ ಮತ್ತಿತರಿದ್ದರು.

> ಕಳೆದೆರಡು ವರ್ಷಗಳಲ್ಲಿ ಮೈಸೂರು ಟೆಕ್ ಕ್ಲಸ್ಟರ್‌ನಲ್ಲಿ ಸಾಕಷ್ಟು ಪ್ರಗತಿ ಆಗಿದೆ. ಒಂದೇ ವರ್ಷದಲ್ಲಿ ಐಬಿಎಂ, ಹಿಂದೂಜಾ ಮುಂತಾದ 12 ಕಂಪನಿಗಳು ಮೈಸೂರಿಗೆ ಬಂದಿವೆ. ಮೈಸೂರು ಎಲೆಕ್ಟ್ರಾನಿಕ್ ಕ್ಲಸ್ಟರ್‌ನಲ್ಲಿ ಉದ್ಯಮ ಸ್ಥಾಪಿಸಲು ಹಲವು ಕಂಪನಿಗಳು ಮುಂದೆ ಬಂದಿವೆ. ಸರ್ಕಾರ ಹಾಗೂ ಕಂಪನಿಗಳು ಕೈ ಜೋಡಿಸಿದರೆ ಜಾಗತಿಕ ನಕ್ಷೆಯಲ್ಲಿ ಮೈಸೂರು ದೊಡ್ಡ ಸ್ಥಾನ ಪಡೆಯುವುದರಲ್ಲಿ ಯಾವುದೇ ಸಂದೇಹವಿಲ್ಲ.
>
> - ಬಿ.ವಿ.ನಾಯ್ಡು, ಕೆಡಿಇಎಂ ಅಧ್ಯಕ್ಷ

**ಭಾರತೀಯ ನಾವೀನ್ಯತೆ ಸೂಚ್ಯಂಕದಲ್ಲಿ ಮೊದಲ ಸ್ಥಾನ...**

> ದೇಶದ ಮೂರನೇ ಒಂದು ಭಾಗದಷ್ಟು ಪ್ರತಿಭಾನ್ವಿತರು, 25 ಸಾವಿರ ಸ್ಟಾರ್ಟ್ ಅಪ್, 140 ಟೆಕ್ ಇನ್‌ಕ್ಯೂಬೇಟರ್, 43 ಯೂನಿಕಾರ್ನ್‌ಗಳು ಹಾಗೂ 47 ಸೂನಿಕಾನ್(ಶೀಘ್ರದಲ್ಲೇ ಯೂನಿಕಾರ್ನ್ ಪಟ್ಟಿಗೆ ಸೇರುವ ಉದ್ಯಮ) ರಾಜ್ಯದಲ್ಲಿವೆ. ಶೇ.40ರಷ್ಟು ಎಲೆಕ್ಟ್ರಾನಿಕ್ ಉತ್ಪನ್ನಗಳ ಉತ್ಪಾದನೆ, ಶೇ.52 ರಷ್ಟು ಮಷೀನ್ ಟೂಲ್ಸ್, ಶೇ.65ರಷ್ಟು ಏರೋಸ್ಪೇಸ್ ಮತ್ತು ರಕ್ಷಣಾ ಸಲಕರಣೆಗಳ ಉತ್ಪಾದನೆ ನಮ್ಮಲ್ಲಿ ಆಗುತ್ತಿದೆ. ಸುಲಲಿತ ವ್ಯವಹಾರಕ್ಕೆ ಒತ್ತು ನೀಡುವ ಕರ್ನಾಟಕ ರಾಜ್ಯ ಭಾರತೀಯ ನಾವೀನ್ಯತೆ ಸೂಚ್ಯಂಕದಲ್ಲಿ ಮೊದಲ ಸ್ಥಾನದಲ್ಲಿದೆ. ವಿದೇಶಿ ನೇರ ಹೂಡಿಕೆ, ರಫ್ತು ಸನ್ನದ್ಧತೆ ಸೂಚ್ಯಂಕದಲ್ಲಿಯೂ ಅಗ್ರ ಸ್ಥಾನದಲ್ಲಿದೆ.
>
> - ಪ್ರಿಯಾಂಕ್ ಖರ್ಗೆ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವ

> ಸ್ಟಾರ್ಟ್‌ಅಪ್ ಪಸು ಬೆಂಗಳೂರಿಗಷ್ಟೆ ಸೀಮಿತವಾಗಿಲ್ಲ ರಾಜ್ಯಾದ್ಯಂತ ವಿಸ್ತರಿಸಿದೆ ಎಂದು ಜಗತ್ತಿಗೆ ತೋರಿಸಿಕೊಡಬೇಕಿದೆ. ರಾಜ್ಯದಲ್ಲಿ ಅಭಿವೃದ್ಧಿ ಹೊಂದುತ್ತಿರುವ ಟೆಕ್ ಕ್ಲಸ್ಟರ್‌ಗೆ ಮೈಸೂರು ಕ್ಲಸ್ಟರ್ ಅತ್ಯುತ್ತಮ ಸಾಕ್ಷಿ. 'ಬ್ಲೂ' ಕಾರ್ಯಕ್ರಮದ ಮೂಲಕ ರಾಜ್ಯದ ನಾನಾ ಭಾಗಗಳಲ್ಲಿರುವ ಟೆಕ್ ಕ್ಲಸ್ಟರ್‌ಗಳಿಗೆ ಬೆಂಬಲ ನೀಡಲಾಗುತ್ತಿದೆ. ಈ ಕ್ಲಸ್ಟರ್‌ಗಳು ವರ್ಷದಿಂದ ವರ್ಷಕ್ಕೆ ಅಭಿವೃದ್ಧಿ ಹೊಂದುವ ವಿಶ್ವಾಸ ನಮಗಿದೆ.
>
> - ಸಂಜೀವ್ ಗುಪ್ತಾ, ಕೆಡಿಇಎಂ ಸಿಇಓ

# ನೆದರ್ಲೆಂಡ್ಸ್ ವಿರುದ್ಧ ಅಫ್ಘಾನ್‌ಗೆ ಜಯ





ಲಕ್ನೋ, ನ.3– ಬ್ಯಾಟಿಂಗ್ ಹಾಗೂ ಬೌಲಿಂಗ್‌ನಲ್ಲಿ ಉತ್ತಮ ಪ್ರದರ್ಶನ ನೀಡಿದ ಅಫ್ಘಾನಿಸ್ತಾನ ನೆದರ್ಲೆಂಡ್ಸ್ ವಿರುದ್ಧ 7 ವಿಕೆಟ್‌ಗಳ ಭರ್ಜರಿ ಜಯ ಸಾಧಿಸಿದೆ. ಇದರೊಂದಿಗೆ ಆಡಿರುವ 7 ಪಂದ್ಯಗಳ ಪೈಕಿ 4 ಗೆಲುವು, 3 ಸೋಲಿನೊಂದಿಗೆ ಅಂಕಪಟ್ಟಿಯಲ್ಲಿ 5ನೇ ಸ್ಥಾನಕ್ಕೇರಿದೆ.

ಇಲ್ಲಿನ ಭಾರತರತ್ನ ಶ್ರೀಅಟಲ್ ಬಿಹಾರಿ ವಾಜಪೇಯಿ ಏಕನಾ ಕ್ರಿಕೆಟ್ ಸ್ಟೇಡಿಯಂನಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟ್ ಮಾಡಿದ ನೆದರ್ಲೆಂಡ್ಸ್ 46.3 ಓವರ್‌ಗಳಲ್ಲಿ 179 ರನ್‌ಗಳಿಗೆ ಆಲೌಟಾಯಿತು. ತಂಡದ ಪರ ಸೈಬ್ರಾಂಡ್ ಎಂಗಲ್‌ಬ್ರೆಕ್ಟ್ 58, ಮ್ಯಾಕ್ಸ್ ಓಡೌಡ್ 42, ಕಾಲಿನ್ ಅಕರ್ಮನ್ 29, ಆರ್ಯನ್ ದತ್ 10, ವ್ಯಾನ್ ಡೆರ್ ಮೆರ್ವೆ 11 ರನ್ ಗಳಿಸಿದರು. ಅಫ್ಘಾನಿಸ್ತಾನ ಪರ ಮೊಹಮ್ಮದ್ ನಬಿ 3, ನೂರ್ ಅಹಮದ್ 2, ಮುಜೀಬ್ ಉರ್ ರೆಹಮಾನ್ 1 ವಿಕೆಟ್ ಕಬಳಿಸಿದರು.

ನೆದರ್ಲೆಂಡ್ಸ್ ನೀಡಿದ 181 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ಅಫ್ಘಾನಿಸ್ತಾನ 31.3 ಓವರ್‌ಗಳಲ್ಲಿ 3 ವಿಕೆಟ್ ನಷ್ಟಕ್ಕೆ 181 ರನ್ ಬಾರಿಸಿ ಗೆಲುವು ಕಂಡಿತು. ಈ ಗೆಲುವಿನೊಂದಿಗೆ ಸೆಮಿಫೈನಲ್ ಪ್ರವೇಶದ ಕನಸನ್ನು ಜೀವಂತವಾಗಿಟ್ಟುಕೊಂಡಿತು.

ಅಫ್ಘಾನ್ ಪರ ನಾಯಕ ಹಷ್ಮತುಲ್ಲಾ ಶಾಹಿದಿ ಅಜೇಯ 56, ರಹಮತ್ ಶಾ 52, ಅಜ್ಮತುಲ್ಲಾ ಒಮರ್ಜಾಯ್ 31, ಇಬ್ರಾಹಿಂ ಜದ್ರಾನ್ 20, ರಹಮಾನುಲ್ಲಾ ಗುರ್ಬಾಜ್ 10 ರನ್ ಗಳಿಸಿದರು. ನೆದರ್ಲೆಂಡ್ಸ್ ಪರ ಲೋಗನ್ ವ್ಯಾನ್ ಬೀಕ್, ಸಾಕಿಬ್ ಜುಲ್ಫಿಕರ್ ಹಾಗೂ ವ್ಯಾನ್ ಡೆರ್ ಮೆರ್ವೆ ತಲಾ ಒಂದೊಂದು ವಿಕೆಟ್ ಪಡೆದರು. ಮೊಹಮ್ಮದ್ ನಬಿ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.



ಸರ್ಕಾರಿ ಕಾರ್ಯಕ್ರಮಕ್ಕಾಗಿ ಮೈಸೂರಿಗೆ ಆಗಮಿಸಿದ್ದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಅವರನ್ನು ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಮೈಸೂರು–ಕೊಡಗು ಕ್ಷೇತ್ರದ ಆಕಾಂಕ್ಷಿಯೂ ಆದ ಕೆಪಿಸಿಸಿ ಕಾರ್ಯದರ್ಶಿ ಗುರುಪಾದಸ್ವಾಮಿ ಅಭಿನಂದಿಸಿದರು. ಚಿತ್ರದಲ್ಲಿ ಕೆಪಿಸಿಸಿ ಸದಸ್ಯ ನಾಗವಾಲ ಸಿ.ನರೇಂದ್ರ ಇದ್ದಾರೆ.

# ನ.6ರಿಂದ 10ರವರೆಗೆ ಸುದರ್ಶನ ಕ್ರಿಯೆ ಶಿಬಿರ

ಮೈಸೂರು,ನ.3–ಪೂಜ್ಯ ಶ್ರೀ ರವಿಶಂಕರ್ ಗುರೂಜಿಯವರ ಆರ್ಟ್ ಆಫ್ ಲಿವಿಂಗ್ ವತಿಯಿಂದ ಲಲಿತಾದ್ರಿಪುರ ರಸ್ತೆಯಲ್ಲಿರುವ ಆರ್ಟ್ ಆಫ್ ಲಿವಿಂಗ್ ಆಶ್ರಮದಲ್ಲಿ ನ.6ರಿಂದ 10ರವರೆಗೆ ಆತಂಕ ಹಾಗೂ ಒತ್ತಡವನ್ನು ಎದುರಿಸಲು ಲಯ ಬದ್ಧ ಉಸಿರಾಟದ ಪ್ರಕ್ರಿಯೆ ಸುದರ್ಶನ ಕ್ರಿಯೆಯನ್ನು ಕಲಿಸುವ ಶಿಬಿರವನ್ನು ಏರ್ಪಡಿಸಲಾಗಿದೆ. ಶಿಬಿರವು ಬೆಳಗ್ಗೆ 6ರಿಂದ 8.30 ಹಾಗೂ ಸಂಜೆ 6ರಿಂದ 8.30ರವರೆಗೆ ನಡೆಯಲಿದೆ. ಹೆಚ್ಚಿನ ಮಾಹಿತಿಗೆ, 9480476825, 9845685892 ಸಂಪರ್ಕಿಸಬಹುದು.

# ನಮ್ಮ ಸರ್ಕಾರ ಟೀಕೆ ಮಾಡುವುದೇ ಆದರೆ ಬಿಜೆಪಿ, ಜೆಡಿಎಸ್‌ನವರು ಗ್ಯಾರಂಟಿ ಪ್ರಯೋಜನ ಪಡೆಯಬೇಡಿ

● ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್‌ರಾಜ್ ಸಚಿವ ಪ್ರಿಯಾಂಕ್ ಖರ್ಗೆ ತಿರುಗೇಟು
● ವಾಸ್ತವವಾಗಿ ಈ ಎರಡೂ ಪಕ್ಷದವರು ಗ್ಯಾರಂಟಿ ಫಲಾನುಭವಿಗಳಾಗಿದ್ದಾರೆ

ಮೈಸೂರು, ನ.3(ಎಸ್‌ಬಿಡಿ)– ಬಿಜೆಪಿ ಹಾಗೂ ಜೆಡಿಎಸ್‌ನವರೂ ಕಾಂಗ್ರೆಸ್‌ನ ಗ್ಯಾರಂಟಿ ಕಾರ್ಯಕ್ರಮಗಳ ಫಲಾನುಭವಿಗಳಾಗಿದ್ದಾರೆ. ಹೀಗಿರುವಾಗ ವಿರೋಧ ಪಕ್ಷದ ನಾಯಕರಿಗೆ ಕಾಂಗ್ರೆಸ್ ಸರ್ಕಾರವನ್ನು ಟೀಕಿಸುವ ನೈತಿಕತೆ ಇಲ್ಲ ಎಂದು ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ಮೈಸೂರಿನ ಕಾಂಗ್ರೆಸ್ ಭವನಕ್ಕೆ ಶುಕ್ರವಾರ ಭೇಟಿ ನೀಡಿದ್ದ ಅವರು ಸಭೆಯನ್ನುದ್ದೇಶಿಸಿ ಮಾತನಾಡಿ, ಪ್ರತಿಯೊಂದು ಮನೆಯ ಆರ್ಥಿಕತೆ ಸುಭದ್ರವಾಗಿದ್ದರೆ ಮಾತ್ರ ದೇಶದ ಅಭಿವೃದ್ಧಿ ಸಾಧ್ಯ. ಈ ನಿಟ್ಟಿನಲ್ಲಿ ಪ್ರತಿ ಕುಟುಂಬಕ್ಕೆ ಆರ್ಥಿಕ ಶಕ್ತಿ ತುಂಬುವ ಉದ್ದೇಶದಿಂದ ಐದು ಗ್ಯಾರಂಟಿಗಳನ್ನು ನೀಡಲಾಗಿದೆ. ಶಕ್ತಿ ಯೋಜನೆಯಡಿ ನಿತ್ಯ 60 ಲಕ್ಷ ಮಹಿಳೆಯರು ಸಾರಿಗೆ ಬಸ್‌ನಲ್ಲಿ ಉಚಿತವಾಗಿ ಪ್ರಯಾಣಿಸುತ್ತಿದ್ದಾರೆ. 75 ಲಕ್ಷ ಮನೆಗಳಿಗೆ ಗೃಹಜ್ಯೋತಿ ಪ್ರಯೋಜನ ಸಿಕ್ಕಿದೆ. 93 ಲಕ್ಷ ಮಹಿಳೆಯರಿಗೆ ಗೃಹಲಕ್ಷ್ಮಿ ಯೋಜನೆ ತಲುಪಿದೆ. ಸುಮಾರು 3.69 ಕೋಟಿ ಫಲಾನುಭವಿಗಳು ಅನ್ನಭಾಗ್ಯ ಯೋಜನೆಯಡಿ ಬರುತ್ತಾರೆ ಎಂದು ತಿಳಿಸಿದರು.

ಕಾಂಗ್ರೆಸ್‌ನವರು ಮಾತ್ರ ಗ್ಯಾರಂಟಿಗಳ ಪ್ರಯೋಜನ ಪಡೆದಿದ್ದಾರೆಯೇ?. ಬಿಜೆಪಿ ಹಾಗೂ ಜೆಡಿಎಸ್ ನವರು ಇದರಲ್ಲಿಲ್ಲವೇ?. ಹೆಚ್.ಡಿ.ಕುಮಾರಸ್ವಾಮಿ, ಪ್ರತಾಪ್ ಸಿಂಹ ಅವರ ಬೆಂಬಲಿಗರೂ ಕೂಡ ಗಪ್‌ಚುಪ್ ಆಗಿ ಯೋಜನೆಗಳು ಪ್ರಯೋಜನ ಪಡೆಯುತ್ತಿದ್ದಾರೆ. ಗೃಹಲಕ್ಷ್ಮಿ ಯೋಜನೆಗೆ ಕಾಂಗ್ರೆಸ್‌ನವರಿಗಿಂತ ಬಿಜೆಪಿಯವರೇ ಹೆಚ್ಚು ನೋಂದಣಿ ಮಾಡಿಸಿಕೊಂಡಿದ್ದಾರೆ. 'ಸಮಬಾಳು ಸಮಪಾಲು' ತತ್ವದಡಿ ನಮ್ಮ ಸರ್ಕಾರ ಕೆಲಸ ಮಾಡುತ್ತಿದೆ. ಎಲ್ಲರಿಗೂ ಕಾರ್ಯಕ್ರಮಗಳು ತಲುಪಬೇಕು. ಆದರೆ ಒಂದು ಕಡೆ ನೋಂದಣಿ ಮಾಡಿಸುವುದು ಮತ್ತೊಂದೆಡೆ ಸರ್ಕಾರವನ್ನು ಟೀಕೆ ಮಾಡುವುದು ಸರಿಯಲ್ಲ. ಸರ್ಕಾರವನ್ನು ಟೀಕೆ ಮಾಡುವುದಾದರೆ ಪ್ರಯೋಜನ ಪಡೆಯಬೇಡಿ. ಆಗ ಮಾತನಾಡಲು ನೈತಿಕತೆ ಇರುತ್ತದೆ ಎಂದು ಗ್ಯಾರಂಟಿಗಳ ಟೀಕಾಕಾರರಿಗೆ ತಿರುಗೇಟು ನೀಡಿದರು.





ಬಿಜೆಪಿ ಸರ್ಕಾರವಿದ್ದಾಗ ಧರ್ಮ, ಶ್ರೀರಾಮ ಎಂದರು. ಆದರೆ ಆಗ ಯಾರೂ ದೇವಸ್ಥಾನಕ್ಕೆ ಹೋಗಲಿಲ್ಲ. ಆದರೆ ಕಾಂಗ್ರೆಸ್‌ನ ಶಕ್ತಿ ಯೋಜನೆಯಿಂದ ದೇವಸ್ಥಾನಗಳೂ ತುಂಬಿವೆ, ಅರ್ಚಕರ ತಟ್ಟೆಯೂ ತುಂಬುತ್ತಿದೆ. ಧರ್ಮಸ್ಥಳದ ವೀರೇಂದ್ರ ಹೆಗ್ಗಡೆಯವರೇ ಸಿದ್ದರಾಮಯ್ಯನವರಿಗೆ ಪತ್ರ ಬರೆದು ಭಕ್ತರು ನಿಮ್ಮ ಹೆಸರಲ್ಲಿ ಪೂಜೆ ಮಾಡಿಸುತ್ತಿದ್ದಾರೆಂದು ತಿಳಿಸಿದ್ದಾರೆ. ಸರ್ಕಾರ ಬಂದು ಆರು ತಿಂಗಳಲ್ಲಿ 4 ಗ್ಯಾರಂಟಿಗಳನ್ನು ಅನುಷ್ಠಾನಕ್ಕೆ ತರುವ ಮೂಲಕ ಜನರಿಗೆ ಆರ್ಥಿಕ ಶಕ್ತಿ ತುಂಬುವ ಕೆಲಸ ಮಾಡಿದ್ದೇವೆ. ಆದರೆ ಪ್ರಧಾನಿ ಮೋದಿ ಅವರು ಪುಕ್ಕಟ್ಟೆ ಕೊಟ್ಟರೆ ಅದನ್ನು ಕಲ್ಯಾಣ ಕಾರ್ಯಕ್ರಮ ಎನ್ನುವವರು ಕಾಂಗ್ರೆಸ್ ಕಾರ್ಯಕ್ರಮಗಳಿಂದ ಬೊಕ್ಕಸ ಖಾಲಿಯಾಗುತ್ತಿದೆ ಎಂದು ಟೀಕಿಸುತ್ತಾರೆ ವ್ಯಂಗ್ಯವಾಡಿದರು.

**ಜನರ ಸಿಟ್ಟು ಮತವಾಯಿತು:** ಬಿಜೆಪಿ ಸರ್ಕಾರದಲ್ಲಿ ಜನಸಾಮಾನ್ಯರ ಬದುಕು ನರಕವಾಗಿತ್ತು. ಸರ್ಕಾರಿ ಹುದ್ದೆ ನೇಮಕಾತಿಯಿಂದ ಹಿಡಿದು ಎಲ್ಲೆಡೆ ಭ್ರಷ್ಟಾಚಾರ ತುಂಬಿತ್ತು. ವಿಧಾನಸೌಧ ವ್ಯಾಪಾರಿ ಸೌಧವಾಗಿ ಬದಲಾಗಿತ್ತು. ಅಭಿವೃದ್ಧಿ ಹಾಗೂ ಉದ್ಯೋಗಾವಕಾಶದಿಂದ ಗುರುತಿಸಿಕೊಳ್ಳುತ್ತಿದ್ದ ಕರ್ನಾಟಕ 40 ಪರ್ಸೆಂಟ್ ಕಮಿಷನ್ ಅಪಕೀರ್ತಿಗೆ ಗುರಿಯಾಗಿತ್ತು. ಸಂವಿಧಾನದ ಆಶಯಗಳನ್ನು ಗಾಳಿಗೆ ತೂರಲಾಗಿತ್ತು. ಯಾರಿಗೂ ಸ್ವಾತಂತ್ರ್ಯವಿರಲಿಲ್ಲ. ಈ ಬಗ್ಗೆ ಜನರಲ್ಲಿದ್ದ ಸಿಟ್ಟು ಮತದಾನದಲ್ಲಿ ವ್ಯಕ್ತವಾಯಿತು. ವೀರೇಂದ್ರ ಪಾಟೀಲ್ ಕಾಲದ ನಂತರ ಕಾಂಗ್ರೆಸ್ ಇಷ್ಟು ಬಹುಮತ ಪಡೆಯಲು ಸಾಧ್ಯವಾಯಿತು ಎಂದು ತಿಳಿಸಿದರು.

**ಪ್ರಚಾರದ ಕೊರತೆ:** ಬಿಜೆಪಿ ನಾಯಕರೆಲ್ಲರೂ ಏಕಪಾತ್ರಾಭಿನಯ ಮಾಡುತ್ತಿದ್ದಾರೆ. ಜೆಡಿಎಸ್ ಜೊತೆ ಜನರೂ ಇಲ್ಲ, ಸಂಘಟನೆಯೂ ಇಲ್ಲ, ಬಿಜೆಪಿಯೊಂದಿಗೆ ಹೋದಾಗಿನಿಂದ ಜಾತ್ಯಾತೀತವೂ ಇಲ್ಲವಾಗಿದೆ. ಎರಡೂ ಪಕ್ಷಗಳಲ್ಲಿ ನಾಯಕತ್ವದ ಕೊರತೆ ಇದೆ. ನಾವು ಇದರ ಪ್ರಯೋಜನ ಪಡೆಯಬೇಕು. ಕಾಂಗ್ರೆಸ್‌ನಲ್ಲಿ ಆಚಾರ ಹಾಗೂ ವಿಚಾರವಿದೆ. ಆದರೆ ಪ್ರಚಾರದ ಕೊರತೆ ಇದೆ. ಕಾಂಗ್ರೆಸ್ ಸರ್ಕಾರದ ಸಾಧನೆಯನ್ನು ಪ್ರಚಾರ ಮಾಡಬೇಕು. ತಮ್ಮ ಹಂತಗಳಲ್ಲಿ ಜನರ ಮನವೊಲಿಸಬೇಕು. ಜನ ನಮಗೆ ಅಧಿಕಾರ ನೀಡಿರುವುದು ಏಕೆ? ನಮ್ಮ ಜವಾಬ್ದಾರಿ ಏನು? ಎಂಬುದನ್ನು ಮರೆಯಬಾರದು ಎಂದು ಕಿವಿಮಾತು ಹೇಳಿದರು.

**ನಿಮ್ಮ ಆಶೀರ್ವಾದದ ಫಲ:** ಸಿದ್ದರಾಮಯ್ಯನವರು ಮುಖ್ಯಮಂತ್ರಿ ಆಗಿರುವುದು, ನಾನು ಸಚಿವನಾಗಿರುವುದು ನಿಮ್ಮ ಆಶೀರ್ವಾದ, ಪರಿಶ್ರಮದಿಂದ. ನಿಮ್ಮಿಂದ ನಾವಿರುವುದು. ಕಾರ್ಯಕರ್ತರು ಒಪ್ಪಿದರೆ ಮಾತ್ರ ಲೀಡರ್ ಆಗಲು ಸಾಧ್ಯ. ಸರ್ಕಾರದ ಮೇಲೆ ನಿಮ್ಮ ನಿರೀಕ್ಷೆ ಸಾಕಷ್ಟಿದೆ ಎಂಬ ಅರಿವಿದೆ. ತಪ್ಪಿದ್ದರೆ ಹೇಳಿ. ಖಂಡಿತವಾಗಿ ತಿದ್ದುಕೊಳ್ಳುತ್ತೇವೆ. ಆದರೆ ಸಚಿವರು, ಶಾಸಕರು ಕಾರ್ಯಕರ್ತರನ್ನು ಮರೆತು ವಿಜಯೋತ್ಸವದಲ್ಲಿದ್ದಾರೆ ಎಂದು ತಪ್ಪು ಭಾವಿಸಬೇಡಿ. ನಿಮ್ಮ ಸಹಕಾರ, ಸಹನೆ ಮತ್ತು ಆಶೀರ್ವಾದದಿಂದ ಮಾತ್ರ ಉತ್ತಮ ಆಡಳಿತ ನೀಡಲು ಸಾಧ್ಯ ಎಂದು ಕಾರ್ಯಕರ್ತರಲ್ಲಿ ಮನವಿ ಮಾಡಿದರು.

ಈ ವೇಳೆ ಕಾಂಗ್ರೆಸ್ ಮೈಸೂರು ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯ್‌ಕುಮಾರ್, ನಗರಾಧ್ಯಕ್ಷ ಆರ್.ಮೂರ್ತಿ, ಪ್ರಧಾನ ಕಾರ್ಯದರ್ಶಿ ಎಂ.ಶಿವಣ್ಣ, ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಮುಖಂಡ ಈಶ್ವರ್ ಚಕ್ಕಡಿ ಮತ್ತಿತರ ಮುಖಂಡರು ಉಪಸ್ಥಿತರಿದ್ದರು.

# ಹೆಚ್ಚು ಸಿರಿಧಾನ್ಯ ಮೇಳ, ಬೆಲ್ಲದ ಪರಿಷೆ ಆಯೋಜಿಸಿ

## ದಿಶಾ ಸಭೆಯಲ್ಲಿ ಸಂಸದೆ ಸುಮಲತಾ ಅಂಬರೀಶ್ ಸೂಚನೆ



ಮಂಡ್ಯ, ನ.3– ಜಿಲ್ಲೆಯ ರೈತರ ಆರ್ಥಿಕ ಮಟ್ಟ ಸುಧಾರಿಸಲು ಹಾಗೂ ಹೆಚ್ಚಿನ ಮಾರುಕಟ್ಟೆ ಒದಗಿಸಲು ಹೆಚ್ಚು ಸಿರಿಧಾನ್ಯ ಮೇಳ ಹಾಗೂ ಬೆಲ್ಲದ ಪರಿಷೆ ಆಯೋಜಿಸುವಂತೆ ಸಂಸದೆ ಸುಮಲತಾ ಅಂಬರೀಶ್ ತಿಳಿಸಿದರು.

ಶುಕ್ರವಾರ ಜಿಪಂ ಸಭಾಂಗಣದಲ್ಲಿ ಆಯೋಜಿಸಿದ್ದ ದಿಶಾ ಸಭೆ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಮಂಡ್ಯ ಜಿಲ್ಲೆಯಲ್ಲಿ ಮಳೆ ಕೊರತೆಯಿಂದ 7 ತಾಲೂಕು ಬರ ಪೀಡಿತವಾಗಿದ್ದು, ಸಾರ್ವಜನಿಕರು ಹಾಗೂ ಜಾನುವಾರುಗಳ ಕುಡಿಯುವ ನೀರಿಗೆ ತೊಂದರೆಯಾಗಬಾರದು ಎಂದರು.

ಕೊಕ್ಕರೆ ಬೆಳ್ಳೂರು ಪ್ರವಾಸಿ ತಾಣವಾಗಿದ್ದು, ಇಲ್ಲಿ ಅಕ್ರಮವಾಗಿ ಮರಳು ಗಣಿಗಾರಿಕೆ ನಡೆಯದಂತೆ ಕ್ರಮವಹಿಸಬೇಕು. ಶ್ರೀರಂಗಪಟ್ಟಣ ಅರಣ್ಯ ವ್ಯಾಪ್ತಿಯಲ್ಲೂ ಸಹ ಗಣಿಗಾರಿಕೆ ನಡೆಯುತ್ತಿರುವ ಬಗ್ಗೆ ದೂರು ಬರುತ್ತಿದೆ ಎಂದು ಸಂಸದರು ಹೇಳಿದಾಗ ಇದಕ್ಕೆ ಪ್ರತಿಕ್ರಿಯಿಸಿದ ಜಿಲ್ಲಾಧಿಕಾರಿ ಡಾ.ಕುಮಾರ್, ಗಣಿ ಇಲಾಖೆಯವರು ತಂಡ ರಚಿಸಿಕೊಂಡು ನಿರಂತರವಾಗಿ ಪರಿಶೀಲನೆ ನಡೆಸಿ, ಅರಣ್ಯ ಇಲಾಖೆ ಅಧಿಕಾರಿಗಳು ಅರಣ್ಯ ಭಾಗದಲ್ಲಿ ಗಣಿಗಾರಿಕೆ ನಡೆಯುತ್ತಿದ್ದರೆ ಕಾನೂನು ರೀತಿ ಕ್ರಮ ವಹಿಸಿ ಎಂದರು.

ಮುಂದುವರೆದು ಮಾತನಾಡಿದ ಸಂಸದರು, ತಮಿಳು ಕಾಲೋನಿ ಕೊಳಚೆ ಪ್ರದೇಶದ ನಿವಾಸಿಗಳನ್ನು ಚಿಕ್ಕ ಮಂಡ್ಯದಲ್ಲಿ ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಯಿಂದ ನಿರ್ಮಿಸಿರುವ 576 ಮನೆಗಳಿಗೆ ಅರ್ಹ ಫಲಾನುಭವಿಗಳನ್ನು ಗುರುತಿಸಿ ಸ್ಥಳಾಂತರ ಮಾಡಲು ಕ್ರಮ ಕೈಗೊಳ್ಳುವ ಬಗ್ಗೆ ಚರ್ಚಿಸಿದಾಗ ಕರ್ನಾಟಕ ಕೊಳಗೇರಿ ಮಂಡಳಿ ಅಧಿಕಾರಿಗಳು ಮಾತನಾಡಿ, 100 ಮನೆಗಳು ಎಲ್ಲಾ ಮೂಲ ವ್ಯವಸ್ಥೆಯೊಂದಿಗೆ ಸಿದ್ಧವಾಗಿದ್ದು, ಇನ್ನು 10 ದಿನದೊಳಗೆ ಇನ್ನುಳಿದ ಮನೆಗಳು ಸಹ ಸಿದ್ಧವಾಗಲಿವೆ ಎಂದು ಮಾಹಿತಿ ನೀಡಿದರು. ಡಿ.ಕುಮಾರ್ ಅರ್ಹ ಫಲಾನುಭವಿಗಳ ಪಟ್ಟಿ ಸಿದ್ಧಪಡಿಸಿ ಸ್ಥಳಾಂತರಿಸಿ ಎಂದರು.

ಬೆಂಗಳೂರು– ಮೈಸೂರು ಎಕ್ಸ್‌ಪ್ರೆಸ್ ವೇ ಸರ್ವಿಸ್ ರಸ್ತೆಯಲ್ಲಿ ನಿರ್ಮಾಣವಾಗಿರುವ ಹಂಪ್‌ಗಳ ಬಗ್ಗೆ ಮಾತನಾಡಿದ ಸುಮಲತಾ, ಹಂಪ್‌ಗಳ ವೈಜ್ಞಾನಿಕವಾಗಿ ನಿರ್ಮಾಣವಾಗಿಲ್ಲ. ಅವುಗಳನ್ನು ತೆರವುಗೊಳಿಸಬೇಕು. ಇದರ ಬಗ್ಗೆ ಚರ್ಚಿಸಿದಾಗ ಇದರ ಬಗ್ಗೆ ಜಿಲ್ಲಾಧಿಕಾರಿ ಪ್ರತಿಕ್ರಿಯಿಸಿ ಈ ಬಗ್ಗೆ NHAI ವಿಭಾಗೀಯ ಆಯುಕ್ತರಿಗೆ ಪತ್ರ ಬರೆಯಲಾಗಿದೆ. ಈ ಸಂದರ್ಭ ಅಂಡರ್ ಪಾಸ್‌ಗಳ ನಿರ್ಮಿಸುವುದು ಕಷ್ಟವಾಗಿದೆ. ಇದಕ್ಕೆ ಪರ್ಯಾಯವಾಗಿ ಚಾಲಕರಿಗೆ ಹಾಗೂ ಸಾರ್ವಜನಿಕರಿಗೆ ತೊಂದರೆಯಾಗದಂತೆ ಅಂಡರ್ ಪಾಸ್ ನಿರ್ಮಾಣಕ್ಕೆ ಕ್ರಮ ವಹಿಸಲು ಚಿಂತನೆ ನಡೆಸಿ ಕ್ರಮ ಕೈಗೊಳ್ಳಲಿದ್ದಾರೆ ಎಂದು ಸ್ಪಷ್ಟನೆ ನೀಡಿದರು.

ಸಭೆಯಲ್ಲಿ ಜಿಪಂ ಸಿಇಓ ಶೇಖ್ ತನ್ವೀರ್ ಆಸಿಫ್, ಎಸ್ಪಿ ಎನ್.ಯತೀಶ್ ಸೇರಿದಂತೆ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

## ಕ್ಷೇತ್ರ ಬಿಟ್ಟು ಹೋಗುವ ಪ್ರಶ್ನೆಯೇ ಇಲ್ಲ

ಮಂಡ್ಯ, ನ.3– ನಾನು ರಾಜಕಾರಣ ಬಿಟ್ಟರೂ ಸ್ವಾಭಿಮಾನ, ಸಿದ್ಧಾಂತ ಬಿಡುವುದಿಲ್ಲ. ನಾನು ಮಂಡ್ಯದ ಸೊಸೆ, ಎಂದಿಗೂ ಮಂಡ್ಯ ಬಿಟ್ಟು ಹೋಗುವ ಪ್ರಶ್ನೆಯೇ ಇಲ್ಲ. ಅಂಬರೀಶ್ ಕುಟುಂಬಕ್ಕೆ ಮಂಡ್ಯ ಜನರು ಸಾಕಷ್ಟು ಪ್ರೀತಿ ಕೊಟ್ಟು ಹರಸಿದ್ದು, ಈ ಕಾರಣಕ್ಕೆ ನಾನು ಇಲ್ಲೇ ಸಕ್ರಿಯವಾಗಿರುವೆ ಎಂದು ಸಂಸದೆ ಸುಮಲತಾ ಅಂಬರೀಶ್ ಸ್ಪಷ್ಟಪಡಿಸಿದರು.

ಶುಕ್ರವಾರ ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಜೆಡಿಎಸ್– ಬಿಜೆಪಿ ಮೈತ್ರಿ ಆಗಿದೆ. ಆದರೆ ಕ್ಷೇತ್ರ ಹಂಚಿಕೆ ಇನ್ನೂ ಆಗಿಲ್ಲ. ಈಗ ಎದ್ದಿರುವ ಊಹಾಪೋಹಗಳಿಗೆ ಪ್ರತಿಕ್ರಿಯೆ ಕೊಡಲ್ಲ. ನಾನು ದುಡುಕಿನ ನಿರ್ಧಾರ ಮಾಡಲ್ಲ. ಕ್ಷೇತ್ರ ಹಂಚಿಕೆ ಬಗ್ಗೆ ಮಾತುಕತೆ ನೂರಾರು ನಡೆದಿರಬಹುದು. ಆದರೆ ಇನ್ನು ಯಾವುದೇ ಕ್ಷೇತ್ರ ಹಂಚಿಕೆ ಅಂತಿಮಗೊಂಡಿಲ್ಲ. ಮಂಡ್ಯ ಜನ ನನ್ನ ಜೊತೆ ಇದ್ದು, ನನಗೆ ಆ ಕಾನ್ಫಿಡೆನ್ಸ್ ಇದೆ ಎಂದು ತಿಳಿಸಿದರು. ಈ ಕ್ಷೇತ್ರ ಬೇಕು, ಆ ಕ್ಷೇತ್ರ ಬೇಕು ಎಂದು ಯಾವ ಪಕ್ಷವನ್ನು ಕೇಳಿಲ್ಲ. ನನ್ನ ರಾಜಕೀಯ ಭವಿಷ್ಯದ ಬಗ್ಗೆ ನನಗೆ ಯೋಚನೆ ಇಲ್ಲ. ಬೆಂಗಳೂರು ಉತ್ತರ ಕ್ಷೇತ್ರದ ಆಫರ್ ಕಳೆದ ಚುನಾವಣೆಯಲ್ಲೇ ನಿರಾಕರಿಸಿದ್ದೆ. ನನಗೆ ಈ ಸ್ಥಾನಮಾನ ಕೊಟ್ಟಿದ್ದು ಮಂಡ್ಯ ಜನರು. ಬೇರೆ ಕ್ಷೇತ್ರದ ಆಫರ್ ಎಂದಿಗೂ ಒಪ್ಪಲ್ಲ. ಇದನ್ನು ನೂರು ಬಾರಿ ಹೇಳಿದ್ದೇನೆ. ಇನ್ನು ರಕ್ತದಲ್ಲಿ ಬರೆದು ಕೊಡಬೇಕಾ? ಮಂಡ್ಯ ಜಿಲ್ಲೆ ರಾಜಕಾರಣ ಯಾವಾಗಲೂ ಚಾಲೆಂಜಿಂಗ್ ಇದ್ದೆ ಚಾಲೆಂಜ್‌ಗೆ ಹೆದರುವ ಸ್ವಭಾವ ನನ್ನದಲ್ಲ ಎಂದರು.

ಕಾವೇರಿ ನೀರು ಹಂಚಿಕೆ ವಿಚಾರದಲ್ಲಿ ಪದೇ ಪದೇ ಏಕೆ ನಮ್ಮ ವಿರುದ್ಧ ತಮಿಳುನಾಡು ಪರ ತೀರ್ಪು ಹೊರಬರುತ್ತಿದೆ ಎನ್ನುವುದು ಅರ್ಥ ಆಗದೇ ಇರುವ ವಿಚಾರ. ನಮ್ಮ ಮಟ್ಟಿಗೆ ನಾವು ಅಲ್ಲಿ ವಾದ ಮಾಡುವುದರಲ್ಲಿ ವಿಫಲವಾಗಿದ್ದೇವಾ ಎನ್ನುವುದೇ ಒಂದು ದೊಡ್ಡ ಪ್ರಶ್ನೆಯಾಗಿದೆ. ನಮ್ಮ ಹೋರಾಟವನ್ನು ಎಷ್ಟು ಜವಾಬ್ದಾರಿಯಿಂದ ಮಾಡುತ್ತಿದ್ದೇವೆ ಎನ್ನುವುದೇ ಒಂದು ಪ್ರಶ್ನೆಯಾಗಿದೆ ಎಂದರು.

ಸಿಎಂ ಬದಲಾವಣೆ ವಿಚಾರವಾಗಿ ಪ್ರತಿಕ್ರಿಯಿಸಿದ ಅವರು, ಅದು ಅವರವರ ಪಕ್ಷದ ಆಂತರಿಕ ವಿಚಾರ. ಆ ಬಗ್ಗೆ ನಾನು ಕಮೆಂಟ್ ಮಾಡಲ್ಲ. ರಾಜ್ಯದಲ್ಲಿ ಲೋಡ್ ಶೆಡ್ಡಿಂಗ್ ಹಾಗೂ ನೀರಿನ ಸಮಸ್ಯೆ ಇದೆ. ಅನುದಾನ ಸಿಗದ ಬಗ್ಗೆ ಕಾಂಗ್ರೆಸ್ ಶಾಸಕರೇ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಫ್ರೀ ಗ್ಯಾರಂಟಿ ಕೊಟ್ಟರೆ ಅಭಿವೃದ್ಧಿ ಕೆಲಸ ಆಗಲ್ಲ ಎಂದು ಮೊದಲೇ ಹೇಳಿದ್ದೀವಿ. ಚುನಾವಣೆ ಗೆಲ್ಲುವ ಉದ್ದೇಶದಿಂದ ಬರೀ ಫ್ರೀ ಫ್ರೀ ಎಂದು ಕೊಟ್ಟರೆ ತೊಂದರೆ ಆಗುತ್ತದೆ. ಅಭಿವೃದ್ಧಿ ಕೆಲಸಗಳಿಗೆ ದುಡ್ಡು ಎಲ್ಲಿಂದ ತರಲು ಸಾಧ್ಯ ಎಂದು ಪ್ರಶ್ನಿಸಿದರು.

# ಸಮುದಾಯದ ಅಭಿವೃದ್ಧಿಗಾಗಿ ಹೋರಾಡುತ್ತೇನೆ: ಕೆ.ಪಿ.ನಂಜುಂಡಿ



ಪಾಂಡವಪುರ, ನ.3– ಕೊನೆ ಉಸಿರಿರುವವರೆಗೂ ಸಮುದಾಯದ ಅಭಿವೃದ್ಧಿಗಾಗಿ ಹೋರಾಡುತ್ತೇನೆ ಎಂದು ಅಖಿಲ ಕರ್ನಾಟಕ ವಿಶ್ವಕರ್ಮ ಸಮುದಾಯದ ರಾಜ್ಯಾಧ್ಯಕ್ಷ ಎಂಎಲ್‌ಸಿ ಕೆಪಿ.ನಂಜುಂಡಿ ತಿಳಿಸಿದರು.

ತಾಲೂಕಿನ ಆರತಿ ಉಕ್ಕಡದಲ್ಲಿ ವಿಶ್ವಕರ್ಮ ಸಮುದಾಯವನ್ನು ಎಸ್‌ಟಿಗೆ ಸೇರ್ಪಡೆ ಮಾಡುವ ಹೋರಾಟ ಸಂಬಂಧ ನಡೆದ ತಾಲೂಕು ಹಾಗೂ ಹೋಬಳಿ ಮಟ್ಟದ ಕಾರ್ಯಕರ್ತರ ಸಭೆ ಹಾಗೂ ಸಮುದಾಯದ ಮಹಿಳೆಯರಿಗೆ ಮಡಿಲು ಅಕ್ಕಿ ವಿತರಣೆ ಕಾರ್ಯಕ್ರಮದಲ್ಲಿ ಮಾತನಾಡಿದರು.

ಪ್ರಸ್ತುತ ರಾಜಕೀಯ ವ್ಯವಸ್ಥೆಯಲ್ಲಿ ಜಾತಿ ಹೊರತು ಪಡಿಸಿದರೆ ರಾಜಕೀಯವಿಲ್ಲ. ಅಷ್ಟರಮಟ್ಟಿಗೆ ರಾಜಕೀಯ ವ್ಯವಸ್ಥೆ ಇದೆ. ಇಂತಹ ದಿನಗಳಲ್ಲಿ ಕಾಯಕ ಸಮುದಾಯಗಳು ರಾಜಕೀಯ ಪ್ರಜ್ಞೆ ಮೂಡಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

47 ವರ್ಷಗಳ ಹೋರಾಟ ಫಲವಾಗಿ ವಿಶ್ವಕರ್ಮ ಸಮುದಾಯದ ಕುಲಶಾಸ್ತ್ರ ಅಧ್ಯಯನ ಮಾಡುವ ಮಟ್ಟಕ್ಕೆ ಬಂದಿದೆ. ಎಸ್‌ಟಿ ಪಂಗಡಕ್ಕೆ ಸಮುದಾಯ ಸೇರ್ಪಡೆ ಮಾಡಬೇಕು ಎನ್ನುವ ಹೋರಾಟ ನಡೆಯುತ್ತಿದೆ. ನನ್ನ ಕೊನೆ ಉಸಿರಿರುವವರೆಗೂ ಸಮುದಾಯದ ಏಳಿಗೆಗಾಗಿ ಹೋರಾಡುತ್ತೇನೆ ಎಂದು ಭರವಸೆ ನೀಡಿದರು.

ಇದೇ ವೇಳೆ ತಾಲೂಕು, ಹೋಬಳಿ ಮಟ್ಟದ ಪದಾಧಿಕಾರಿಗಳನ್ನು ನೇಮಕಗೊಳಿಸಿ ಆದೇಶಪತ್ರ ನೀಡಲಾಯಿತು. ಜೊತೆಗೆ ವಿಶ್ವಕರ್ಮ ಸಮುದಾಯದ ಮಹಿಳೆಯರಿಗೆ ಕೆ.ಪಿ.ನಂಜುಂಡಿ ಹಾಗೂ ಅವರ ಶ್ರೀಮತಿ ಮಡಿಲು ಅಕ್ಕಿ ನೀಡಿದರು.

ಇದಕ್ಕೂ ಮುನ್ನ ಆರತಿ ಉಕ್ಕಡ ಮಾರಮ್ಮ ದೇವಸ್ಥಾನಕ್ಕೆ ತೆರಳಿ ಪೂಜೆ ಸಲ್ಲಿಸಿದರು. ಸಮಾರಂಭದಲ್ಲಿ ಶ್ರೀದೊಡ್ಡೇಂದ್ರ ಸ್ವಾಮೀಜಿ ಮಾತನಾಡಿದರು. ಜಿಲ್ಲಾಧ್ಯಕ್ಷ ಹೇಮಂತ್ ಕುಮಾರ್, ಪ್ರಧಾನ ಕಾರ್ಯದರ್ಶಿ ಮೋಹನ್ ಕುಮಾರ್, ರಾಜ್ಯ ಪ್ರಧಾನ ಕಾರ್ಯದರ್ಶಿ ಲೋಹಿತ್, ಮಂಜುನಾಥ್, ಬ್ರಹ್ಮ ಗಣೇಶ್, ಕೆ.ರಾಮು, ಮುಖಂಡರಾದ ಜಿ.ಡಿ.ಯೋಗೇಶ್‌ಚಾರ್, ಸಿ.ಎಂ.ಗಂಗಾಧರ್, ವೇದಾಚಾರ್, ಪುರುಷೋತ್ತಮಚಾರ್ ಇತರರಿದ್ದರು.



ಇತ್ತೀಚೆಗೆ ಕೇರಳದ ತ್ರಿವೆಂಡ್ರಮ್ ಜಿಲ್ಲೆಯ ವರ್ಕಲದಲ್ಲಿ ನಡೆದ ಆರ್‌ವಿಟಿ ಮಣಿ ಮೆಮೋರಿಯಲ್ ಅಂತರಾಷ್ಟ್ರೀಯ ಮುಕ್ತ ಕರಾಟೆ ಪಂದ್ಯಾವಳಿಯಲ್ಲಿ ಶ್ರೀರಂಗಪಟ್ಟಣದ ಬುದೋಕಾಯಿ ಕರಾಟೆ ಶಾಲೆಯ ನಂದನ್‌ಗೌಡ ಕುಮಿತೆ ವಿಭಾಗದಲ್ಲಿ ಪ್ರಥಮ, ಕಟಾ ವಿಭಾಗದಲ್ಲಿ ದ್ವಿತೀಯ ಸ್ಥಾನ, ಜಿ.ವಿ.ಹೇಮಂತ್ ಕುಮಾರ್ ಕುಮಿತೆ ವಿಭಾಗದಲ್ಲಿ ದ್ವಿತೀಯ, ಕಟಾ ವಿಭಾಗದಲ್ಲಿ ಪ್ರಥಮ, ಸಿ.ಯಶವಂತ್ ಕುಮಾರ್ ಕುಮಿತೆ ವಿಭಾಗದಲ್ಲಿ ತೃತೀಯ, ಕಟಾ ವಿಭಾಗದಲ್ಲಿ ದ್ವಿತೀಯ ಹಾಗೂ ಜೆ.ತನಿಷ್ಕ ಕುಮಿತೆ ವಿಭಾಗದಲ್ಲಿ ಪ್ರಥಮ, ಕಟಾ ವಿಭಾಗದಲ್ಲಿ ಪ್ರಥಮ ಸ್ಥಾನ ಪಡೆದು ತಾಲೂಕು ಹಾಗೂ ಶಾಲೆಗೆ ಕೀರ್ತಿ ತಂದಿದ್ದಾರೆ ಎಂದು ತರಬೇತುದಾರ ವೆಂಕಟೇಶ್ ಹರ್ಷ ವ್ಯಕ್ತಪಡಿಸಿದ್ದಾರೆ. ವಿಜೇತರನ್ನು ಕರಾಟೆ ಸಂಸ್ಥೆ ಪೋಷಕ ಭಾಸ್ಕರ್ (ಬಾಲು) ಅಭಿನಂದಿಸಿದ್ದಾರೆ.

# ಅಕ್ರಮವಾಗಿ ಗಾಂಜಾ ಮಾರುತ್ತಿದ್ದವರ ಬಂಧನ

ಹಲಗೂರು, ನ.3– ಇಲ್ಲಿಗೆ ಸಮೀಪದ ತೊರೆ ಕಾಡನಹಳ್ಳಿಯ ಬೆಂಗಳೂರು ಜಲಮಂಡಳಿ ಗೇಟ್ ಬಳಿ ಅಕ್ರಮವಾಗಿ ಗಾಂಜಾ ಮಾರಾಟ ಮಾಡುತ್ತಿದ್ದ ಓರ್ವ ಮಹಿಳೆ ಸೇರಿದಂತೆ ನಾಲ್ವರನ್ನು ಹಲಗೂರು ವೃತ್ತ ನಿರೀಕ್ಷಕ ಶ್ರೀಧರ್ ನೇತೃತ್ವದ ತಂಡ ಬಂಧಿಸಿದೆ.

ತೊರೆಕಾಡನಹಳ್ಳಿ ಗ್ರಾಮದ ಕುಮಾರ್, ಮಾದಯ್ಯ, ಭರತ್ ಸೇರಿದಂತೆ ಮಳವಳ್ಳಿ ಪಟ್ಟಣದ ನಿವಾಸಿ ಕಮಲಮ್ಮ ತೊರೆಕಾಡನಹಳ್ಳಿ ಗ್ರಾಮದಲ್ಲಿ ಅಕ್ರಮವಾಗಿ ಗಾಂಜಾ ಮಾರಾಟ ಮಾಡುವ ಬಗ್ಗೆ ಬಂದ ಖಚಿತ ಮಾಹಿತಿ ಮೇರೆಗೆ ದಾಳಿ ನಡೆಸಿದ ಹಲಗೂರು ಪೊಲೀಸರು ಈ ನಾಲ್ವರನ್ನು ಬಂಧಿಸಿ ಆರೋಪಿಗಳಿಂದ 300 ಗ್ರಾಂ ಗಾಂಜಾ ಸೊಪ್ಪನ್ನು ವಶಪಡಿಸಿಕೊಂಡಿದ್ದಾರೆ. ಈ ವೇಳೆ ಮಳವಳ್ಳಿ ಡಿವೈಎಸ್ಪಿ ಕೃಷ್ಣಪ್ಪ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದ್ದು, ಸಿಪಿಐ ಶ್ರೀಧರ್, ಹಲಗೂರು ಎಸ್‌ಐ ಮಹೇಂದ್ರ, ಸಿಬ್ಬಂದಿಗಳಾದ ರಿಯಾಜ್, ನಾಗೇಂದ್ರ, ಸಿದ್ದರಾಜು, ಮಲ್ಲಿಕಾರ್ಜುನ, ಫಾರೂಕ್ ಇತರರಿದ್ದರು.

# ಚಿರತೆ ದಾಳಿಗೆ ಸಾಕುನಾಯಿ ಬಲಿ

ಕೆ.ಆರ್.ಪೇಟೆ, ನ.3– ಚಿರತೆ ದಾಳಿಗೆ ಸಾಕುನಾಯಿ ಬಲಿಯಾಗಿರುವ ಘಟನೆ ಗುರುವಾರ ರಾತ್ರಿ ತಾಲೂಕಿನ ಮೊಸಳೆಕೊಪ್ಪಲು ಗ್ರಾಮದಲ್ಲಿ ನಡೆದಿದೆ.

ಗ್ರಾಮದ ನಿವಾಸಿ ನಾಗರಾಜು ಅವರಿಗೆ ಸೇರಿದ ನಾಯಿ ಬಲಿಯಾಗಿರುವುದು. ಕೊಟ್ಟಿಗೆಯಲ್ಲಿ ಸುಮಾರು 15 ಸಾವಿರ ರೂ. ಬೆಲೆಬಾಳುವ ಜರ್ಮನ್ ಶೆಫರ್ಡ್ ಕ್ರಾಸಿಂಗ್ ತಳಿಯ ನಾಯಿಯನ್ನು ಕಟ್ಟಿ ಹಾಕಲಾಗಿತ್ತು. ಮಧ್ಯರಾತ್ರಿ 1 ಗಂಟೆ ಸಮಯದಲ್ಲಿ ಚಿರತೆ ದಾಳಿ ನಡೆಸಿ, ತಲೆ ಬಿಟ್ಟು ದೇಹದ ಎಲ್ಲಾ ಭಾಗವನ್ನು ತಿಂದು ಹಾಕಿ ಪರಾರಿಯಾಗಿದೆ. ಶುಕ್ರವಾರ ಬೆಳಗ್ಗೆ ಕೊಟ್ಟಿಗೆ ಹೋದಾಗ ಪ್ರಕರಣ ಬೆಳಕಿಗೆ ಬಂದಿದೆ. ಚಿರತೆ ದಾಳಿಯಿಂದ ಗ್ರಾಮಸ್ಥರು ಭಯಗೊಂಡಿದ್ದು, ಕೂಡಲೇ ಅರಣ್ಯಾಧಿಕಾರಿಗಳು ಬೋನಿಟ್ಟು ಚಿರತೆ ಸೆರೆ ಹಿಡಿಯುವಂತೆ ಮೊಸಳೆಕೊಪ್ಪಲು ಗ್ರಾಮಸ್ಥರು ಆಗ್ರಹಿಸಿದ್ದಾರೆ.

# ಕುಡಿದ ಮತ್ತಿನಲ್ಲಿ ಬೆಂಕಿ ಹಚ್ಚಿಕೊಂಡಿದ್ದ ವ್ಯಕ್ತಿ ಸಾವು



ಹಲಗೂರು, ನ.3– ಕುಡಿದ ಮತ್ತಿನಲ್ಲಿ ಮೈಮೇಲೆ ಸೀಮೆಎಣ್ಣೆ ಸುರಿದುಕೊಂಡು ಬೆಂಕಿ ಹಚ್ಚಿಕೊಂಡು ಆತ್ಮಹತ್ಯೆ ಮಾಡಿಕೊಳ್ಳುವುದಾಗಿ ಮನೆಯವರಿಗೆ ಹೆದರಿಸಲು ಹೋಗಿ ತೀವ್ರ ಗಾಯಗೊಂಡಿದ್ದ ವ್ಯಕ್ತಿಯೊಬ್ಬ ಚಿಕಿತ್ಸೆ ಫಲಕಾರಿಯಾಗದೇ ಸಾವನ್ನಪ್ಪಿರುವ ಘಟನೆ ಸಮೀಪದ ನಿಟ್ಟೂರು ಗ್ರಾಮದಲ್ಲಿ ಸಂಭವಿಸಿದೆ.

ಹಲಗೂರು ಹೋಬಳಿಯ ನಿಟ್ಟೂರು ಗ್ರಾಮದ ಆನಂದ್(33) ಮೃತಪಟ್ಟವರು. ಈತ ಕೂಲಿ ಕೆಲಸ ಮಾಡಿಕೊಂಡು ಜೀವನ ಸಾಗಿಸುತ್ತಿದ್ದು, ಕಳೆದ 2 ದಿನದ ಹಿಂದೆ ಕುಡಿದ ಮತ್ತಿನಲ್ಲಿ ಮದ್ಯಪಾನ ಮಾಡಲು ಹಣ ಕೊಡುವಂತೆ ಮನೆಯವರನ್ನು ಪೀಡಿಸಿದ್ದಾನೆ. ಮನೆಯವರು ಕುಡಿಯಲು ಹಣ ಕೊಡದೆ ನಿರಾಕರಿಸಿದ್ದರಿಂದ ಸಾಯುತ್ತೇನೆ ಎಂದು ಮನೆಯವರಿಗೆ ಹೆದರಿಸಲು ಹೋಗಿ ಮೈಮೇಲೆ ಸೀಮೆಎಣ್ಣೆ ಸುರಿದುಕೊಂಡು ಬೆಂಕಿ ಹಚ್ಚಿಕೊಂಡಿದ್ದಾನೆ. ಪರಿಣಾಮ ದೇಹ ಪೂರ್ಣ ಸುಟ್ಟು ಹೋಗಿದ್ದು, ತಕ್ಷಣ ಈತನನ್ನು ಹಲಗೂರು ಪ್ರಾಥಮಿಕ ಆರೋಗ್ಯ ಕೇಂದ್ರ ಕರೆತಂದು ಪ್ರಥಮ ಚಿಕಿತ್ಸೆ ಕೊಡಿಸಿ ಹೆಚ್ಚಿನ ಚಿಕಿತ್ಸೆಗಾಗಿ ಮಂಡ್ಯ ಮಿಮ್ಸ್ ಆಸ್ಪತ್ರೆಗೆ ದಾಖಲಿಸಲಾಗಿತ್ತು ಅಲ್ಲದೇ ಮತ್ತೆ ಆತನನ್ನು ಅಲ್ಲಿಂದ ಮೈಸೂರಿನ ಕೆ.ಆರ್.ಆಸ್ಪತ್ರೆಗೆ ದಾಖಲಿಸಲಾಗಿತ್ತಾದರೂ ಚಿಕಿತ್ಸೆ ಫಲಕಾರಿಯಾಗದೇ ಶುಕ್ರವಾರ ಮೃತಪಟ್ಟಿದ್ದಾನೆ. ಈ ಸಂಬಂಧ ಹಲಗೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಬಿ.ಆರ್.ಶ್ರೀನಿವಾಸಮೂರ್ತಿ ನಿಧನ



ಮದ್ದೂರು, ನ.3– ಪಟ್ಟಣದ ಶಿವಪುರದ ನಿವಾಸಿ ಹಾಗೂ ಮಾಜಿ ಪುರಸಭಾ ಅಧ್ಯಕ್ಷ ಬಿ.ಆರ್.ಶ್ರೀನಿವಾಸಮೂರ್ತಿ(84) ಗುರುವಾರ ರಾತ್ರಿ ನಿಧನರಾದರು. ಮೃತರು ಪತ್ನಿ, ಓರ್ವ ಪುತ್ರಿ, ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಶುಕ್ರವಾರ ಮಧ್ಯಾಹ್ನ ಶಿವಪುರದ ನಿವಾಸದ ಹಿಂದಿರುವ ತೋಟದಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

## ನಾಗಾಚಾರ್



ಕೆ.ಆರ್.ಪೇಟೆ, ನ.3– ಪಟ್ಟಣದ ಜಯನಗರ ಬಡಾವಣೆ ನಿವಾಸಿ, ನಿವೃತ್ತ ಶಿಕ್ಷಕ ಎಂ.ಎಸ್.ನಾಗಾಚಾರ್(62) ಶುಕ್ರವಾರ ನಿಧನರಾದರು. ಮೃತರು ಪತ್ನಿ ಅನಸೂಯಮ್ಮ, ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸ್ವಗ್ರಾಮ ಮಾವಿನಕೆರೆ ಗ್ರಾಮದಲ್ಲಿ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

## ಶಾರದಮ್ಮ



ಕಿಕ್ಕೇರಿ, ನ.3– ಪಟ್ಟಣದ ನಿವಾಸಿ ಹೆಚ್.ಕೆ.ಶಾರದಮ್ಮ(84) ಶುಕ್ರವಾರ ನಿಧನರಾದರು. ಮೃತರು ಪತಿ ಕೆ.ಹೆಚ್.ವೆಂಕಟಪ್ಪಶೆಟ್ಟಿ, ಗ್ರಾಪಂ ಮಾಜಿ ಅಧ್ಯಕ್ಷ ಕೆ.ವಿ.ಅರುಣ್ ಕುಮಾರ್ ಸೇರಿದಂತೆ ಮೂವರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಮೃತರ ಕಣ್ಣನ್ನು ಬೆಂಗಳೂರಿನ ಲಯನ್ಸ್ ಇಂಟರ್ ನ್ಯಾಷನಲ್ ಕಣ್ಣಿನ ಆಸ್ಪತ್ರೆಗೆ ದಾನ ಮಾಡಲಾಯಿತು. ಮೃತರ ಅಂತ್ಯಕ್ರಿಯೆ ಶುಕ್ರವಾರ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.



ಮೈಸೂರಿನ ವಾರ್ಡ್ ನಂಬರ್ 6 ಗೋಕುಲಂ ಬೃಂದಾವನ ಬಡಾವಣೆಯ ನರ್ಮ್ ಮನೆಗಳ ಯುಜಿಡಿ ಪೈಪ್ ಲೈನ್‌ಗಳ ದುರಸ್ತಿ ಕಾರ್ಯಕ್ಕೆ ಮಹಾನಗರ ಪಾಲಿಕೆ ಸದಸ್ಯ ಎಸ್‌ಬಿಎಂ ಮಂಜು ಗುದ್ದಲಿ ಪೂಜೆ ನೆರವೇರಿಸಿದರು ಈ ಸಂದರ್ಭದಲ್ಲಿ ಯುಜಿಡಿ ವಾಟರ್ ಇಂಜಿನಿಯರ್ ಜಗದೀಶ್, ಯುಜಿಡಿ ಇನ್ಸ್‌ಪೆಕ್ಟರ್ ಮಹದೇವ್, ವಾರ್ಡಿನ ಸಿದ್ದಪ್ಪಾಜಿ, ಗಣೇಶ್, ಮಾದೇವಮ್ಮ, ಜ್ಯೋತಿ, ಜಯಮ್ಮ, ಅನಿತಾ, ಮಂಜುಳಾ ಇನ್ನಿತರರಿದ್ದರು

# ಆಂಧ್ರದ ಚಿತ್ತೂರು ಬಳಿ ಕಾರು ಅಪಘಾತದಲ್ಲಿ ಮೃತಪಟ್ಟ ಇಬ್ಬರು ಮಹಿಳೆಯರ ದೇಹ ಮೈಸೂರಿಗೆ

ಮೈಸೂರು, ನ.3–ಆಂಧ್ರಪ್ರದೇಶದ ಚಿತ್ತೂರು ಬಳಿ ಶುಕ್ರವಾರ ನಡೆದ ಕಾರು ಅಪಘಾತದಲ್ಲಿ ಮೃತಪಟ್ಟ ಇಬ್ಬರು ಮಹಿಳೆಯರ ದೇಹಗಳನ್ನು ಇಂದು (ಶುಕ್ರವಾರ) ರಾತ್ರಿ ಮೈಸೂರಿಗೆ ತರಲಾಗಿದೆ. ಮತ್ತೋರ್ವ ಮಹಿಳೆಯ ದೇಹವನ್ನು ಉಡುಪಿಗೆ ಕೊಂಡೊಯ್ಯಲಾಗಿದೆ.

ಅಪಘಾತದಲ್ಲಿ ಸಾವನ್ನಪ್ಪಿದ ಮೈಸೂರಿನ ರಾಮಕೃಷ್ಣನಗರ ಐ–ಬ್ಲಾಕ್ ನಿವಾಸಿಯಾದ ಮೈಸೂರು ಆಯುರ್ವೇದ ಆಸ್ಪತ್ರೆಯ ನಿವೃತ್ತ ಹಿರಿಯ ನರ್ಸ್ ಎಂ.ಆರ್. ಜಯಲಕ್ಷ್ಮಿ(65) ಮತ್ತು ಅವರ ಹತ್ತಿರದ ಸಂಬಂಧಿ ಸುಜಾತ ಅವರ ದೇಹಗಳು ಮೈಸೂರಿಗೆ ತರಲಾಗಿದ್ದು, ಜಯಲಕ್ಷ್ಮಿ ಅವರ ಮನೆಯ 1ನೇ ಹಂತದಲ್ಲಿ ವಾಸವಿದ್ದ ವೃಂದ ದೇಹವನ್ನು ಉಡುಪಿಗೆ ಕೊಂಡೊಯ್ಯಲಾಗಿದೆ. ಕಾರು ಚಾಲನೆ ಮಾಡುತ್ತಿದ್ದ ಮಾಜಿ ಯೋಧರೂ ಆದ ನ್ಯಾಯಾಲಯದ ನಿವೃತ್ತ ಅಮೀನ್ ಶಿವಕುಮಾರ್ ಈ ಅಪಘಾತದಲ್ಲಿ ತೀವ್ರವಾಗಿ ಗಾಯಗೊಂಡಿದ್ದು, ಆಂಧ್ರಪ್ರದೇಶದ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ತಿರುಪತಿ ತಿಮ್ಮಪ್ಪನ ದರ್ಶನಕ್ಕಾಗಿ ಬುಧವಾರ ತಿರುಪತಿಗೆ ತೆರಳಿದ್ದ ಇವರು, ಗುರುವಾರ ಮೈಸೂರಿಗೆ ಹಿಂತಿರುಗುತ್ತಿದ್ದ ವೇಳೆ ಚಿತ್ತೂರು ಬಳಿ ಕಾರು ಅಪಘಾತಕ್ಕೀಡಾಗಿ ಮೂವರು ಮಹಿಳೆಯರು ಸಾವನ್ನಪ್ಪಿದ್ದರು. ಜಯಲಕ್ಷ್ಮಿ ಮತ್ತು ಸುಜಾತ ಅವರ ಅಂತ್ಯಕ್ರಿಯೆ ಶನಿವಾರ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

# 'ನಮ್ ಕನ್ನಡ ಹಬ್ಬ' ಪೋಸ್ಟರ್ ಬಿಡುಗಡೆ



ಮೈಸೂರು, ನ.3–ಸಖಿ ಫೌಂಡೇಶನ್ ಮತ್ತು ಸೂರ್ಯಚಾರಿಟಬಲ್ ಟ್ರಸ್ಟ್ ವತಿಯಿಂದ ಸಾಗರದಾಚೆಯ ಸವಿಗನ್ನಡಿಗರಿಗಾಗಿ 'ನಮ್ ಕನ್ನಡ ಹಬ್ಬ' ಸ್ಪರ್ಧೆಯ ಪೋಸ್ಟರ್ ಬಿಡುಗಡೆ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಕನ್ನಡ ನಾಡಿಗೆ ಕರ್ನಾಟಕವೆಂದು ನಾಮಕರಣವಾಗಿ 50 ವಸಂತಗಳು ತುಂಬಿದ ಹರುಷದಲ್ಲಿ ವಿದೇಶದಲ್ಲಿ ನೆಲೆಸಿರುವ ಕನ್ನಡಿಗರೂ ಸಹ ಅದರ ಸಂಭ್ರಮಾಚರಣೆಯನ್ನು ವಿನೂತನವಾಗಿ ಆಚರಿಸುವ ಉದ್ದೇಶದಿಂದ ಮತ್ತು ನಮ್ಮ ಕನ್ನಡ ಸಂಸ್ಕೃತಿಯ ವೈಭವವನ್ನು ಅನಾವರಣಗೊಳಿಸುವ ಸಲುವಾಗಿ ಈ ಸ್ಪರ್ಧೆಯನ್ನು ಆಯೋಜಸಲಾಗಿದೆ ಎಂದು ಸಂಸ್ಥಾಪನಾ ಕಾರ್ಯದರ್ಶಿ ಗಾಯತ್ರಿ ಸುಂದರೇಶ್ ತಿಳಿಸಿದರು.


ಹೊರನಾಡಿನಲ್ಲಿರುವ ಕನ್ನಡ ಕೂಟಗಳು, ಸಂಘ–ಸಂಸ್ಥೆಗಳು ಈ ಸ್ಪರ್ಧೆಗೆ ಅರ್ಹರಾಗಿದ್ದು ನವೆಂಬರ್ 30ರೊಳಗೆ ಕನ್ನಡ ಕಾರ್ಯಕ್ರಮಗಳನ್ನು ಆಯೋಜಸಿ ಅದರ ಎರಡು ನಿಮಿಷದ ವಿಡಿಯೋ ತುಣುಕುಗಳು ಹಾಗು ಮೂರು ಭಾವಚಿತ್ರಗಳನ್ನು suryasakhi22@gmail.comಗೆ ಇ–ಮೇಲ್ ಇಲ್ಲವೇ 9964790442 ಸಂಖ್ಯೆಗೆ ವಾಟ್ಸಪ್ ಮಾಡಿ ಪುಸ್ತಕ ಬಹುಮಾನ ಗೆಲ್ಲಬಹುದು ಎಂದು ಅವರು ತಿಳಿಸಿದರು. ಸಮಾರಂಭದಲ್ಲಿ ಸಾಹಿತಿ ಕೆ.ಟಿ.ಶ್ರೀಮತಿ ಮತ್ತು ಸಂಸ್ಥೆಯ ಪದಾಧಿಕಾರಿಗಳು ಭಾಗವಹಿಸಿದ್ದರು.

# ನಾಳೆ ಶ್ರೀ ವನಮಾಲಿ ಚಾರಿಟೆಬಲ್ ಟ್ರಸ್ಟ್ ಪ್ರಶಸ್ತಿ ಪ್ರದಾನ

## ಖ್ಯಾತ ಇತಿಹಾಸಕಾರ ಡಾ. ವಸುಂಧರಾ ಕವಲಿ ಫಿಲಿಯೋಜಾ ಮತ್ತು ಸಂಸ್ಕೃತ ವಿದ್ವಾಂಸರಾದ ಪಿಯರ್ರ ಸಿಲ್ವನ್ ಫಿಲಿಯೋಜಾ ದಂಪತಿಗೆ ಶ್ರೀ ವನಮಾಲಿ ಸಂಸ್ಕೃತಿ ಸೇವಾ ಪ್ರಶಸ್ತಿ; ಕೂಡ್ಲಿಗಿ ಸ್ನೇಹ ಫೌಂಡೇಷನ್ ಸಂಸ್ಥಾಪಕ ಟಿ.ರಾಮಾಂಜನೇಯ ಮತ್ತು ಶ್ರೀಮತಿ ಕೆ.ಪಿ.ಜಯ ಅವರಿಗೆ ಪದ್ಮಶ್ರೀ ಡಾ.ಮತ್ತೂರು ಕೃಷ್ಣಮೂರ್ತಿ ಸಮಾಜ ಸೇವಾ ಪ್ರಶಸ್ತಿ ಪ್ರದಾನ

ಮೈಸೂರು,ನ.3–ಮೈಸೂರಿನ ವಿಜಯನಗರ 2ನೇ ಹಂತದಲ್ಲಿರುವ ಶ್ರೀ ವನಮಾಲಿ ಚಾರಿಟೆಬಲ್ ಟ್ರಸ್ಟ್ ವತಿಯಿಂದ ನ.5ರಂದು ಬೆಳಗ್ಗೆ 10.30 ಗಂಟೆಗೆ ಕುವೆಂಪುನಗರದ ಆದಿ ಚುಂಚನಗಿರಿ ರಸ್ತೆಯಲ್ಲಿರುವ ಗಾನಭಾರತಿ, ವೀಣೆ ಶೇಷಣ್ಣ ಭವನದಲ್ಲಿ 2022–23ರ ಸಾಲಿನ ಶ್ರೀ ವನಮಾಲಿ ಸಂಸ್ಕೃತಿ ಸೇವಾ ಪ್ರಶಸ್ತಿ ಹಾಗೂ ಪದ್ಮಶ್ರೀ ಡಾ.ಮತ್ತೂರು ಕೃಷ್ಣಮೂರ್ತಿ ಸಮಾಜ ಸೇವಾ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಏರ್ಪಡಿಸಲಾಗಿದೆ. ಪ್ರತಿಷ್ಠಾನದ ಶ್ರೀ ವನಮಾಲಿ ಸಂಸ್ಕೃತಿ ಸೇವಾ ಪ್ರಶಸ್ತಿಯನ್ನು ಇತಿಹಾಸಕಾರ ಮತ್ತು ಶಾಸನತಜ್ಞರಾದ ಡಾ. ವಸುಂಧರಾ ಕವಲಿ ಫಿಲಿಯೋಜಾ ಮತ್ತು ಸಂಸ್ಕೃತ ವಿದ್ವಾಂಸರಾದ ಡಾ. ಪಿಯರ್ರ ಸಿಲ್ವನ್ ಫಿಲಿಯೋಜಾ ದಂಪತಿಗೂ, ಪದ್ಮಶ್ರೀ ಡಾ. ಮತ್ತೂರು ಕೃಷ್ಣಮೂರ್ತಿ ಸಮಾಜ ಸೇವಾ ಪ್ರಶಸ್ತಿಯನ್ನು ಬಳ್ಳಾರಿ ಜಿಲ್ಲೆ, ಕೂಡ್ಲಿಗಿ ಸ್ನೇಹಾ ಫೌಂಡೇಷನ್ ಸಂಸ್ಥಾಪಕರಾದ ಟಿ.ರಾಮಾಂಜನೇಯ ಮತ್ತು ಶ್ರೀಮತಿ ಕೆ.ಪಿ. ಜಯ ಅವರಿಗೆ ಪ್ರದಾನ ಮಾಡಲಾಗುವುದು. ಪ್ರಶಸ್ತಿಯು ತಲಾ 25,000 ರೂ. ನಗದು, ಶ್ರೀ ವನಮಾಲಿಯ ಕಂಚಿನ ಪ್ರತಿಮೆ, ಬಿನ್ನವತ್ತಳೆ ಇತರ ಪರಿಕರಗಳನ್ನು ಒಳಗೊಂಡಿದೆ. ಮೈಸೂರಿನ ಖ್ಯಾತ ಸಂಸ್ಕೃತ ವಿದ್ವಾಂಸರಾದ ಪ್ರೊ.ಹೆಚ್.ವಿ.ನಾಗರಾಜರಾವ್ ಅಭಿನಂದನಾ ಭಾಷಣ ಮಾಡಲಿದ್ದಾರೆ. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಹಿರಿಯ ವಿದ್ವಾಂಸರು ಹಾಗೂ ಸಂಶೋಧಕರಾದ ನಾಡೋಜ ಡಾ.ಟಿ.ವಿ.ವೆಂಕಟಾಚಲಶಾಸ್ತ್ರಿ ವಹಿಸುವರು.

### ಡಾ. ವಸುಂಧರಾ ಕವಲಿ ಫಿಲಿಯೋಜಾ –ಪಿಯರ್ರ ಸಿಲ್ವನ್ ಫಿಲಿಯೋಜಾ



**ಡಾ.ವಸುಂಧರಾ ಕವಲಿ ಫಿಲಿಯೋಜಾ:** ಇವರು 1940ರಲ್ಲಿ ಹಾವೇರಿಯಲ್ಲಿ ಜನಿಸಿದರು. ಕಲೆ ಹಾಗೂ ಸಂಸ್ಕೃತಿಗಳ ಇತಿಹಾಸಕಾರರು ಮತ್ತು ಶಾಸನತಜ್ಞರಾಗಿದ್ದಾರೆ. ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಸ್ನಾತಕ ಪದವಿ ಪಡೆದು ಹೆಚ್ಚಿನ ವ್ಯಾಸಂಗವನ್ನು ಫ್ರಾನ್ಸ್‌ನಲ್ಲಿ ಮಾಡಿದರು. ಫ್ರೆಂಚ್ ಪ್ರಜೆ, ಸಂಸ್ಕೃತ ವಿದ್ವಾಂಸರಾದ ಪಿಯರ್ರ ಸಿಲ್ವನ್ ಫಿಲಿಯೋಜಾ ಅವರನ್ನು ವಿವಾಹವಾಗಿ ನಮ್ಮ ದೇಶದ ಪುರಾತತ್ವ ಮತ್ತು ಸಾಹಿತ್ಯ ಚರಿತ್ರೆಗಳ ಸಂಶೋಧನೆಗಿಳಿದರು. ವಿಶೇಷವಾಗಿ ಕರ್ನಾಟಕ ಸಾಮ್ರಾಜ್ಯದ (ವಿಜಯನಗರ) ದೇಗುಲಗಳು ಹಾಗೂ ಶಾಸನಗಳ ವಿಷಯದಲ್ಲಿನ ಇವರ ಕೆಲಸಗಳು ವಿದ್ವಾಂಸರ ಅತೀವ ಮೆಚ್ಚುಗೆಗೆ ಪಾತ್ರ ವಾಗಿದೆ. ಅವರ ಈ ಕಾರ್ಯವನ್ನು ಗುರುತಿಸಿ ಕರ್ನಾಟಕ ಸರ್ಕಾರವು ಪ್ರಶಸ್ತಿಯನ್ನಿತ್ತು ಗೌರವಿಸಿದೆ. 2008ರಲ್ಲಿ 'ಕರ್ನಾಟಕ ಹಿಸ್ಟರಿ ಅಕಾಡೆಮಿ'ಯ 22ನೇ ಕಾಂಗ್ರೆಸ್‌ಗೆ ಅಧ್ಯಕ್ಷೆಯಾಗಿ ಆಯ್ಕೆಯಾಗಿ ದ್ದರು. 2012ರಲ್ಲಿ ಶ್ರೀಮತಿ ವಸುಂಧರಾ ಫಿಲಿಯೋಜಾ ಮತ್ತು ಶ್ರೀಮತಿ ಪಿಯರ್ರ ಫಿಲಿಯೋಜಾ ದಂಪತಿ ಮೈಸೂರಿನ ಹಿಮಾಲಯ ಟ್ರಸ್ಟ್‌ನಿಂದ ವಿದ್ಯಾರಣ್ಯ ಪ್ರಶಸ್ತಿಗೆ ಭಾಜನರಾಗಿದ್ದರು. 2016ರಲ್ಲಿ ಬೆಂಗಳೂರಿನಲ್ಲಿ ಚಿದಾನಂದ ಪ್ರಶಸ್ತಿಗೆ ಪುರಸ್ಕೃತರಾಗಿದ್ದಾರೆ. 2019ರಲ್ಲಿ ಕರ್ನಾಟಕ ಇತಿಹಾಸ ಅಕಾಡೆಮಿ ಶ್ರೀಮತಿ ವಸುಂಧರಾ ಅವರನ್ನು ಇತಿಹಾಸ ಸಂಸ್ಕೃತಿಶ್ರೀ ಪ್ರಶಸ್ತಿ ನೀಡಿ ಸನ್ಮಾನಿಸಿದೆ. 2021ರಲ್ಲಿ ಅಮೇರಿಕಾದ ಚಿಕಾಗೋನಗರದ ನಮಃ ಅಸೋಸಿಯೇಷನ್ ವತಿಯಿಂದ 'ಕರ್ನಾಟಕ ಕಲಾ ಪ್ರವರ್ತಕ' ಬಿರುದು ನೀಡಿ ಸನ್ಮಾನಿಸಿದೆ.

ಡಾ.ಫಿಲಿಯೋಜಾ ಅವರು ಪಾಂಡಿಚೇರಿಯಲ್ಲಿನ ಫ್ರೆಂಚ್ ಇನ್ಸ್‌ಟಿಟ್ಯೂಟ್ ಸ್ಥಾಪಕ, ಡಾ.ಜಾನ್ ಫಿಲಿಯೋಜಾ ಅವರ ಪುತ್ರ 1936ರಲ್ಲಿ ಜನನ. ಫ್ರಾನ್ಸ್‌ನಲ್ಲಿ ಶಾಸ್ತ್ರೀಯ ಭಾಷೆಗಳನ್ನು ಅಭ್ಯಾಸ ಮಾಡಿ, ಪಾಂಡಿಚೇರಿಯಲ್ಲಿ ವ್ಯಾಕರಣ ಮತ್ತು ಆಗಮಶಾಸ್ತ್ರಗಳಲ್ಲಿ ಪರಿಣತಿ ಪಡೆದು, ಅಲಂಕಾರಶಾಸ್ತ್ರದಲ್ಲಿ ಡಾಕ್ಟರೇಟ್ ಪಡೆದಿದ್ದಾರೆ. ಫ್ರಾನ್ಸ್‌ನ ಪ್ಯಾರಿಸ್ ವಿಶ್ವವಿದ್ಯಾಲಯದಲ್ಲಿ 2004ರಿಂದ ಸಂಸ್ಕೃತದ ಎಮರಿಟಸ್ ಪ್ರೊಫೆಸರ್ ಆಗಿದ್ದಾರೆ. 1955ರಿಂದಲೂ ಪ್ರತಿ ವರ್ಷದ ಅರ್ಧದಷ್ಟು ಸಮಯವನ್ನು ಭಾರತದಲ್ಲಿದ್ದು, ಭಾರತೀಯಶಾಸ್ತ್ರದ ಅಧ್ಯಯನಕ್ಕಾಗಿ ವಿನಿಯೋಗಿಸುತ್ತಾರೆ. 2013ರಲ್ಲಿ ಲಾಲ್‌ಬಹದ್ದೂರ್‌ಶಾಸ್ತ್ರಿ ಸಂಸ್ಕೃತ ವಿದ್ಯಾಪೀಠದಿಂದ 'ಮಹಾಮಹೋಪಾಧ್ಯಾಯ' ಪುರಸ್ಕಾರ ಪಡೆದ್ದಾರೆ. 2014ರಲ್ಲಿ ಭಾರತ ಸರ್ಕಾರದಿಂದ ಸಂಸ್ಕೃತ ಭಾಷೆಯ ಅಧ್ಯಯನಕ್ಕಾಗಿ 'ರಾಷ್ಟ್ರಪತಿ ಪ್ರಶಸ್ತಿ'ಯನ್ನು ಪಡೆದಿದ್ದಾರೆ. ಸಂಸ್ಕೃತವನ್ನು ಬೋಧಿಸುವುದಲ್ಲದೆ, ಸಂಸ್ಕೃತದ ಹಲವು ಪ್ರಕಾರಗಳಲ್ಲಿ ಸಂಶೋಧನೆ ನಡೆಸುತ್ತಿದ್ದಾರೆ. ಹಲವಾರು ಪುಸ್ತಕಗಳನ್ನು ಬರೆದಿದ್ದಾರೆ. ಹಂಪೆಯನ್ನು "ವಿಶ್ವಪರಂಪರೆಯ ತಾಣವೆಂದು ಯುನೆಸ್ಕೊ ಘೋಷಿಸಲು ಫಿಲಿಯೋಜಾ ದಂಪತಿಗಳ ಶ್ರಮವೂ ಒಂದು ಮುಖ್ಯ ಕಾರಣ. ಈ ಇಳಿವಯಸ್ಸಿನಲ್ಲಿಯೂ ದಂಪತಿಗಳು ಕರ್ನಾಟಕ ದೇಗುಲಗಳ ಇತಿಹಾಸ, ವಾಸ್ತುಶಿಲ್ಪ ಮತ್ತು ಕಲೆಗಳ ಬಗೆಗೆ (ವಿಶೇಷವಾಗಿ ಉತ್ತರ ಕರ್ನಾಟಕದ ದೇಗುಲಗಳು) ವಿಶೇಷ ಅಧ್ಯಯನ ನಡೆಸುತ್ತಿದ್ದಾರೆ, ಇಂಡೋ–ಯುರೋಪಿಯನ್ ಕುಟುಂಬದ ಸೌಹಾರ್ದತೆಗೆ ಅತ್ಯುತ್ತಮ ಉದಾಹರಣೆಯಾಗಿದ್ದಾರೆ.

### ಟಿ.ರಾಮಾಂಜನೇಯ ಮತ್ತು ಶ್ರೀಮತಿ ಕೆ.ಪಿ.ಜಯ



ಟಿ.ರಾಮಾಂಜನೇಯ ಚಿತ್ರದುರ್ಗ ಜಿಲ್ಲೆ ಚಳ್ಳಕೆರೆ ತಾಲೂಕಿನ ಗಜ್ಜುಗಾನಹಳ್ಳಿ ಗ್ರಾಮದವರು. ಕೂಲಿ ಕುಟುಂಬದ ನಾಲ್ಕು ಮಕ್ಕಳಲ್ಲಿ ಹಿರಿಯ ಮಗ. ಬಹಳ ಪರಿಶ್ರಮದಿಂದ ಮೈಸೂರಿನ National Institute of Engineering ಕಾಲೇಜ್‌ನಲ್ಲಿ ಸಿವಿಲ್ ಎಂಜಿನಿಯರಿಂಗ್ ಪದವಿ ಪಡೆದರು.

ಸ್ವಯಂ ಸೇವಾ ಸಂಸ್ಥೆಯೊಂದರಲ್ಲಿ ಕೆಲಸ ಮಾಡುವಾಗಲೇ "ಸ್ನೇಹ" ಎನ್ನುವ ಸ್ವಯಂ ಸೇವಾ ಸಂಸ್ಥೆಯೊಂದನ್ನು ಪ್ರಾರಂಭಿಸಿದರು. ಸಂಸ್ಥೆಯ ಪ್ರಾರಂಭದ ದಿನಗಳಲ್ಲಿ ಗಾಂಧಿ ತತ್ವಗಳ ಬಗ್ಗೆ ಆಕರ್ಷಿತವಾಗಿದ್ದ ರಾಮಾಂಜನೇಯರವರು "ಗಾಂಧಿ ಶಾಂತಿ ಪ್ರತಿಷ್ಠಾನ'ದ ಫೆಲೋಶಿಪ್‌ಗೆ ಆಯ್ಕೆಯಾಗಿ ಹಳ್ಳಿಗಳ ಅಭಿವೃದ್ಧಿಗೆ ಕೆಲಸ ಮಾಡಿದರು. ಪ್ರಾರಂಭದ 8–10 ವರ್ಷಗಳ ಅವಧಿಯಲ್ಲಿ ಬಳ್ಳಾರಿ ಜಿಲ್ಲೆ ಕೂಡ್ಲಿಗಿ ತಾಲೂಕಿನ ಅಂಗನವಾಡಿಗಳಿಲ್ಲದ ಹಳ್ಳಿಗಳಲ್ಲಿ 3–6 ವರ್ಷದ ಮಕ್ಕಳಿಗೆ ಬಾಲ್ಯ ವಿಕಾಸ ಕೇಂದ್ರಗಳು, ಮಕ್ಕಳ ಶೈಕ್ಷಣಿಕ ಪ್ರಗತಿಗಾಗಿ ರಾತ್ರಿ ಶಾಲೆಗಳು, ಬಾಲಕಾರ್ಮಿಕ ಮಕ್ಕಳ ಪುನರ್ವಸತಿ ಶಾಲೆಗಳು, ಆರೋಗ್ಯ ತಪಾಸಣೆ & ಜಾಗೃತಿ ಕಾರ್ಯಕ್ರಮಗಳು, ಮಹಿಳೆಯರ ಅಭಿವೃದ್ಧಿಗಾಗಿ ಸ್ವ–ಸಹಾಯ ಸಂಘಗಳ ರಚನೆ, ಹಕ್ಕುಗಳ ಬಗ್ಗೆ ತರಬೇತಿ ಇತ್ಯಾದಿ ಕಾರ್ಯಕ್ರಮಗಳ ಮೂಲಕ ಕೆಲಸ ಮಾಡಿದರು.

ಸಮುದಾಯ ಅಭಿವೃದ್ಧಿ ಕೆಲಸಕ್ಕೆ ಸಂಬಂಧಿಸಿದ ತರಬೇತಿ, ಸಭೆಗಳಲ್ಲಿ ಭೇಟಿಯಾದ ಚಿಕ್ಕಮಗಳೂರು ಜಿಲ್ಲೆಯ ಕಡೂರಿನ ಕೆ.ಪಿ.ಜಯರವರೊಂದಿಗೆ ಅಂತರ್ಜಾತೀಯ ವಿವಾಹವಾದರು.

ಸಂಸ್ಥೆಯ ಕೆಲಸಗಳಿಗಾಗಿ ಅಗಿಂದಾಗ್ಗೆ ಕೂಡ್ಲಿಗಿ, ಹೊಸ ಪೇಟೆಗೆ ಲಾರಿಗಳಲ್ಲಿ ಪ್ರಯಾಣಿಸುತ್ತಿದ್ದ ರಾಮಾಂಜನೇಯ ರವರಿಗೆ ದಾರಿಯ ಅರಣ್ಯ ಇರುವ ಜಾಗಗಳಲ್ಲಿ ಗಿರಾಕಿಗಳಿಗಾಗಿ ಲಾರಿ ನಿಲ್ಲಿಸುತ್ತಿದ್ದ ಹೆಣ್ಣು ಮಕ್ಕಳ ಬಗ್ಗೆ ಹೆಚ್ಚಾಗಿ ತಿಳಿಯಲು ಪ್ರಯತ್ನಿಸಿದಾಗ ದೇವದಾಸಿ ಪದ್ಧತಿಯ ಬಗ್ಗೆ ತಿಳಿಯಿತು. ಸಮಾಲೋಚಕರ ಸಹಾಯದಿಂದ ದೇವದಾಸಿ ಪದ್ಧತಿಗೆ ಒಳಗಾದ ಮಹಿಳೆಯರು ಹಾಗೂ ಮಕ್ಕಳ ಸ್ಥಿತಿ ಬಗ್ಗೆ ಆಳವಾದ ಅಧ್ಯಯನದ ನಂತರ ಏನು ಮಾಡಿದರೆ ದೇವದಾಸಿ ಪದ್ಧತಿಯನ್ನು ಸಮಗ್ರವಾಗಿ ನಿರ್ಮೂಲನೆ ಮಾಡಬಹುದು ಎಂಬುದನ್ನು ಅರಿತು 2003ರಿಂದ ಮಕ್ಕಳ ಶಿಕ್ಷಣ, ಆರ್ಥಿಕಾಭಿ ವೃದ್ಧಿ ಕಾರ್ಯಕ್ರಮಗಳನ್ನು ಯೋಜಿಸಿ ಕೆಲಸ ಮಾಡಲು ಪ್ರಾರಂಭಿಸಿದರು. ಅಂತೆಯೇ ದೇವದಾಸಿ ಮಹಿಳೆಯರನ್ನು ಮುಕ್ತ ಎನ್ನುವ ಹೆಸರಿನಡಿ ಗ್ರಾಮ, ಗ್ರಾಪಂ ತಾಲೂಕು, ಜಿಲ್ಲೆ ಹಾಗೂ ರಾಜ್ಯ ಮಟ್ಟದಲ್ಲಿ ಸಂಘಟನೆ ಮಾಡಿ ಸರ್ಕಾರದಿಂದ ಮಾಸಾ ಶನ, ಮನೆ, ಆರ್ಥಿಕಾಭಿವೃದ್ಧಿಗೆ ಸಹಾಯ, ಮದುವೆಗೆ ಪ್ರೋತ್ಸಾಹ ಧನ ಇತ್ಯಾದಿ ದೊರಕಿಸಿದರು. ಇದರ ಪರಿಣಾಮವಾಗಿ ದೇವದಾಸಿ ಮಹಿಳೆಯರ ಮಾಸಾಶನ ಹಂತ ಹಂತವಾಗಿ ರೂ.400/– ರಿಂದ ರೂ.1,500/– ಆಗಿದೆ. ದೇವದಾಸಿ ಹೆಣ್ಣು ಮಕ್ಕಳಿಗೆ ರೂ.5,00,000/– ಹಾಗೂ ಗಂಡು ಮಕ್ಕಳಿಗೆ ರೂ. 3,00,000/– ಮದುವೆ ಪ್ರೋತ್ಸಾಹ ಧನ ದೊರೆಯುತ್ತಿದೆ.

ದೇವದಾಸಿ ಕುಟುಂಬದ ಮಕ್ಕಳು ಯಾವುದೇ ರೀತಿಯಲ್ಲಿ ಶಿಕ್ಷಣದಿಂದ ವಂಚಿತರಾಗಬಾರದು ಎನ್ನುವ ಉದ್ದೇಶ ದಿಂದ ಪ್ರತಿ ವರ್ಷ 500ಕ್ಕೂ ಹೆಚ್ಚು ಮಕ್ಕಳಿಗೆ ಆಯಾ ವರ್ಷದ ಶೈಕ್ಷಣಿಕ ಅವಶ್ಯಕತೆಗಳಿಗೆ ಸಹಾಯ ಮಾಡುವ ಕೆಲಸ ಮಾಡುತ್ತಿದೆ. ಪ್ರಸ್ತುತ ದೇವದಾಸಿ ಕುಟುಂಬದ 52 ಮಕ್ಕಳು ಎಂಬಿಬಿಎಸ್, ಬಿ.ವಿ.ಎಸ್ಸಿ, ನರ್ಸಿಂಗ್ ಇತ್ಯಾದಿ ವೃತ್ತಿ ಆಧಾರಿತ ಕೋರ್ಸ್‌ಗಳನ್ನು ಓದಿ ಬದುಕಿನಲ್ಲಿ ತಮ್ಮ ನೆಲೆ ಕಂಡುಕೊಳ್ಳಲು ಸಹಾಯ ಮಾಡುತ್ತಿದೆ. 150ಕ್ಕೂ ಹೆಚ್ಚು ಮಕ್ಕಳಿಗೆ ಪ್ರತಿ ವರ್ಷ ಫ್ಯಾಷನ್ ಡಿಸೈನ್ ಹಾಗೂ ಹೊಲಿಗೆ ತರಬೇತಿ ಮತ್ತು ಕಚೇರಿ ವ್ಯವಸ್ಥಾಪಕರ ತರಬೇತಿ (ಕಂಪ್ಯೂಟರ್ ಬಳಕೆ, ಟ್ಯಾಲಿ, ಸಂವಹನ ಇತ್ಯಾದಿಗಳ ಬಗ್ಗೆ ನೀಡಿ ಉದ್ಯೋಗ ಪಡೆಯಲು, ಸ್ವ–ಉದ್ಯೋಗ ಪ್ರಾರಂಭಿಸಲು ಸಹಾಯ ಮಾಡುತ್ತಿದೆ.

ಯಾವುದೇ ಅರ್ಜಿ ಸಲ್ಲಿಸದಿದ್ದರೂ ದೇವದಾಸಿ ಮಹಿಳೆಯರು ಮತ್ತು ಮಕ್ಕಳ ಅಭಿವೃದ್ಧಿಗಾಗಿ ಮಾಡಿದ ಕೆಲಸವನ್ನು ದೂರದರ್ಶನ ಚಂದನ ವಾಹಿನಿ ಗುರುತಿಸಿ 2017ರಲ್ಲಿ "ದೂರದರ್ಶನ ಚಂದನ ಪ್ರಶಸ್ತಿ'ಯನ್ನು ಕೊಟ್ಟು ಗೌರವಿಸಿದೆ.

# ರೈತರ ಮರೆತಿರುವ ಈ ಸರ್ಕಾರ ಇರಲೇಬಾರದು

## ● ಮಾಜಿ ಉಪಮುಖ್ಯಮಂತ್ರಿ ಕೆ.ಎಸ್.ಈಶ್ವರಪ್ಪ ವಾಗ್ದಾಳಿ ● ರಾಜ್ಯದಲ್ಲಿ ಸಮ್ಮಿಶ್ರ ಸರ್ಕಾರವಿದೆ- ಒಂದು ಸಿಎಂ ಸಿದ್ದರಾಮಯ್ಯ; ಮತ್ತೊಂದು ಡಿಸಿಎಂ ಡಿ.ಕೆ.ಶಿವಕುಮಾರ್

ಮೈಸೂರು, ನ.3(ಎಸ್‌ಬಿಡಿ)– ರಾಜ್ಯದಲ್ಲಿ ರೈತರ ಹಿತ ಮರೆತಿರುವ ಕಾಂಗ್ರೆಸ್ ಸರ್ಕಾರ ಇರಬಾರದು ಎಂದು ಮಾಜಿ ಉಪಮುಖ್ಯಮಂತ್ರಿ ಕೆ.ಎಸ್.ಈಶ್ವರಪ್ಪ ಕಿಡಿಕಾರಿದ್ದಾರೆ.

ಮೈಸೂರಲ್ಲಿ ಶುಕ್ರವಾರ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ರಾಜ್ಯದಲ್ಲಿ ಭೀಕರ ಬರಗಾಲ ಉಂಟಾಗಿದೆ. ರೈತರ ಆತ್ಮಹತ್ಯೆ ಪ್ರಕರಣದ ಲೆಕ್ಕ ಸಿಗುತ್ತಿಲ್ಲ. ರೈತ ತೀವ್ರ ಸಂಕಷ್ಟದಲ್ಲಿದ್ದರೂ ಯಾವೊಬ್ಬ ಜಿಲ್ಲಾ ಉಸ್ತುವಾರಿ ಸಚಿವರೂ ಹಳ್ಳಿಗಳಿಗೆ ಹೋಗಿಲ್ಲ. ರೈತರ ಕಷ್ಟ–ನಷ್ಟ ಕೇಳಿ ಅವರಿಗೆ ಸಮಾಧಾನ ಹೇಳುವುದಕ್ಕೂ ಧೈರ್ಯವಿಲ್ಲ. ಇದುವರೆಗೂ ಬೆಳೆ ಪರಿಹಾರಕ್ಕಾಗಲಿ, ಬರ ಪರಿಹಾರಕ್ಕಾಗಲಿ ಒಂದು ರೂ. ಬಿಡುಗಡೆ ಮಾಡಿಲ್ಲ. ಶಿಸ್ತಿಲ್ಲ, ರೈತರ ಬಗ್ಗೆ ಕಾಳಜಿ ಇಲ್ಲ. ಹೀಗಾಗಿ ಆಡಳಿತದ ಚುಕ್ಕಾಣಿ ಹಿಡಿಯುವ ಅಧಿಕಾರ ಇವರಿಗಿಲ್ಲ ಎಂದರು.

**ಚುನಾವಣೆಗೆ ಬನ್ನಿ:** ಸಂಕಷ್ಟದ ಸಮಯದಲ್ಲೂ ಜಾತಿ ಹೆಸರಲ್ಲಿ ಮುಖ್ಯಮಂತ್ರಿ ಸ್ಥಾನಕ್ಕಾಗಿ ಬಡಿದಾಡಿಕೊಳ್ಳುತ್ತಿದ್ದೀರಿ. ರಾಜ್ಯದ ಜನರಿಗೆ ಏನೆಂದು ಉತ್ತರ ಕೊಡುತ್ತೀರಾ?. ಬಸ್ ಓಡಾಡುವುದನ್ನು ಬಿಟ್ಟರೆ ಇನ್ಯಾವ ಗ್ಯಾರಂಟಿಯೂ ಯಶಸ್ವಿ ಆಗಿಲ್ಲ. ರಾಜ್ಯದ ಜನರಿಗೆ ಮೋಸ ಮಾಡಿ ಆಡಳಿತ ಮಾಡ್ತಿದ್ದೀರಿ. ಐದಾರು ತಿಂಗಳಿಂದ ಒಳ್ಳೆಯದನ್ನೇ ಮಾಡಿಕೊಂಡು ಬಂದಿದ್ದೇವೆ. ಜನರು ಮೆಚ್ಚಿದ್ದಾರೆ ಎಂಬ ನಂಬಿಕೆ ಇದ್ದರೆ ರಾಜೀನಾಮೆ ಕೊಟ್ಟು ಚುನಾವಣೆಗೆ ಬನ್ನಿ ಎಂದು ಸವಾಲೆಸೆದರು.

**ಇದು ಸಮ್ಮಿಶ್ರ ಸರ್ಕಾರ:** ರಾಜ್ಯದಲ್ಲಿರುವುದು ಸಮ್ಮಿಶ್ರ ಸರ್ಕಾರ, ಕಾಂಗ್ರೆಸ್ ಸರ್ಕಾರವಲ್ಲ. ಒಂದು ಕಡೆ ಸಿದ್ದರಾಮಯ್ಯನವರು ಕಾಂತರಾಜ ವರದಿಯನ್ನು ಜಾರಿಗೆ ತಂದೇ ತರುತ್ತೇನೆ ಎನ್ನುತ್ತಾರೆ. ಇನ್ನೊಂದು ಕಡೆ ಡಿ.ಕೆ.ಶಿವಕುಮಾರ್ ನೇತೃತ್ವದಲ್ಲಿ ಒಕ್ಕಲಿಗರೆಲ್ಲಾ ಒಟ್ಟಿಗೆ ಸೇರಿ ಯಾವ ಕಾರಣಕ್ಕೂ ವರದಿ ಜಾರಿಗೆ ಬಿಡುವುದಿಲ್ಲ ಎನ್ನುತ್ತಾರೆ. ಒಂದೇ ಪಕ್ಷದ ಸರ್ಕಾರದಲ್ಲಿ ಮುಖ್ಯಮಂತ್ರಿ ಹಾಗೂ ಉಪಮುಖ್ಯಮಂತ್ರಿ ಭಿನ್ನ ಹೇಳಿಕೆ ನೀಡುತ್ತಾರೆ. 7 ವರ್ಷದ ಹಿಂದೆ ಕೇಳಿದಾಗ ಸಿದ್ದರಾಮಯ್ಯನವರು ವರದಿಗೆ ಬೈಂಡಿಂಗ್ ಆಗಿಲ್ಲ ಎಂದಿದ್ದರು. ಕೆಲ ದಿನಗಳ ಹಿಂದೆ ಅದಕ್ಕೆ ಕಾರ್ಯದರ್ಶಿ ಸಹಿ ಆಗಿಲ್ಲ ಎಂದಿದ್ದಾರೆ. ಹಾಗಾದರೆ ಅದು ವರದಿಯಾಗಲು ಸಾಧ್ಯವೇ ಇಲ್ಲ. ಅದಕ್ಕೆ ಬೆಂಕಿ ಇಡಬೇಕು. ಇದನ್ನು ಮುಂದಿಟ್ಟುಕೊಂಡು ರಾಜಕೀಯ ಮಾಡುತ್ತಿದ್ದಾರೆ. ಜನರ ತೆರಿಗೆ ಹಣದಲ್ಲಿ ತಯಾರಿಸಿರುವ ವರದಿಯನ್ನು ಏನು ಮಾಡುತ್ತೀರಿ ಎಂದು ಸಿದ್ದರಾಮಯ್ಯನವರು ಸ್ಪಷ್ಟಪಡಿಸಬೇಕು ಎಂದು ಒತ್ತಾಯಿಸಿದರು.

**ನಿಮ್ಮ ನಾಯಕ ಯಾರು?:** ಬಿಜೆಪಿ ಲೀಡರ್ ಲೆಸ್, ಜೆಡಿಎಸ್ ಪೀಪಲ್ ಲೆಸ್ ಎಂಬ ಪ್ರಿಯಾಂಕ ಖರ್ಗೆ ಹೇಳಿಕೆಗೆ ಪ್ರತಿಕ್ರಿಯಿಸಿ, ದೇಶದ ಯಾವ ಮೂಲೆಯಲ್ಲಿ ಕೇಳಿದರೂ ಪ್ರಧಾನಿ ನರೇಂದ್ರ ಮೋದಿ ಅವರ ಹೆಸರೇಳುತ್ತಾರೆ. ಜಗತ್ತಿನಲ್ಲಿ ಇವರನ್ನು ವಿಶ್ವನಾಯಕ ಎಂದು ಹೇಳುತ್ತಾರೆ. ರಾಜ್ಯದಲ್ಲಿರುವ ಒಂದು ಕೋಟಿ ಕಾರ್ಯಕರ್ತರು ಹೆಮ್ಮೆಯಿಂದ ಮೋದಿ ಅವರು ನಮ್ಮ ನಾಯಕರು ಎಂದು ಹೇಳುತ್ತೇವೆ. ಆದರೆ ನಿಮ್ಮ ನಾಯಕ ಯಾರು? ರಾಹುಲ್ ಗಾಂಧೀನಾ?. ಲೀಡರ್ ಲೆಸ್ ಅಂತಾ ಹೇಳೊದು ಬಹಳ ಸುಲಭ. ರಾಜ್ಯದಲ್ಲಿ ನಿಮ್ಮ ಇಬ್ಬರು ಲೀಡರ್‌ಗಳು ಕುಸ್ತಿ ಆಡುತ್ತಿದ್ದಾರೆ. ಇದನ್ನ ಲೀಡರ್‌ಗಳ ಪಕ್ಷ ಅಂತಾ ಕರೆಯುತ್ತೀರಾ?. ನಮ್ಮ ನಾಯಕ ಮೋದಿ ಅಂತಾ ನಾವು ಹೆಮ್ಮೆಯಿಂದ ಹೇಳಿಕೊಳ್ಳುತ್ತೇವೆ. ಯಾವ ಹಳ್ಳಿಯಲ್ಲಿ ನಿಮ್ಮ ರಾಹುಲ್ ಗಾಂಧಿ ಹೆಸರೇಳುತ್ತಾರೆ? ಎಂದು ಪ್ರಶ್ನಿಸಿದರು.



**ಜಾತಿಗೊಂದು ಸಿಎಂ ಮಾಡಿ:** ಸಿದ್ದರಾಮಯ್ಯನವರು ನಾನು ಹಿಂದುಳಿದವರ ಸಿಎಂ ಎಂದು ಹೇಳಿಕೊಂಡು ಬಂದಿದ್ದಾರೆ. ಒಕ್ಕಲಿಗರೆಲ್ಲಾ ನನ್ನ ಹಿಂದೆ ನಿಲ್ಲಿ ನಾನೇ ಮುಖ್ಯಮಂತ್ರಿಯಾಗುತ್ತೇನೆ ಎಂದು ಡಿ.ಕೆ.ಶಿವಕುಮಾರ್ ಹೇಳಿದರು. ಈ ಮೊದಲು ಸಿದ್ದರಾಮಯ್ಯನವರೇ ಮುಖ್ಯಮಂತ್ರಿಯಾಗಿರಬೇಕು ಎಂದಿದ್ದ ಪ್ರಿಯಾಂಕ್ ಖರ್ಗೆ, ಈಗ ನಾನೂ ಮುಖ್ಯಮಂತ್ರಿಯಾಗಬೇಕು ಎಂದಿದ್ದಾರೆ. ಕೆ.ಎನ್.ರಾಜಣ್ಣ ಸಿದ್ದರಾಮಯ್ಯರ ಹೆಸರು ಬಿಟ್ಟು ಪರಮೇಶ್ವರ್ ಸಿಎಂ ಆಗಲಿ ಎನ್ನುತ್ತಿದ್ದಾರೆ. ಇದು ಯಾವ ನ್ಯಾಯ. ಡಾ.ಜಿ.ಪರಮೇಶ್ವರ್ ಹಾಗೂ ಪ್ರಿಯಾಂಕ್ ಖರ್ಗೆ ದಲಿತ ಸಿಎಂ ಆಗಬೇಕು ಎನ್ನುತ್ತಿದ್ದಾರೆ. ಇದು ಬಿಜೆಪಿಯನ್ನು ಕೋಮುವಾದಿ, ಜಾತಿವಾದಿ ಎನ್ನುತ್ತಿದ್ದವರ ರಾಷ್ಟ್ರೀಯವಾದ. ರಾಜ್ಯದಲ್ಲಿ ಜಾತಿಗೊಂದು ಸಿಎಂ ಹುದ್ದೆ ನೀಡುವ ಸನ್ನಿವೇಶ ಎದುರಾಗಿದೆ. ಇನ್ನು ಐದು ವರ್ಷ ನಾನೇ ಮುಖ್ಯಮಂತ್ರಿ ಎಂದು ಹೇಳಿಕೊಳ್ಳುವ ದುಃಸ್ಥಿತಿ ಸಿದ್ದರಾಮಯ್ಯಗೆ ಎದುರಾಗಿದೆ. ರಾಜೀನಾಮೆ ನೀಡಿ ಚುನಾವಣೆಗೆ ಹೋಗುವುದು ಉತ್ತಮ ಎಂದು ಕಾಂಗ್ರೆಸ್ ಸರ್ಕಾರವನ್ನು ವ್ಯಂಗ್ಯವಾಡಿದರು.

## ನ.23ರವರೆಗೂ ತಮಿಳುನಾಡಿಗೆ ನಿತ್ಯ 2,600 ಕ್ಯೂಸೆಕ್ ನೀರು ಬಿಡುಗಡೆಗೆ ಕರ್ನಾಟಕಕ್ಕೆ CWMA ಆದೇಶ

ಬೆಂಗಳೂರು, ನ.3– ತಮಿಳುನಾಡಿಗೆ ಮತ್ತೆ ನೀರು ಬಿಡುಗಡೆ ಮಾಡುವಂತೆ ಕಾವೇರಿ ನದಿ ನೀರು ನಿರ್ವಹಣಾ ಪ್ರಾಧಿಕಾರ ಕರ್ನಾಟಕಕ್ಕೆ ಆದೇಶಿಸಿದೆ. ದೆಹಲಿಯಲ್ಲಿಂದು ನಡೆದ ಸಭೆಯಲ್ಲಿ ನ.1ರಿಂದ 23ರ ತನಕ ನಿತ್ಯ 2,600 ಕ್ಯೂಸೆಕ್ ಕಾವೇರಿ ನದಿ ನೀರನ್ನು ತಮಿಳುನಾಡಿಗೆ ಹರಿಸಬೇಕು ಎಂಬ ಕಾವೇರಿ ನೀರು ನಿಯಂತ್ರಣಾ ಸಮಿತಿ ಆದೇಶವನ್ನು ಒಪ್ಪದ ಕರ್ನಾಟಕ, ತಮಿಳು ನಾಡಿಗೆ ನೀರು ಬಿಡುಗಡೆ ಸಾಧ್ಯವಿಲ್ಲ ಎಂದು ವಾದಿಸಿತು. ಕೆಆರ್‌ಎಸ್ ಒಳಹರಿವು ಶೂನ್ಯವಾಗಿದೆ. ಎಲ್ಲ ಜಲಾಶಯಗಳು ಸೇರಿ 51 ಟಿಎಂಸಿ ನೀರು ಮಾತ್ರ ಲಭ್ಯವಿದೆ. ಕುಡಿಯುವುದಕ್ಕೂ ನೀರಿನ ಕೊರತೆ ಉಂಟಾಗಲಿರುವುದರಿಂದ ಮಿಕ್ಕಿರುವ ನೀರನ್ನು ಸಂರಕ್ಷಣೆ ಮಾಡಿಕೊಳ್ಳಲೇಬೇಕಾಗಿದ್ದು, ನೀರು ಬಿಡುಗಡೆ ಸಾಧ್ಯವಿಲ್ಲ ಎಂದು ವಾದಿಸಿದ ಕರ್ನಾಟಕ ಅಧಿಕಾರಿಗಳು, ಮೇಕೆದಾಟು ಯೋಜನೆ ಚರ್ಚೆಗೆ ಪಟ್ಟು ಹಿಡಿದರು. ಆದರೆ, ನವೆಂಬರ್ 1 ರಿಂದ ನವೆಂಬರ್ 23ರವರೆಗೂ ನಿತ್ಯ 2,600 ಕ್ಯೂಸೆಕ್ಸ್ ನೀರನ್ನು ತಮಿಳುನಾಡಿಗೆ ಬಿಡುಗಡೆ ಮಾಡಬೇಕೆಂದು ಕರ್ನಾಟಕಕ್ಕೆ ಸೂಚಿಸಿದ ಪ್ರಾಧಿಕಾರ, ತಮಿಳುನಾಡು ವಿರೋಧದ ನಡುವೆ ಮೇಕೆದಾಟು ಯೋಜನೆ ಕುರಿತು ಚರ್ಚೆಯನ್ನು ಒಪ್ಪಿಕೊಂಡಿತು.

ಒಂದನೇ ಪುಟದಿಂದ

## ಡಾ.ಪರಮೇಶ್ವರ್ 'ಮುಖ್ಯಮಂತ್ರಿ'

ತಪ್ಪಿಸಲು ಎಐಸಿಸಿ ವರಿಷ್ಠರು ಎಚ್ಚರಿಕೆ ನೀಡಿದರೂ ಅವರ ಮಾತಿಗೆ ಬೆಲೆಯೇ ಇಲ್ಲದಂತಾಗಿದೆ. ವರಿಷ್ಠರ ಆದೇಶ ಧಿಕ್ಕರಿಸಿದ ರಾಜಣ್ಣ, ಸಾರ್ವಜನಿಕ ವೇದಿಕೆಯಲ್ಲೇ, ಗೃಹ ಸಚಿವರಾಗಿರುವ ಡಾ. ಪರಮೇಶ್ವರ್ ಮುಂದೆ ಮುಖ್ಯಮಂತ್ರಿ ಆಗಲಿದ್ದಾರೆ, ಅವರಿಗೆ ನಮ್ಮ ಬೆಂಬಲ ಎಂದಿದ್ದಾರೆ. ಸಮಾರಂಭದಲ್ಲೇ ಡಾಕ್ಟರೇ ನಿಮಗೆ ಅದೃಷ್ಟ ಇದೆ, ಮುಂದೆ ಮುಖ್ಯಮಂತ್ರಿ ಆಗುತ್ತೀರಿ, ಅವರು ಮುಖ್ಯಮಂತ್ರಿ ಆದರೆ, ನಮಗೆಲ್ಲರಿಗೂ ಸಂತಸ, ಸದ್ಯಕ್ಕೆ ಸಿದ್ದರಾಮಯ್ಯ ಮುಖ್ಯಮಂತ್ರಿ ಗಾದಿಯಲ್ಲಿ ಇರುವವರೆಗೆ ಪರಮೇಶ್ವರ್ ಸೇರಿದಂತೆ ನಾವೆಲ್ಲರೂ ಅವರ ಪರ.

ಸಿದ್ದರಾಮಯ್ಯ ಹೊರತುಪಡಿಸಿದರೆ, ಮುಖ್ಯಮಂತ್ರಿ ಸ್ಥಾನಕ್ಕೆ ಡಾ. ಪರಮೇಶ್ವರ್ ಅವರೇ ಎನ್ನುವುದರ ಮೂಲಕ ಶಿವಕುಮಾರ್ ಮುಖ್ಯಮಂತ್ರಿ ಆಗುವುದಕ್ಕೆ ಸಾರ್ವಜನಿಕವಾಗಿಯೇ ವಿರೋಧ ವ್ಯಕ್ತಪಡಿಸಿದ್ದಾರೆ. ಎಐಸಿಸಿ ನಮಗೆ ಹೇಳಿದ್ದಾರೆ, ಏನು ಮಾತನಾಡಬಾರದು ಎಂದು. ಆದರೆ ಮಾತನಾಡಿಬಿಟ್ಟಿದ್ದೇನೆ, ಅವರು ಏನಾದರೂ ಮಾಡಿಕೊಳ್ಳಲಿ ನಾನು ಅವರಿಗೂ ಹೆದರುವುದಿಲ್ಲ. ಇಂತಹ ಯಾವುದೇ ಸೂಚನೆಗಳಿಗೆ ಅಂಜುವುದಿಲ್ಲ, ಮುಂದೆ ನಾನು ಚುನಾವಣೆಗೂ ಸ್ಪರ್ಧಿಸುವುದಿಲ್ಲ ಎಂದು ಗುಡುಗಿದರು. ನಿನ್ನೆಯಷ್ಟೇ ಸಿದ್ದರಾಮಯ್ಯ, ನಾನೇ ಮುಂದಿನ ಐದು ವರ್ಷ ಕಾಲ ಮುಖ್ಯಮಂತ್ರಿ ಆಗಿರುತ್ತೇನೆ ಎಂದು ಹೇಳಿಕೆ ನೀಡಿದ ಬೆನ್ನಲ್ಲೇ ರಾಜಣ್ಣ ಈ ಬಾಂಬ್ ಸಿಡಿಸಿದ್ದಾರೆ, ಇದರ ಹಿಂದಿನ ಮರ್ಮ ತಿಳಿಯದಾಗಿದೆ.

## ಸಿಎಂ ಸಿದ್ದರಾಮಯ್ಯ ಯೂಟರ್ನ್

ಹೇಳಿದರೆ ಬದ್ಧ ಎಂದು ಹೇಳಿದ್ದೇನೆ. ನಾನು ನಿನ್ನೆ ಇದನ್ನೇ ಹೇಳಿದ್ದೇನೆ ಎಂದು ಯು ಟರ್ನ್ ತೆಗೆದುಕೊಂಡಿದ್ದಾರೆ. ಸಚಿವ ಕೆ.ಎನ್. ರಾಜಣ್ಣ ಹೇಳಿಕೆಗೆ ನಾನು ಪ್ರತಿಕ್ರಿಯೆ ನೀಡುವುದಿಲ್ಲ ಎಂದು ಮುಖ್ಯಮಂತ್ರಿಗಳು ತಿಳಿಸಿದ್ದಾರೆ. ನಾಯಕತ್ವ ಬದಲಾವಣೆ, ಸಂಪುಟ ಪುನಾರಚನೆ ವಿಚಾರವಾಗಿ ಬಹಿರಂಗವಾಗಿ ಮಾತನಾಡಿದರೆ ಶಿಸ್ತು ಕ್ರಮ ಜರುಗಿಸುವುದಾಗಿ ಕಾಂಗ್ರೆಸ್ ಹೈಕಮಾಂಡ್ ಎಚ್ಚರಿಕೆ ನೀಡಿದ ಮರುದಿನವೇ ಮುಖ್ಯಮಂತ್ರಿಗಳು, ಮುಂದಿನ ಐದು ವರ್ಷ ನಮ್ಮದೇ ಸರ್ಕಾರ. ನಾನೇ ಮುಖ್ಯಮಂತ್ರಿಯಾಗಿ ಮುಂದುವರೆಯುತ್ತೇನೆ ಎಂದು ಹೇಳುವ ಮೂಲಕ ಪಕ್ಷದೊಳಗಿನ ತಮ್ಮ ಎದುರಾಳಿಗಳಿಗೆ ಸ್ಪಷ್ಟ ಸಂದೇಶ ರವಾನಿಸಿದ್ದರು.

ಇಂದು ತಮ್ಮ ಹೇಳಿಕೆ ಬಗ್ಗೆ ಯುಟರ್ನ್ ತೆಗೆದುಕೊಂಡು ನಮ್ಮದು ಹೈಕಮಾಂಡ್ ಪಕ್ಷ, ಹೈಕಮಾಂಡ್ ಹೇಳಿದರೆ ಬದ್ಧ ಎಂದು ತಿಳಿಸಿದ್ದಾರೆ.

## ಮುಖ್ಯಮಂತ್ರಿ ಆಗುತ್ತೇನೆ...

ಕಾಂಗ್ರೆಸ್ ಸರ್ಕಾರ ಅಸ್ತಿತ್ವಕ್ಕೆ ಬಂದು ಐದು ತಿಂಗಳಾಗಿದ್ದು, ಆಗಲೇ ನಾನು ಪೂರ್ಣಾವಧಿ ಮುಖ್ಯಮಂತ್ರಿ ಎಂದು ಸಿದ್ದರಾಮಯ್ಯ ಹೇಳುತ್ತಿದ್ದರೆ, ಎರಡೂವರೆ ವರ್ಷದ ನಂತರ ಡಿ.ಕೆ.ಶಿವಕುಮಾರ್ ಸಿಎಂ ಆಗುತ್ತಾರೆ ಎಂದು ಅವರ ಬೆಂಬಲಿಗರು ಬಹಿರಂಗವಾಗಿ ಹೇಳುತ್ತಿದ್ದಾರೆ. ಇದರಿಂದ ರಾಜ್ಯ ಕಾಂಗ್ರೆಸ್ ವಲಯದಲ್ಲಿ ಗೊಂದಲಕಾರಿ ಪರಿಸ್ಥಿತಿ ಉಂಟಾಗಿದೆ. ಇದೇ ವಿಚಾರವಾಗಿ ಮತ್ತಷ್ಟು ಸ್ಪಷ್ಟನೆ ನೀಡಿದ ಪ್ರಿಯಾಂಕ್ ಖರ್ಗೆ, ನಾನೇ ಪೂರ್ಣಾವಧಿ ಸಿಎಂ ಎಂದು ಸಿದ್ದರಾಮಯ್ಯ ತಮ್ಮ ವೈಯಕ್ತಿಕ ಅಭಿಪ್ರಾಯ ತಿಳಿಸಿದ್ದಾರೆ. ಜಿಲ್ಲಾ ಪಂಚಾಯತ್ ಸದಸ್ಯರಿಂದ ಶಾಸಕರ ತನಕ ಎಲ್ಲರೂ ತಮ್ಮ ಅಭಿಪ್ರಾಯ ಹೇಳಲು ಸ್ವತಂತ್ರರಿರುತ್ತಾರೆ. ಅದು ತಪ್ಪು ಅಂತ ನಾನು ಹೇಳುವುದಿಲ್ಲ. ಹಾಗೆಂದ ಮಾತ್ರಕ್ಕೆ ಅವರ ಹೇಳಿಕೆ ಕಲ್ಲಿನಲ್ಲಿ ಕೆತ್ತಿದ ಶಾಸನವಲ್ಲ. ಅಂತಿಮವಾಗಿ ಎಲ್ಲಾ ತೀರ್ಮಾನವನ್ನು ಹೈಕಮಾಂಡ್ ಕೈಗೊಳ್ಳುತ್ತದೆ ಹೇಳಿದರು. ಮುಖ್ಯಮಂತ್ರಿ ಸ್ಥಾನದ ಅಧಿಕಾರ ಹಂಚಿಕೆಯ ತೀರ್ಮಾನವಾಗಿದೆಯೇ ಎಂಬ ಪ್ರಶ್ನೆಗೆ ಪ್ರತಿಕ್ರಿಯೆ ನೀಡಿದ ಪ್ರಿಯಾಂಕ್ ಖರ್ಗೆ, ಈ ವಿಷಯದ ಬಗ್ಗೆ ದೆಹಲಿಯಲ್ಲಿ ನಾಲ್ಕು ಜನರು ಕುಳಿತು ಮಾತನಾಡಿದ್ದಾರೆ. ಅವರಿಗೆ ಮಾತ್ರ ಈ ವಿಚಾರದ ಬಗ್ಗೆ ಸ್ಪಷ್ಟತೆ ಇದೆ ಎಂದು ತಿಳಿಸಿದರು.

**ದೆಹಲಿಯಲ್ಲಿ ಘರ್ಜಿಸಲಿ:** ಕರ್ನಾಟಕದಲ್ಲಿ ವಿರೋಧ ಪಕ್ಷ ಎಲ್ಲಿದೆ. ಬಿಜೆಪಿ ಲೀಡರ್ ಲೆಸ್ ಆದರೆ, ಜೆಡಿಎಸ್ ಪೀಪಲ್ ಲೆಸ್ ಪಾರ್ಟಿಯಾಗಿದೆ. ಬಿಜೆಪಿ ನಾಯಕರಿಗೆ ಧ್ವನಿಯೇ ಇಲ್ಲದಂತಾಗಿದೆ. ಕಾಂಗ್ರೆಸ್ ನಾಯಕರ ವಿರುದ್ಧ ಘರ್ಜನೆ ಮಾಡುವ ಬದಲು ದೆಹಲಿಯಲ್ಲಿ ಹೋಗಿ ಕೇಂದ್ರ ನಾಯಕರ ವಿರುದ್ಧ ಘರ್ಜಿಸಲಿ ಎಂದು ತಿರುಗೇಟು ನೀಡಿದರು. ವಿಧಾನಸಭೆ ಹಾಗೂ ವಿಧಾನ ಪರಿಷತ್‌ನಲ್ಲಿ ಬಿಜೆಪಿಗೆ ವಿರೋಧ ಪಕ್ಷದ ನಾಯಕರಿಲ್ಲ. ರಾಜ್ಯ ಬಿಜೆಪಿ ನಾಯಕರನ್ನು ಅವರ ಹೈಕಮಾಂಡ್ ಲೆಕ್ಕಕ್ಕೆ ಇಟ್ಟಿಲ್ಲ. ಸದಾನಂದಗೌಡರು ದೆಹಲಿಗೆ ಹೋಗಿ ಹೈಕಮಾಂಡ್ ಮನೆ ಬಾಗಿಲು ಕಾದಿದ್ದಾರೆ. ಆದರೂ ಬಾಗಿಲು ತೆಗೆಯದೆ ವಾಪಾಸು ಕಳುಹಿಸಿದ್ದಾರೆ. ಮಾಜಿ ಮುಖ್ಯಮಂತ್ರಿಗೆ ಈ ಗತಿಯಾದರೆ, ಇನ್ನು ಬಿಜೆಪಿ ಸಂಸದರ ಪಾಡೇನು ಎಂದು ಪ್ರಶ್ನಿಸಿದ ಪ್ರಿಯಾಂಕ್ ಖರ್ಗೆ, ಇದನ್ನೆಲ್ಲಾ ಮೊದಲು ಸರಿಮಾಡಿಕೊಳ್ಳಿ. ಅದು ಬಿಟ್ಟು ನಮ್ಮ ಕಾಂಗ್ರೆಸ್ ಪಕ್ಷದ ಚಿಂತೆ ನಿಮಗೇಕೆ ಎಂದು ಬಿಜೆಪಿ ನಾಯಕರಿಗೆ ಟಾಂಗ್ ಕೊಟ್ಟರು. ಬರ ಅಧ್ಯಯನ ಮಾಡುತ್ತೇವೆ ಎಂದು ಬಿಜೆಪಿಯವರು ಹೇಳುತ್ತಾರೆ. ಮೊದಲು ರಾಜ್ಯಕ್ಕೆ ನೀಡಬೇಕಿರುವ 17 ಸಾವಿರ ಕೋಟಿ ರೂಪಾಯಿ ಬರ ಪರಿಹಾರದ ಹಣ ನೀಡಲಿ, ಆಮೇಲೆ ಬರ ಅಧ್ಯಯನ ಮಾಡಲಿ ಎಂದು ಸಲಹೆ ನೀಡಿದ ಪ್ರಿಯಾಂಕ್ ಖರ್ಗೆ, ಡಬ್ಬಲ್ ಇಂಜಿನ್ ಸರ್ಕಾರ ಅಂತ ಹೇಳುತ್ತಿದ್ದರು, ಆದರೆ ಈಗ ಅದು ಸಿಂಗಲ್ ಇಂಜಿನ್ ಸರ್ಕಾರವಾಗಿದೆ ಎಂದು ಗೇಲಿ ಮಾಡಿದರು.

### ಸಿಎಂ ಆಗಲು ಆಸೆ ಇರಬೇಕು, ದುರಾಸೆ ಇರಬಾರದು

ಮುಖ್ಯಮಂತ್ರಿ ಆಗಬೇಕೆಂದು ಎಲ್ಲರಿಗೂ ಆಸೆ ಇರುತ್ತದೆ, ಆದರೆ ದುರಾಸೆ ಇರಬಾರದು ಎಂದು ಪ್ರಿಯಾಂಕ್ ಖರ್ಗೆ ಸಿಎಂ ಆಕಾಂಕ್ಷಿಗಳಿಗೆ ಟಾಂಗ್ ನೀಡಿದ್ದಾರೆ.

ನಾನು ಪೂರ್ಣಾವಧಿ ಮುಖ್ಯಮಂತ್ರಿ ಎಂದು ಸಿದ್ದರಾಮಯ್ಯ ಹೇಳಿದ್ದಾರೆ. ಆದರೆ ಡಿ.ಕೆ.ಶಿವಕುಮಾರ್ ಅವರು ಕೂಡ ಸಿಎಂ ಆಗುವ ಆಸೆ ಇಟ್ಟುಕೊಂಡಿದ್ದಾರಲ್ಲ ಎಂಬ ಪ್ರಶ್ನೆಗೆ ಸ್ಪಷ್ಟನೆ ನೀಡಿದ ಪ್ರಿಯಾಂಕ್ ಖರ್ಗೆ, ಎಲ್ಲರಿಗೂ ಆಸೆ ಇರುತ್ತದೆ. ಆದರೆ ದುರಾಸೆ ಇರಬಾರದು ಎಂದು ಹೇಳಿದರು.

ಈ ಮಾತನ್ನು ಯಾರ ಉದ್ದೇಶಿಸಿ ಹೇಳಿದರು ಎಂಬುದು ಈಗ ತೀವ್ರ ಕುತೂಹಲ ಮೂಡಿಸಿದೆ. ಒಟ್ಟಾರೆ ನಾನೇ ಐದು ವರ್ಷ ಸಿಎಂ ಎಂಬ ಸಿದ್ದರಾಮಯ್ಯ ಹೇಳಿಕೆ, ರಾಜ್ಯ ಕಾಂಗ್ರೆಸ್‌ನಲ್ಲಿ ತಲ್ಲಣ ಉಂಟು ಮಾಡಿದೆ.

## ಸಿಎಂ ಆಯ್ಕೆ ಪ್ರಜಾಪ್ರಭುತ್ವದ ಅಣಕ


ಅಭಿಮಾನಿಗಳಿಂದ ಅಭಿನಂದನೆ ಸ್ವೀಕರಿಸಿ ಮಾತನಾಡಿದ ಅವರು, ಪ್ರಸ್ತುತ ರಾಜ್ಯದಲ್ಲಿ ಮುಖ್ಯಮಂತ್ರಿ ಬದಲಾವಣೆ ವಿಚಾರ, ಈ ಜಾತಿಯವರು ಮುಖ್ಯಮಂತ್ರಿಗಳಾಗಬೇಕೆಂಬ ಶಾಸಕರುಗಳ ಅಭಿಪ್ರಾಯದ ಬಗ್ಗೆ ಪ್ರತಿಕ್ರಿಯಿಸಿ, ಜಾತಿ ಆಧಾರದ ಮೇಲೆ ಸಿಎಂ ಆಯ್ಕೆ ಮಾಡಬಾರದು. ರಾಜಕೀಯ ತನ್ನದೇ ಆದ ಕಾಲಘಟ್ಟದಲ್ಲಿ ಒಂದೊಂದು ತಿರುವುಗಳನ್ನು ಪಡೆದುಕೊಳ್ಳುತ್ತದೆ. ಭ್ರಷ್ಟಾಚಾರ ಪ್ರಜಾಪ್ರಭುತ್ವದ ಭವಿಷ್ಯಕ್ಕೆ ಮಾರಕ ಎಂದು ಆತಂಕ ವ್ಯಕ್ತಪಡಿಸಿದರು. ನಾನೇ 5 ವರ್ಷಗಳ ಕಾಲ ಮುಖ್ಯಮಂತ್ರಿಯಾಗುತ್ತೇನೆ ಎಂಬ ಕಾಲಘಟ್ಟಕ್ಕೆ ತಲುಪುವುದು ಅನಾರೋಗ್ಯಕರ. ಈಗ ಈ ಪ್ರಶ್ನೆ ಉದ್ಭವಿಸಬೇಕಾಗಿರಲಿಲ್ಲ. ಇತಿ ಮಿತಿ ಗಮನದಲ್ಲಿಟ್ಟುಕೊಂಡು ಮುಂದುವರೆದರೆ ಈ ದ್ವಂದ್ವಕ್ಕೆ ಪರಿಹಾರ ಸಿಗಬಹುದು ಎಂದು ಪರೋಕ್ಷವಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ನಾನೇ ಐದು ವರ್ಷ ಸಿಎಂ ಎಂಬ ಹೇಳಿಕೆಗೆ ತಿರುಗೇಟು ನೀಡಿ ತಮ್ಮ ಶಿಷ್ಯ ಡಿ.ಕೆ.ಶಿವಕುಮಾರ್ ಪರ ಬ್ಯಾಟ್ ಬೀಸಿದರು.

**ನಮ್ಮ ಕುಟುಂಬದಿಂದ ಯಾರೂ ಸ್ಪರ್ಧಿಸಲ್ಲ:** ಮುಂದಿನ ಲೋಕಸಭಾ ಚುನಾವಣೆಯಲ್ಲಿ ತಮ್ಮ ಕುಟುಂಬದಿಂದ ಯಾರೂ ಸ್ಪರ್ಧಿಸುವುದಿಲ್ಲ. ನನ್ನ ಮಕ್ಕಳು ಅವರದೇ ಆದ ವೃತ್ತಿಯಲ್ಲಿ ತೊಡಗಿಕೊಂಡಿದ್ದಾರೆ. ಅವರನ್ನು ನಾನು ಬಲವಂತವಾಗಿ ರಾಜಕೀಯಕ್ಕೆ ಧುಮುಕಿ ಅಂತ ಹೇಳುವುದು ಸರಿಯಲ್ಲ. ರಾಜಕೀಯಕ್ಕೆ ಬರುವ ಇಚ್ಛಾಶಕ್ತಿ ಅವರಲ್ಲೇ ಹುಟ್ಟಬೇಕು. ಈಗಾಗಲೇ ನಾನು ರಾಜಕೀಯದಿಂದ ಸಂಪೂರ್ಣವಾಗಿ ನಿವೃತ್ತಿಯಾಗಿರುವುದರಿಂದ ಯಾವುದೇ ಪಕ್ಷದ ಚುನಾವಣಾ ಪ್ರಚಾರಗಳಲ್ಲಿ ನಾನು ಭಾಗಿಯಾಗಲ್ಲ. ಆ ಬಗ್ಗೆ ನನಗೆ ಆಸಕ್ತಿಯೂ ಇಲ್ಲ ಎಂದು ಸ್ಪಷ್ಟಪಡಿಸಿದರು.

**ರೈತ ಮುಖಂಡರಿಂದ ಪರಿಹಾರ:** ಕಾವೇರಿ ನದಿ ನೀರಿನ ಸಮಸ್ಯೆ ಬಗೆಹರಿಯಬೇಕಾದರೆ 4 ರಾಜ್ಯಗಳ ರೈತ ಮುಖಂಡರು ಒಟ್ಟಿಗೆ ಸಭೆ ಸೇರಿ ಚರ್ಚಿಸಿದಾಗ ಮಾತ್ರ ಈ ಸಮಸ್ಯೆಗೆ ಪರಿಹಾರ ದೊರಕಬಹುದು. ಪ್ರಸ್ತುತ ರಾಜ್ಯ ಸರ್ಕಾರ ಅನಿವಾರ್ಯ ಹಾಗೂ ವಿಧಿ ಇಲ್ಲದೆ ತಮಿಳುನಾಡಿಗೆ ನೀರು ಬಿಡಬೇಕಾದ ಆದೇಶವನ್ನು ಅನುಸರಿಸಬೇಕಿದೆ ಎಂದರು. ರಾಜಕೀಯದಿಂದ ನಿವೃತ್ತಿಯಾದ ನಂತರ ನನ್ನ ಮನಸ್ಸು ನಿರಾಳವಾಗಿದೆ. ಯಾವುದೇ ರೀತಿಯ ಒತ್ತಡಗಳಿಲ್ಲ. ಪತ್ರಿಕೆ, ಪುಸ್ತಕ ಓದುವುದು ಮತ್ತು ದೃಶ್ಯ ಮಾಧ್ಯಮಗಳಲ್ಲಿ ಬರುವ ಸುದ್ದಿ ಸ್ವಾರಸ್ಯಗಳನ್ನು ನೋಡುವ ಮೂಲಕ ರಾಜಕೀಯ ಜಂಜಾಟದಿಂದ ದೂರವಿದ್ದೇನೆ ಎಂದರು. ಡಿಸಿಸಿ ಬ್ಯಾಂಕ್ ಅಧ್ಯಕ್ಷ ಕೆ.ಸಿ.ಜೋಗಿಗೌಡ, ತಾಪಂ ಮಾಜಿ ಅಧ್ಯಕ್ಷ ಸಿ.ನಾಗೇಗೌಡ, ಮಾಜಿ ಸದಸ್ಯ ಕೆ.ಆರ್.ಮಹೇಶ್, ಮುಖಂಡರಾದ ವಿಜಯ್, ಶಿವಲಿಂಗಯ್ಯ, ನಾಗರಾಜು, ತಮ್ಮಣ್ಣ ಇದ್ದರು.

## ಮೈಸೂರಿನ ರಮಾಬಾಯಿ ನಗರದಲ್ಲಿ ಚಿರತೆ ಪ್ರತ್ಯಕ್ಷ

### ಕೂಂಬಿಂಗ್ ನಡೆಸಿದ ಅರಣ್ಯ ಸಿಬ್ಬಂದಿ



ಮೈಸೂರು, ನ3(ಎಂಟಿವೈ)– ಮೈಸೂರಿನ ರಮಾಬಾಯಿ ನಗರದಲ್ಲಿ ಚಿರತೆ ಕಾಣಿಸಿಕೊಂಡಿರುವ ದೂರು ಕೇಳಿ ಬಂದ ಹಿನ್ನೆಲೆಯಲ್ಲಿ ಚಿರತೆ ಟಾಸ್ಕ್‌ಫೋರ್ಸ್ ತಂಡ ಹಾಗೂ ಅರಣ್ಯ ಸಿಬ್ಬಂದಿ ಕೂಂಬಿಂಗ್ ನಡೆಸಿ ಚಿರತೆಗಾಗಿ ಶೋಧ ನಡೆಸಿದರು.

ಮೈಸೂರಿನ ರಮಾಬಾಯಿನಗರದಲ್ಲಿ ಸಂಜೆ ವೇಳೆ ಜನ ವಸತಿ ಪ್ರದೇಶದಲ್ಲಿ ಚಿರತೆಯೊಂದು ಓಡಾಡುತ್ತಿರುವುದನ್ನು ಸ್ಥಳೀಯರು ಗಮನಿಸಿದ್ದಾರೆ. ಕೂಡಲೆ ಅರಣ್ಯ ಇಲಾಖೆ ಸಿಬ್ಬಂದಿಗಳ ಗಮನಕ್ಕೆ ತಂದಿದ್ದಾರೆ. ಸ್ಥಳೀಯರು ನೀಡಿದ ದೂರನ್ನು ಗಂಭೀರವಾಗಿ ಪರಿಗಣಿಸಿದ ಅರಣ್ಯ ಇಲಾಖೆ ಚಿರತೆ ಸೆರೆ ಕ್ಷಿಪ್ರ ಕಾರ್ಯಪಡೆ(ಲೆಪರ್ಡ್ ಟಾಸ್ಕ್‌ಫೋರ್ಸ್) ತಂಡ ಹಾಗೂ ಅರಣ್ಯ ಸಿಬ್ಬಂದಿಗಳನ್ನು ಸ್ಥಳಕ್ಕೆ ಕಳುಹಿಸಿದ್ದಾರೆ.

ಸ್ಥಳೀಯರು ಚಿರತೆ ಕಂಡ ಸ್ಥಳ ಪರಿಶೀಲಿಸಿದ ನಂತರ ಚಿರತೆ ಸೆರೆಗಾಗಿ ಕೂಂಬಿಂಗ್ ಕಾರ್ಯಾಚರಣೆ ನಡೆಸಿದರು. ರಮಾಬಾಯಿನಗರದ ವಿವಿಧೆಡೆ ಶೋಧ ಕಾರ್ಯ ನಡೆಸಿದರೂ ಚಿರತೆ ಸುಳಿವು ಸಿಗಲಿಲ್ಲ. ಅಲ್ಲದೆ, ರಾತ್ರಿ ವೇಳೆ ಇಬ್ಬರು ಸಿಬ್ಬಂದಿಯನ್ನು ರಮಾಬಾಯಿನಗರದಲ್ಲಿ ನಿಯೋಜಿಸಲಾಗಿತ್ತು ಆದರೂ ಚಿರತೆ ಯಾರ ಕಣ್ಣಿಗೂ ಬಿದ್ದಿಲ್ಲ.

ಇಂದು ಬೆಳಗ್ಗಿನಿಂದಲೇ ರಮಾಬಾಯಿ ನಗರದ ವಿವಿಧೆಡೆ ಪರಿಶೀಲನೆ ನಡೆಸಿದ ಅರಣ್ಯ ಸಿಬ್ಬಂದಿಗಳ ತಂಡ ವಿವಿಧ ಮನೆ ಹಾಗೂ ಅಂಗಡಿಗಳ ಮುಂದೆ ಅಳವಡಿಸಿರುವ ಸಿಸಿ ಕ್ಯಾಮರಾದಲ್ಲಿ ಚಿರತೆ ದೃಶ್ಯ ಸೆರೆಯಾಗಿರುವ ಬಗ್ಗೆ ಪರಿಶೀಲನೆ ನಡೆಸಿದ್ದಾರೆ. ಎಲ್ಲಿಯೂ ಚಿರತೆ ಓಡಾಡಿರುವ ದೃಶ್ಯ ಕಂಡು ಬರದೇ ಇರುವುದರಿಂದ ಕೂಂಬಿಂಗ್ ಕಾರ್ಯಾಚರಣೆ ನಿಲ್ಲಿಸಿ, ಬೀಟ್ ಮುಂದುವರೆಸಿದ್ದಾರೆ. ಅಲ್ಲದೆ, ಮತ್ತೆ ಚಿರತೆ ಕಾಣಿಸಿಕೊಂಡರೆ ಅರಣ್ಯ ಇಲಾಖೆಗೆ ಮಾಹಿತಿ ನೀಡುವಂತೆ ಸ್ಥಳೀಯರಲ್ಲಿ ಮನವಿ ಮಾಡಿದ್ದಾರೆ. ಸಂಜೆ ಹಾಗೂ ಮುಂಜಾನೆ ಓಡಾಡುವಾಗ ಕಟ್ಟೆಚ್ಚರದಿಂದ ಇರುವಂತೆ ಸಲಹೆ ನೀಡಿದ್ದಾರೆ.



ಮೈಸೂರು ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್ ಪಡೆದ 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಡಾ. ಕೆ.ಬಿ.ಗಣಪತಿ ಅವರನ್ನು ಅಂಕಣಕಾರ ವಿ.ರಂಗನಾಥ್ ಹಾಗೂ ನಂ.ಶ್ರೀಕಂಠಕುಮಾರ್ ಆತ್ಮೀಯವಾಗಿ ಅಭಿನಂದಿಸಿದರು.

## ಹಳೆ ಪಿಂಚಣಿ ಯೋಜನೆ ಜಾರಿಗೆ ಮಾಜಿ ಎಂಎಲ್‌ಸಿ ಕೆ.ಟಿ.ಶ್ರೀಕಂಠೇಗೌಡ ಆಗ್ರಹ



ಮೈಸೂರು, ನ3(ಜಿಎ)–ನೂತನ ಪಿಂಚಣಿ ಯೋಜನೆ(ಎನ್.ಪಿ.ಎಸ್) ರದ್ದುಗೊಳಿಸಿ ಹಳೆ ಪಿಂಚಣಿ ಯೋಜನೆ ಜಾರಿಗೊಳಿಸುವುದಾಗಿ ಪ್ರಣಾಳಿಕೆಯಲ್ಲಿ ನೀಡಿದ್ದ ಭರವಸೆಯನ್ನು ಸಿಎಂ ಸಿದ್ದರಾಮಯ್ಯ ಈಡೇರಿಸಬೇಕೆಂದು ವಿಧಾನ ಪರಿಷತ್ ಮಾಜಿ ಸದಸ್ಯ ಕೆ.ಟಿ ಶ್ರೀಕಂಠೇಗೌಡ ಒತ್ತಾಯಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅನುದಾನಿತ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರರಿಗೆ ನೂತನ ಪಿಂಚಣಿ ಯೋಜನೆ(ಎನ್.ಪಿ.ಎಸ್) ಯಾಗಲೀ ಅಥವಾ ಹಳೆ ಪಿಂಚಣಿ ಯೋಜನೆ(ಓ.ಪಿ.ಎಸ್)ಯಾಗಲೀ ಇಲ್ಲ. ಅವರ ಸಂಧ್ಯಾ ಕಾಲದ ಬದುಕು ಅತಂತ್ರ ಸ್ಥಿತಿಯಲ್ಲಿದೆ. ಆದ್ದರಿಂದ ಅವರಿಗೂ ಕೂಡಲೇ ಪಿಂಚಣಿ ಸೌಲಭ್ಯ ಜಾರುಗೊಳಿಸಬೇಕು. ಚುನಾವಣೆಗೂ ಮುನ್ನ ಕಾಂಗ್ರೆಸ್ ತಮ್ಮ ಪ್ರಣಾಳಿಕೆಯಲ್ಲಿ ಹಳೆ ಪಿಂಚಣಿ ಯೋಜನೆ ಜಾರಿಗೊಳಿಸುವುದಾಗಿ ಭರವಸೆ ನೀಡಿತ್ತು. ಅದನ್ನು ಈಡೇರಿಸಬೇಕೆಂದು ಆಗ್ರಹಿಸಿದರು.

ಶಾಲಾ ಶಿಕ್ಷಣ ಇಲಾಖೆಯಡಿ ಬರುವ ಪದವಿ ಪೂರ್ವ ಮತ್ತು ಪ್ರೌಢ ಶಿಕ್ಷಣ ಇಲಾಖೆಯಲ್ಲಿ ಜಾರಿಗೊಳಸಿರುವ ನೂತನ ಪರೀಕ್ಷಾ ಪದ್ಧತಿ ಪ್ರಕಾರ ಮೂರು ಮುಖ್ಯ ಪರೀಕ್ಷೆಗಳನ್ನು ನಡೆಸಬೇಕಾಗಿದೆ. ಇದರಿಂದ ಪ್ರತಿ ಪರೀಕ್ಷೆಗೆ ಕನಿಷ್ಠ ಮೂವತ್ತು ದಿನಗಳ ಅವಶ್ಯತಕೆಯಿದೆ, ಒಟ್ಟಾರೆ 90 ದಿನಗಳು ಮೂರು ಪರೀಕ್ಷೆಯಿಂದ ಬೇಕಾಗಿದೆ. ಇದು ಉಪನ್ಯಾಸಕರುಗಳಿಗೆ ಮತ್ತು ಶಿಕ್ಷಕರುಗಳಿಗೆ ರಜೆ ಸೌಲಭ್ಯ ದೊರೆಯಂತಾಗಿದೆ. ತಕ್ಷಣ ಈ ಇಲಾಖೆಗಳನ್ನು ರಜಾ ರಹಿತ ಇಲಾಖೆಗಳೆಂದು ಘೋಷಣೆ ಮಾಡಿ ರಜಾ ರಹಿತ ನೌಕರರುಗಳಿಗೆ ನೀಡುತ್ತಿರುವ ಸೌಲಭ್ಯಗಳು ದೊರೆಯುವಂತೆ ಆದೇಶ ಮಾಡಬೇಕಾಗಿದೆ ಎಂದು ಒತ್ತಾಯಿಸಿದರು.

ಶಾಲಾ ಶಿಕ್ಷಣ ಇಲಾಖೆ(ಪದವಿ ಪೂರ್ವ)ಯ ಜಿಲ್ಲಾ ಉಪ ನಿರ್ದೇಶಕರ ಕಛೇರಿಯ ದಿನ ನಿತ್ಯದ ವ್ಯವಹಾರವನ್ನು ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಯ ಉಸ್ತುವಾರಿಗೆ ವಹಿಸಿ ನೀಡಿರುವ ಆದೇಶವನ್ನು ಹಿಂಪಡೆಯಬೇಕು. ಈ ಹಿಂದೆ ಯಾವ ರೀತಿ ವ್ಯವಸ್ಥೆ ಜಾರಿಯಲ್ಲಿತ್ತು ಅದನ್ನೇ ಮುಂದುವರೆಸಬೇಕು. ತಪ್ಪಿದ್ದಲ್ಲಿ ಮುಂದೆ ಕರ್ನಾಟಕ ರಾಜ್ಯ ಪ್ರಾಂಶುಪಾಲರ ಸಂಘ ಮತ್ತು ಉಪನ್ಯಾಸಕರ ಸಂಘ ಜಂಟಿಯಾಗಿ ಹೋರಾಟ ಮಾಡುವುದು ಅನಿವಾರ್ಯವಾಗಿದೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಎಂ.ಎಂ. ಮಹಾದೇವ್, ಉಮೇಶ್, ಹೊಂಗಯ್ಯ, ಪುಟ್ಟೇಗೌಡ ಉಪಸ್ಥಿತರಿದ್ದರು.


## ನ.9, ಭಾರತೀಯ 'ಭಾರತೀಯ ಚತುಷ್ಷಷ್ಟಿ ಕಲೆಗಳು' ರಾಷ್ಟ್ರೀಯ ವಿಚಾರ ಸಂಕಿರಣ



ಮೈಸೂರು, ನ.3(ಜಿಎ) –ಸಂಸ್ಕೃತಿ ಪ್ರತಿಷ್ಠಾನದ ವತಿಯಿಂದ ನ.9 ಮತ್ತು 10ರಂದು ಬೆಂಗಳೂರಿನ ರಾಜಾಜಿ ನಗರದ ಇಸ್ಕಾನ್ ಸಂಸ್ಥೆಯ ಮಲ್ಟಿ–ವಿಝನ್ –ಥಿಯೇಟರ್ ಸಭಾಂಗಣದಲ್ಲಿ 'ಭಾರತೀಯ ಚತುಷ್ಷಷ್ಟಿ ಕಲೆಗಳು' ಎಂಬ ವಿಷಯದ ಬಗ್ಗೆ ರಾಷ್ಟ್ರೀಯ ವಿಚಾರ ಸಂಕಿರಣ ಆಯೋಜಿಸಲಾಗಿದೆ ಎಂದು ಸಂಸ್ಥೆಯ ಟ್ರಸ್ಟಿ ಎಂ.ಎ. ಆಳ್ವಾರ್ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ವಿಚಾರಸಂಕಿರಣದಲ್ಲಿ ಭಾರತದಾದ್ಯಂತದ ನುರಿತ ಕಲಾವಿದರು, ತಜ್ಞರು ಹಾಗೂ ವಿದ್ವಾಂಸರು ಭಾಗವಹಿಸಿ ಅವರವರ ಉನ್ನತಸ್ತರದ ವಿಚಾರ–ಕೈಚಳಕಗಳನ್ನು ಪ್ರಸ್ತುತ ಪಡಿಸಲಿದ್ದಾರೆ. ಇದುವರೆಗೆ ಯಾವುದೇ ಸಂಸ್ಥೆಯು, ನಮ್ಮ ಪಾರಂಪರಿಕ ಸ್ವತ್ತಾಗಿರುವ 64 ಕಲೆಗಳ ಬಗ್ಗೆ ಯಾವುದೇ ಕಾರ್ಯಕ್ರಮವನ್ನು ಹಮ್ಮಿಕೊಂಡಿರುವುದಿಲ್ಲ. ಸಂಸ್ಕೃತಿ ಪ್ರತಿಷ್ಠಾನವು ಇದೇ ಮೊದಲ ಬಾರಿಗೆ ಇಂತಹ ಒಂದು ಕಾರ್ಯಕ್ರಮವನ್ನು ಆಯೋಜಿಸಿದ್ದು, ಈ ಕಾರ್ಯಕ್ರಮವನ್ನು ಕರ್ನಾಟಕ ರಾಜ್ಯಪಾಲರು ಉದ್ಘಾಟಿಸಲಿದ್ದು, ಕೇಂದ್ರ ಸರ್ಕಾರದ ಹಾಗೂ ರಾಜ್ಯ ಸರ್ಕಾರದ ಸಚಿವರು ಉದ್ಘಾಟನಾ ಸಮಾರಂಭದಲ್ಲಿ ಹಾಗೂ ಸಮಾರೋಪ ಸಮಾರಂಭದಲ್ಲಿ ಭಾಗವಹಿಸಲಿದ್ದಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ಸಂಸ್ಕೃತ ವಿದ್ವಾಂಸ ಡಾ.ಎಚ್.ವಿ. ನಾಗರಾಜ ರಾವ್, ಸಂಸ್ಕೃತ ಪಾಠ ಶಾಲೆ ಪ್ರಾಂಶುಪಾಲ ಡಾ.ಪಿ. ಸತ್ಯನಾರಾಯಣ ಉಪಸ್ಥಿತರಿದ್ದರು.

## ಎಂ.ಕಾಂ. ಪದವಿಯಲ್ಲಿ ಚಿನ್ನದ ಪದಕ



ಮೈಸೂರು, ನ.3–ಮೈಸೂರಿನ ಟೆರೇಷಿಯನ್ ಕಾಲೇಜಿನ ಎಂ.ಕಾಂ. ವಿದ್ಯಾರ್ಥಿ ಹೆಚ್.ಆರ್.ಅಕ್ಷತಾ ಅವರು ಮೈಸೂರು ವಿವಿ ಸ್ನಾತಕೋತ್ತರ ಪದವಿಯಲ್ಲಿ ಹಣಕಾಸು ಮತ್ತು ನಿರ್ವಹಣೆ ವಿಷಯದಲ್ಲಿ ಚಿನ್ನದ ಪದಕ ಪಡೆದಿದ್ದಾರೆ. ಇತ್ತೀಚೆಗೆ ಟೆರೇಷಿಯನ್ ಕಾಲೇಜಿನ ಮರಿಯಾ ಗೋಲ್ಡನ್ ಜ್ಯುಬಿಲಿ ಆಡಿಟೋರಿಯಂನಲ್ಲಿ ನಡೆದ ಕಾರ್ಯಕ್ರಮದಲ್ಲಿ ಇವರಿಗೆ ಪದಕ ಪ್ರದಾನ ಮಾಡಲಾಯಿತು. ಈಕೆ ಸಾಲಿಗ್ರಾಮ ತಾಲೂಕಿನ ಹಳಿಯೂರು ಗ್ರಾಮದ ರಾಜ್‌ಕುಮಾರ್ ಮತ್ತು ಕುಸುಮಾ ದಂಪತಿ ಪುತ್ರಿ.

## ರೈಲ್ವೆ, ಇಂಧನ ಇಲಾಖೆ ಖಾಸಗೀಕರಣ ವಿರುದ್ಧ ಪ್ರತಿಭಟನೆ




ಮೈಸೂರುನ3(ಎಂಟಿವೈ)– ರೈಲ್ವೆ ಹಾಗೂ ಇಂಧನ ಇಲಾಖೆ ಖಾಸಗೀಕರಣ ಮಾಡುವ ಹುನ್ನಾರದಿಂದ ಹಿಂದೆ ಸರಿಯುವಂತೆ ಆಗ್ರಹಿಸಿ, ಮೈಸೂರಲ್ಲಿ ವಿದ್ಯುತ್ ಮತ್ತು ರೈಲ್ವೆ ಖಾಸಗೀಕರಣ ವಿರೋಧಿ ಹೋರಾಟ ಸಮಿತಿ ಸದಸ್ಯರು ಪ್ರತಿಭಟನೆ ನಡೆಸಿದರು.

ಮೈಸೂರಿನ ಪುರಭವನದ ಆವರಣದಲ್ಲಿರುವ ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆ ಮುಂಭಾದ ಇಂದು ಬೆಳಗ್ಗೆ ಖಾಸಗೀಕರಣ ವಿರೋಧಿ ಹೋರಾಟ ಸಮಿತಿ ಸದಸ್ಯರು ವಿವಿಧ ಕಾರ್ಮಿಕ ಸಂಘಟನೆಗಳ ಮುಖಂಡರೊಂದಿಗೆ ಸೇರಿ ಪ್ರತಿಭಟನೆ ನಡೆಸಿದರು. ಕೇಂದ್ರದಲ್ಲಿ ಅಧಿಕಾರದಲ್ಲಿರುವ ಮೋದಿ ನೇತೃತ್ವದ ಸರ್ಕಾರ ಕಾರ್ಪೊರೇಟ್ ಕಂಪನಿಗಳ ಹಿತ ಕಾಪಾಡುತ್ತಿದೆ. ಅಲ್ಲದೆ, ಬಂಡವಾಳಶಾಹಿ ಪರ ನಿಲುವು ತಾಳಿ ನವ ಉದಾರವಾದ ನೀತಿಗಳನ್ನು ಆಕ್ರಮಣಕಾರಿಯಾಗಿ ಜಾರಿಗೆ ತರುತ್ತಿರುವುದರಿಂದ ದೇಶದ ದುಡಿಯುವ ಜನತೆ ಸಂಕಷ್ಟಕ್ಕೆ ತುತ್ತಾಗಿದ್ದಾರೆ. ಕೇಂದ್ರ ಸರ್ಕಾರದ ತಪ್ಪು ನೀತಿಗಳಿಂದ ರೈತರು ಸಾಲಭಾದೆಗೆ ಸಿಲುಕಿ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಬೆಳೆದ ಬೆಳೆಗಳಿಗೆ ಸೂಕ್ತ ವೈಜ್ಞಾನಿಕ ಬೆಲೆ ದೊರಕದೆ ಕೃಷಿ ತೊರೆಯುವವರ ಸಂಖ್ಯೆ ಹೆಚ್ಚಾಗುತ್ತಿದೆ. ರಾಷ್ಟ್ರೀಯ ನಗದೀಕರಣ, ಪೈಪ್‌ಲೈನ್ ಯೋಜನೆಯಡಿ ಸಾರ್ವಜನಿಕ ಉದ್ದಿಮೆಗಳನ್ನು ಖಾಸಗೀಕರಣ ಮಾಡಲು ಮುಂದಾಗಿದೆ. ರೈತರ, ಜನತೆಯ ತೀವ್ರ ವಿರೋಧ ಕಡೆಗಣಿಸಿ ಕಾರ್ಪೊರೇಟ್ ಬಂಡವಾಳಗಾರರ ಅನುಕೂಲಕ್ಕಾಗಿ ವಿದ್ಯುತ್ ಕ್ಷೇತ್ರವನ್ನು ಖಾಸಗೀಕರಣ ಮಾಡಲು ಲೋಕಸಭೆಯಲ್ಲಿ ಬಿಲ್ ಮಂಡಿಸಿ ಅಂಗೀಕರಿಸಿದೆ. ದೇಶದ ಬಹುಸಂಖ್ಯಾತರ ಆರ್ಥಿಕ, ಸಾಮಾಜಿಕ ಜೀವನದ ಅವಿಭಾಜ್ಯ ಅಂಗ, ದೇಶದ ಆರ್ಥಿಕತೆಯ ಬೆನ್ನೆಲುಬಾಗಿರುವ ರೈಲ್ವೆಯನ್ನು ಖಾಸಗೀಕರಣ ಮಾಡಲು ನಿರ್ಧರಿಸಿರುವುದು ಖಂಡನೀಯ ಎಂದು ಕಿಡಿಕಾರಿದರು.

ಕೇಂದ್ರ ಸರ್ಕಾರ ಕೂಡಲೇ ವಿದ್ಯುತ್ ತಿದ್ದುಪಡಿ ಮಸೂದೆ 2022ನ್ನು ವಾಪಸ್ ಪಡೆಯಬೇಕು. ವಿದ್ಯುತ್ ಉತ್ಪಾದನೆಯಲ್ಲಿ ಸಾರ್ವಜನಿಕ ಹೂಡಿಕೆ ಹೆಚ್ಚಿಸಿ, ಖಾಸಗಿ ಉತ್ಪಾದಕರನ್ನು ನಿಯಂತ್ರಿಸಬೇಕು. ಕಾರ್ಪೊರೇಟ್ ಬಂಡವಾಳಗಾರರಿಗೆ ಉದ್ದಿಮೆ ನಡೆಸಲು ನೀಡುವ ರಿಯಾಯಿತಿ ನಿಲ್ಲಿಸಬೇಕು. ಸಂಪನ್ಮೂಲಗಳ ಕ್ರೋಢೀಕರಣ ಮಾಡಬೇಕು. ದೇಶದ ಜನರ ಬೃಹತ್ ಸಾರಿಗೆಯಾದ ರೈಲ್ವೆಯನ್ನು ಸರ್ಕಾರದ ಅಧೀನದಲ್ಲಿಯೇ ನಡೆಸಬೇಕು. ರೈಲ್ವೆಗೆ ಸಂಬಂಧಿಸಿದ ಎಲ್ಲಾ ವಿಭಾಗಗಳ ಖಾಸಗೀಕರಣ ನಿಲ್ಲಿಸಬೇಕು. ಸಾರ್ವಜನಿಕ ಹೂಡಿಕೆ ಹೆಚ್ಚಿಸಿ ಖಾಲಿಯಿರುವ 3 ಲಕ್ಷಕ್ಕೂ ಹೆಚ್ಚು ಹುದ್ದೆಗಳನ್ನು ಭರ್ತಿ ಮಾಡಬೇಕು. ರೈಲ್ವೆ ಕಾರ್ಯಾಚರಣೆಯಲ್ಲಿ ಪಾರದರ್ಶಕತೆ ರೂಪಿಸಿ, ಜನತೆಯ ಸುರಕ್ಷತೆಗೆ ಆದ್ಯತೆ ನೀಡಬೇಕು. ರೈಲ್ವೆಯನ್ನು ವಿವಿಧ ಪ್ರದೇಶಗಳಿಗೆ ವಿಸ್ತರಿಸಿ, ಜನತೆಯ ರೈಲ್ವೆ ಪ್ರಯಾಣ ಉತ್ತೇಜಿಸಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಸಮಿತಿಯ ಸಂಚಾಲಕ ಎಂ.ಅಪ್ಪಣ್ಣ, ಸಹ ಸಂಚಾಲಕ ಧನಂಜಯ, ಸಿಐಟಿಯುನ ಬಾಲಾಜಿರಾವ್, ಜಯರಾಂ, ಜವರಯ್ಯ, ಜಗದೀಶ್, ಮೆಹಬೂಬ್, ಸುನಂದ, ಲೀಲಾವತಿ, ಶ್ರೀಕಾಂತ್, ಬಸವರಾಜು, ಹೊಸೂರು ಕುಮಾರ್ ಸೇರಿದಂತೆ ಹಲವರು ಭಾಗವಹಿಸಿದ್ದರು

# ಕೃಷಿ ಅಭಿವೃದ್ಧಿಗೆ ಮುಂದಿನ ಬಜೆಟ್‌ನಲ್ಲಿ ಹೆಚ್ಚಿನ ಅನುದಾನ

## ಪೊನ್ನಂಪೇಟೆಯಲ್ಲಿ ರಾಜ್ಯ ಕೃಷಿ ಯಂತ್ರ ಮೇಳದಲ್ಲಿ ಸಚಿವ ಎನ್. ಚಲುವರಾಯಸ್ವಾಮಿ ಭರವಸೆ

### ವೈಜ್ಞಾನಿಕ ಕೃಷಿಯಿಂದ ರೈತರ ಆರ್ಥಿಕ ಸ್ಥಿತಿ ಅಭಿವೃದ್ಧಿ



ಮಡಿಕೇರಿ, ನ.3– ರಾಜ್ಯದ ರೈತರ ಅಭ್ಯುದಯಕ್ಕೆ ಬಜೆಟ್‌ನಲ್ಲಿ 100 ಕೋಟಿ ರೂ. ಅನುದಾನ ಮೀಸಲಿಡಲಾಗಿದೆ. ಕೃಷಿ ಕ್ಷೇತ್ರದ ಅಭಿವೃದ್ಧಿಗೆ ಮುಖ್ಯಮಂತ್ರಿಗಳ ಜೊತೆ ಚರ್ಚಿಸಿ ಮುಂದಿನ ಬಜೆಟ್‌ನಲ್ಲಿ ಹೆಚ್ಚು ಅನುದಾನಕ್ಕೆ ಪ್ರಯತ್ನಿಸಲಾಗುವುದು ಎಂದು ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಭರವಸೆ ನೀಡಿದರು.

ಪೊನ್ನಂಪೇಟೆಯ ಕೂರ್ಗ್ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಕಾಲೇಜು ಆವರಣದಲ್ಲಿ 3 ದಿನಗಳ ಕಾಲ ಹಮ್ಮಿಕೊಳ್ಳಲಾಗಿರುವ ರಾಜ್ಯ ಕೃಷಿ ಯಂತ್ರ ಮೇಳ ಉದ್ಘಾಟಿಸಿ ಅವರು ಮಾತನಾಡಿದರು. ಆಧುನಿಕ ಕೃಷಿ ಪದ್ಧತಿಯನ್ನು ಕಾರ್ಮಿಕರ ಕೊರತೆ ಹಿನ್ನೆಲೆ ಅಳವಡಿಸಿಕೊಳ್ಳುವ ಅನಿವಾರ್ಯತೆ ಎದುರಾಗಿದೆ. ಈ ನಿಟ್ಟಿನಲ್ಲಿ ಬೃಹತ್ ಭತ್ತದ ಕೊಯ್ಲು ಯಂತ್ರವನ್ನು ಸಂಘ ಸಂಸ್ಥೆಗಳು ಖರೀದಿಸಿ ರೈತರಿಗೆ ಬಾಡಿಗೆ ಆಧಾರದಲ್ಲಿ ನೀಡಲು ಅವಕಾಶವಿದೆ. ಯಂತ್ರ ಖರೀದಿಸಿದಲ್ಲಿ 70:30 ಅನುಪಾತದಲ್ಲಿ ಸರ್ಕಾರ ಸಬ್ಸಿಡಿ ಸೌಲಭ್ಯ ನೀಡಲಿದೆ ಎಂದು ಹೇಳಿದರು.

ಶ್ರೀ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಮೂಲಕವೂ ರಾಜ್ಯದಲ್ಲಿ ಸುಮಾರು 160 ಕೇಂದ್ರಗಳಲ್ಲಿ ಕೃಷಿ ಯಂತ್ರ ಧಾರೆ ಅನುಷ್ಠಾನ ಮೂಲಕ ರೈತರಿಗೆ ಪೂರಕ ಸಹಕಾರ ನೀಡಲಾಗುತ್ತಿದೆ ಎಂದು ಹೇಳಿದರು. ರಾಜ್ಯದ ಕೃಷಿ ಕ್ಷೇತ್ರದಲ್ಲಿಯೂ ಹಲವಷ್ಟು ಲೋಪದೋಷಗಳಿದ್ದು ಜಿಲ್ಲಾವಾರು ಅಧ್ಯಯನ ಮಾಡಿ ವರದಿ ನೀಡಲು ಆಯಾಯ ಜಿಪಂ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ಜವಾಬ್ದಾರಿ ವಹಿಸಲಾಗಿದೆ. ವರದಿಯ ಆಧಾರದಲ್ಲಿ ಮುಂದಿನ ಸಾಲಿನಲ್ಲಿ ರಾಜ್ಯ ಹೊಸ ಕೃಷಿ ನೀತಿ ಅಳವಡಿಸಿ ರೈತರಿಗೆ ಪೂರಕ ನೆರವು ನೀಡಲಾಗುವುದು ಎಂದರು.

5 ಲಕ್ಷ ರೂ. ಬಡ್ಡಿ ರಹಿತ ಸಾಲ ಯೋಜನೆಯನ್ನು ರೈತರು ಸದ್ಬಳಕೆ ಮಾಡಿಕೊಳ್ಳಬೇಕು. ಕೊಡಗಿನ 5 ತಾಲೂಕು ಸೇರಿದಂತೆ ರಾಜ್ಯದ 214 ತಾಲೂಕುಗಳನ್ನು ಬರ ಪೀಡಿತ ತಾಲೂಕಾಗಿ ಘೋಷಣೆ ಮಾಡಲಾಗಿದೆ. ನರೇಗಾ ಯೋಜನೆಯಡಿ 100 ಕೆಲಸದ ದಿನಗಳನ್ನು 150 ದಿನಕ್ಕೆ ಹೆಚ್ಚಿಸಲಾಗಿದೆ. ಕೂಡಲೇ ದುಡಿಯುವ ಕೈಗಳಿಗೆ ಯೋಜನೆಯ ಹಣ ಜಮಾಗುವ ಮಾಡಲು ಕ್ರಮ ಕೈಗೊಳ್ಳಲಾಗಿದೆ ಎಂದು ಕೃಷಿ ಸಚಿವರು ಮಾಹಿತಿ ನೀಡಿದರು.

ಕಾವೇರಿ ಕೊಡಗಿನಲ್ಲಿ ಹುಟ್ಟಿ ರಾಜ್ಯದ ಕೋಟ್ಯಾಂತರ ಜನರ ಜೀವನಾಧಾರವಾಗಿ ಹರಿಯುತ್ತಿದೆ. ಈ ಬಾರಿ ಬರ ಪರಿಸ್ಥಿತಿ ತಲೆದೋರಿದ್ದು ನೀರಿನ ಹಂಚಿಕೆ ಸಮಸ್ಯೆಯೂ ಉದ್ಭವವಾಗಿದೆ. ಕೇಂದ್ರಕ್ಕೆ ಬೆಳೆ ಪರಿಹಾರಕ್ಕೆ ಮನವಿ ಸಲ್ಲಿಸಿದ್ದೇವೆ. ರಾಜ್ಯ ಸರ್ಕಾರ ರೈತರ ಹಿತ ಕಾಯಲು ಬದ್ಧವಾಗಿದೆ ಎಂದು ಚಲುವರಾಯಸ್ವಾಮಿ ತಿಳಿಸಿದರು.

ಕೊಡಗು ರಾಜ್ಯದ ಪ್ರಮುಖ ಆಕರ್ಷಣೀಯ, ವೀರ ಯೋಧರ ಜಿಲ್ಲೆ ಕೊಡಗು ಒಮ್ಮೆ ನೋಡಬೇಕು ಎಂಬ ಬಯಕೆ ಹೊರ ಜಿಲ್ಲೆಯವರಲ್ಲಿಯೂ ಇದೆ. ಯಾವುದೇ ಡೊನೇಷನ್ ಇಲ್ಲದೆ ಸಿಐಟಿ ಕಾಲೇಜು ನಡೆಸುತ್ತಿರುವುದು ಪ್ರಶಂಸನೀಯ. ಇಲ್ಲಿನ ಆವರಣದಲ್ಲಿ 150ಕ್ಕೂ ಅಧಿಕ ಕೃಷಿ ಯಂತ್ರ ಪ್ರದರ್ಶನ ಮಳಿಗೆ ಇದ್ದು ಕೃಷಿಕರು ಸದುಪಯೋಗ ಮಾಡಿಕೊಳ್ಳುವಂತೆ ಸಚಿವರು ಕರೆ ನೀಡಿದರು. ಶಾಸಕ ಎ.ಎಸ್.ಪೊನ್ನಣ್ಣ ಮಾತನಾಡಿ, ಕೃಷಿಯ ಪ್ರಾಮುಖ್ಯತೆ, ತಂತ್ರಜ್ಞಾನ ಅಳವಡಿಕೆಯ ಲಾಭ ರಾಜ್ಯ ಸರ್ಕಾರದ ಜನಪರ ಕಾಜಕ ಕುರಿತು ವಿವರಿಸಿದರು. ಇದೇ ಸಂದರ್ಭ ಕೃಷಿ ಕ್ಷೇತ್ರದ ಸಾಧಕರನ್ನು ಸನ್ಮಾನಿಸಿ ಗೌರವಿಸಲಾಯಿತು.

### ವಸ್ತು ಪ್ರದರ್ಶನ ವೀಕ್ಷಣೆ

ಸಭಾ ಕಾರ್ಯಕ್ರಮಕ್ಕೂ ಮುನ್ನ ಕೃಷಿ ಯಂತ್ರ ಮೇಳ ಅಂಗವಾಗಿ ಕಾಲೇಜು ಆವರಣದಲ್ಲಿ ತೆರೆಯಲಾಗಿರುವ ವಿವಿಧ ಮಳಿಗೆಗಳಿಗೆ ತೆರಳಿದ ಸಚಿವರು ಯಂತ್ರೋಪಕರಣಗಳನ್ನು ವೀಕ್ಷಿಸಿದರು. ರಸ ಗೊಬ್ಬರಗಳು, ನೀರಾವರಿಗೆ ಬಳಸುವ ಪೈಪ್‌ಗಳು, ಸ್ಪಿಂಕ್ಲರ್ ಸಿಸ್ಟಂಗಳು, ಕೀಟ ಮತ್ತು ಕ್ರಿಮಿ ನಾಶಕಗಳು, ಸಾವಯವ ಗೊಬ್ಬರಗಳು ಸೇರಿದಂತೆ ಬಹುತೇಕ ಮಳಿಗೆಗಳನ್ನು ವೀಕ್ಷಿಸಿದರು. ಮಳಿಗೆ ಮಾಲೀಕರು/ಪ್ರತಿನಿಧಿಗಳಿಂದಲೂ ಸಚಿವರು ಮಾಹಿತಿ ಪಡೆದರು. ಮಡಿಕೇರಿ ಶಾಸಕ ಡಾ.ಮಂಥರ್ ಗೌಡ, ಜಿಲ್ಲಾಧಿಕಾರಿ ವೆಂಕಟ್ ರಾಜಾ, ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್, ಜಿಪಂ ಸಿಇಒ, ವರ್ಣಿತ್ ನೇಗಿ, ಕಾಂಗ್ರೆಸ್ ಜಿಲ್ಲಾಧ್ಯಕ್ಷ ಧರ್ಮಜ ಉತ್ತಪ್ಪ, ಡಿಸಿಸಿ ಬ್ಯಾಂಕ್ ಅಧ್ಯಕ್ಷ ಕೊಡಂದೇರ ಪಿ.ಗಣಪತಿ, ಕರ್ನಾಟಕ ರಾಜ್ಯ ರೈತ ಸಂಘದ ಜಿಲ್ಲಾಧ್ಯಕ್ಷ ಕಾಡ್ಯಮಾಡ ಮನು ಸೋಮಯ್ಯ, ಕೊಡವ ಎಜುಕೇಶನ್ ಸೊಸೈಟಿ ಅಧ್ಯಕ್ಷ ಡಾ. ಎಂ.ಸಿ.ಕಾರ್ಯಪ್ಪ ಉಪಾಧ್ಯಕ್ಷ ಕೆ.ಸಿ. ಚಿಣ್ಣಪ್ಪ ಕಾರ್ಯದರ್ಶಿ ಚೆರಿಯಪಂಡ ಪಿ.ರಾಕೇಶ್ ಪೂವಯ್ಯ, ಪ್ರಾಂಶುಪಾಲ ಡಾ. ಎಂ.ಬಸವರಾಜು, ಕ್ಯಾಂಪಸ್ ಆಡಳಿತ ಅಧಿಕಾರಿ ಜೀವನ್ ಚಿಣ್ಣಪ್ಪ, ಕೃಷಿ ಇಲಾಖೆ ಅಧಿಕಾರಿಗಳು ಉಪಸ್ಥಿತರಿದ್ದರು.

## ಇಂದು ವಿವಾಹಿತ ಮಹಿಳೆಯರ ಕ್ರಿಕೆಟ್ ಪಂದ್ಯಾವಳಿ

ಮಡಿಕೇರಿ, ನ.3– ಚೆಟ್ಟಳ್ಳಿಯ ಅವರ್ ಕ್ಲಬ್ ವತಿಯಿಂದ ನ.4ರಂದು ವಿವಾಹಿತ ಮಹಿಳೆಯರ ಮುಕ್ತ ನಾಕೌಟ್ ಕ್ರಿಕೆಟ್ ಪಂದ್ಯಾವಳಿ ನಡೆಯಲಿದೆ. ಚೆಟ್ಟಳ್ಳಿಯ ಪ್ರೌಢಶಾಲಾ ಮೈದಾನದಲ್ಲಿ ಬೆಳಗ್ಗೆ 8.30 ಗಂಟೆಗೆ ನಡೆಯಲಿರುವ ಪಂದ್ಯಾವಳಿಯನ್ನು ಮಡಿಕೇರಿಯ ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಕಾಲೇಜಿನ ನಿವೃತ್ತ ಪ್ರಾಂಶುಪಾಲ ಮಂಡೇಪಂಡ ಡಾ.ಪುಷ್ಪಾ ಕುಟ್ಟಣ್ಣ ಉದ್ಘಾಟಿಸಲಿದ್ದಾರೆ.

6 ಓವರ್‌ಗಳ ಪಂದ್ಯಾವಳಿ ನಡೆಯಲಿದ್ದು, 25 ವರ್ಷ ಮೇಲ್ಪಟ್ಟ ವಿವಾಹಿತ ಮಹಿಳೆಯರಿಗೆ ಮಾತ್ರ ಭಾಗವಹಿಸಲು ಅವಕಾಶ ಕಲ್ಪಿಸಲಾಗಿದೆ. ಒಟ್ಟು 15 ತಂಡಗಳು ಪಾಲ್ಗೊಳ್ಳಲಿವೆ. ವಿಜೇತ ತಂಡಕ್ಕೆ 21 ಸಾವಿರ ರೂ. ನಗದು ಮತ್ತು ಟ್ರೋಫಿ, ದ್ವಿತೀಯ ರೂ.11 ಸಾವಿರ ರೂ. ನಗದು ಮತ್ತು ಟ್ರೋಫಿ, ತೃತೀಯ ರೂ.6 ಸಾವಿರ ರೂ. ನಗದು ಮತ್ತು ಟ್ರೋಫಿ ನೀಡಲಾಗುವುದು.

## ನಾಪೋಕ್ಲು ಶೌರ್ಯ ವಿಪತ್ತು ನಿರ್ವಹಣ ಘಟಕದ ವತಿಯಿಂದ ಶ್ರಮದಾನ



ನಾಪೋಕ್ಲು, ನ.3– ಸ್ಥಳೀಯ ಶೌರ್ಯ ವಿಪತ್ತು ನಿರ್ವಹಣಾ ಘಟಕದ ವತಿಯಿಂದ ಇಲ್ಲಿಯ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಆವರಣವನ್ನು ಶ್ರಮದಾನದ ಮೂಲಕ ಕಾಡು ಕಡಿದು ಸ್ವಚ್ಛತೆ ಮಾಡಲಾಯಿತು.

ಈ ಸಂದರ್ಭ ಕಾಲೇಜಿನ ಪ್ರಾಂಶುಪಾಲ ಡಾ. ಕಾವೇರಿ ಹಾಗೂ ಪ್ರಾಧ್ಯಾಪಕ ವರ್ಗ ಶೌರ್ಯ ವಿಪತ್ತು ನಿರ್ವಹಣಾ ಘಟಕದ ನಿಸ್ವಾರ್ಥ ಸೇವೆಯನ್ನು ಶ್ಲಾಘಿಸಿ ಗುಣಗಾನ ಮಾಡಿ, ಅಭಿನಂದಿಸಿದರು.

ಶ್ರಮದಾನದಲ್ಲಿ ಘಟಕದ ಸಂಯೋಜಕಿ ಬಾಳೆಯಡ ದಿವ್ಯ, ಗೀತಾ, ಶಂಕರ್, ಸೀನ ಮಾದಪ್ಪನ್, ದಿಲೀಪ್, ಮಾಯಿಲಪ್ಪ ಚೇತನ್, ಸುದೀಪ್, ರವಿ, ಶರವಣ, ಚಂದ್ರಕಲಾ, ಉಮಾಲಕ್ಷ್ಮಿ, ದಮಯಂತಿ, ಶ್ಯಾಮಲ, ಸರಸ್ವತಿ, ಆಶಾ ಭಾಗವಹಿಸಿದ್ದರು.

## ಗಾಂಜಾ ಮಾರಲೆತ್ನಿಸಿದ ಆರೋಪಿ ಬಂಧನ

ಸುಂಟಿಕೊಪ್ಪ, ನ.3– ಗಾಂಜಾ ಮಾರಾಟ ಪ್ರಕರಣಕ್ಕೆ ಸಂಬಂಧಿಸಿದಂತೆ ಯುವಕನೋರ್ವನನ್ನು ಸುಂಟಿಕೊಪ್ಪ ಪೊಲೀಸರು ಬಂಧಿಸಿದ್ದಾರೆ.

ಸುಂಟಿಕೊಪ್ಪ ನಿವಾಸಿ ಮಧುಸೂಧನ (ಮಧು) ಎಂಬಾತನೇ ಆರೋಪಿಯಾಗಿದ್ದು ಸುಂಟಿಕೊಪ್ಪ ಪಟ್ಟಣದಲ್ಲಿ ಗಾಂಜಾ ಮಾರಾಟ ಮಾಡಲು ಯತ್ನಿಸುತ್ತಿದ್ದ. ಈ ಖಚಿತ ಮಾಹಿತಿಯ ಹಿನ್ನೆಲೆಯಲ್ಲಿ ಡಿವೈಎಸ್ಪಿ ಗಂಗಾಧರಪ್ಪ ಸೂಚನೆ ಮೇರೆಗೆ ಸುಂಟಿಕೊಪ್ಪ ಠಾಣಾಧಿಕಾರಿ ಶ್ರೀಧರ್ ಹಾಗೂ ಸಿಬ್ಬಂದಿ ದಾಳಿ ನಡೆಸಿ ಆರೋಪಿಯನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ. ಆತನ ಬಳಿಯಿದ್ದ 420 ಗ್ರಾಂ ಗಾಂಜಾ ವನ್ನು ವಶಕ್ಕೆ ಪಡೆದು ಕೇಸು ದಾಖಲಿಸಿ ಆರೋಪಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದಾರೆ. ಕಾರ್ಯಾಚರಣೆಯಲ್ಲಿ ಸಿಬ್ಬಂದಿಗಳಾದ ಸತೀಶ್, ಪ್ರವೀಣ್, ಜಗದೀಶ್, ಸಂಪತ್, ಸತೀಶ್ ಇಲಿಗೇರ, ವಿವೇಕ್, ಸೌಮ್ಯ ಪಾಲ್ಗೊಂಡಿದ್ದರು.

## ಗುಡ್ಡೆಹೊಸೂರು ಶಾಲೆಯಲ್ಲಿ ಕನ್ನಡ ರಾಜ್ಯೋತ್ಸವ

ಗುಡ್ಡೆಹೊಸೂರು, ನ.3– ಇಲ್ಲಿನ ಸರಕಾರಿ ಪ್ರಾಥಮಿಕ ಶಾಲೆಯಲ್ಲಿ ಕನ್ನಡ ರಾಜೋತ್ಸವ ಸಂಭ್ರಮ ಸಡಗರದಿಂದ ಆಚರಿಸಲಾಯಿತು.

ಕನ್ನಡ ನಾಡು ನುಡಿಗೆ ಶ್ರಮಿಸಿದ ಕನ್ನಡದ ವ್ಯಕ್ತಿಗಳ ವೇಷಭೂಷಣ ಧರಿಸಿ ಮಕ್ಕಳು ವಾಹನದಲ್ಲಿ ಮೆರವಣಿಗೆ ಸಾಗಿ ನಂತರ ಗುಡ್ಡೆಹೊಸೂರಿನ ಡಾ. ಶಿವಕುಮಾರ್ ಸ್ವಾಮಿಜೀ ವೃತ್ತದ ಬಳಿ ಶಾಲಾ ಮಕ್ಕಳಿಂದ ಕನ್ನಡ ಗೀತೆಗೆ ನೃತ್ಯ ಮಾಡಲಾಯಿತು. ಗ್ರಾಮದ ಪ್ರಮುಖ ರಸ್ತೆಗಳಲ್ಲಿ ಮೆರವಣಿಗೆ ನಡೆಸಲಾಯಿತು. ಧ್ವಜಾರೋಹಣ ವನ್ನು ಎಸ್‌ಡಿಎಂಸಿ ಅಧ್ಯಕ್ಷ ನಾಗೇಂದ್ರ ಧ್ವಜಾರೋಹಣ ನೆರವೇರಿಸಿದರು.

ಈ ಸಂದರ್ಭ ಮಕ್ಕಳಿಂದ ಮನರಂಜನೆ ಕಾರ್ಯಕ್ರಮ ನಡೆಯಿತು. ಗ್ರಾಮದಲ್ಲಿ ನಡೆದ ಮೆರವಣಿಗೆಯಲ್ಲಿ ಪೋಷಕ ವೃಂದ, ಎಸ್‌ಡಿಎಂಸಿ ಸದಸ್ಯರು ಮತ್ತು ಶಿಕ್ಷಕ ವೃಂದ ಹಾಜರಿದ್ದರು.

## ನ.8ರಿಂದ ಲೋಕಾಯುಕ್ತರಿಂದ ದೂರು ಅರ್ಜಿ ಸ್ವೀಕಾರ

ಮಡಿಕೇರಿ, ನ.3– ಕರ್ನಾಟಕ ಲೋಕಾಯುಕ್ತ ಮಡಿಕೇರಿಯ ಲೋಕಾಯುಕ್ತ ಅಧಿಕಾರಿಗಳು ನ.8 ರಂದು ವಿರಾಜಪೇಟೆ ತಹಶೀಲ್ದಾರ್ ಕಚೇರಿ ಸಭಾಂಗಣದಲ್ಲಿ ಮತ್ತು ನ.10 ರಂದು ಮಡಿಕೇರಿ ತಹಶೀಲ್ದಾರ್ ಕಚೇರಿ ಸಭಾಂಗಣದಲ್ಲಿ ಆಯಾಯ ದಿನಗಳಂದು ಬೆಳಗ್ಗೆ 11 ಗಂಟೆಯಿಂದ 1 ಗಂಟೆಯವರೆಗೆ ಕರ್ನಾಟಕ ಲೋಕಾಯುಕ್ತ ಕಾಯಿದೆಯಡಿ ದೂರು ಅರ್ಜಿ ವಿತರಿಸಲಿದ್ದಾರೆ.

ಭರ್ತಿ ಮಾಡಿದ ಮತ್ತು ನೋಟರಿಯಿಂದ ಅಫಿಡವಿಟ್ ಮಾಡಿಸಿದ ಅರ್ಜಿಗಳನ್ನು ಸ್ವೀಕರಿಸಲಾಗುವುದು. ಸರ್ಕಾರಿ ಕಚೇರಿಗಳಲ್ಲಿ ಅಧಿಕೃತ ಕೆಲಸಗಳಲ್ಲಿ ವಿಳಂಬ ಹಾಗೂ ಇನ್ನಿತರೆ ತೊಂದರೆ ನೀಡುತ್ತಿರುವ ಸರ್ಕಾರಿ ಅಧಿಕಾರಿ/ನೌಕರರ ವಿರುದ್ಧ ಸಾರ್ವಜನಿಕರು ದೂರುಗಳನ್ನು ನಿಗದಿತ ಪತ್ರದಲ್ಲಿ ನೀಡಬಹುದು. ಸಾರ್ವಜನಿಕರು ಈ ಅವಕಾಶವನ್ನು ಸದುಪಯೋಗಪಡಿಸಿ ಕೊಳ್ಳುವಂತೆ ಕೋರಿದೆ. ಹೆಚ್ಚಿನ ವಿವರಗಳಿಗೆ ಮಡಿಕೇರಿ ಲೋಕಾಯುಕ್ತ ಪೊಲೀಸ್ ಕಚೇರಿ, ಗೌಳಿಬೀದಿ ಮಡಿಕೇರಿಯ ದೂ.ಸಂ. 08272–295297 ನ್ನು ಸಂಪರ್ಕಿಸಬಹುದು ಎಂದು ಕರ್ನಾಟಕ ಲೋಕಾಯುಕ್ತ ಪೊಲೀಸ್ ಉಪಾಧೀಕ್ಷಕರು ತಿಳಿಸಿದ್ದಾರೆ.

## ಕಾಲಮಿತಿಯಲ್ಲಿ ಆರ್ಥಿಕ, ಭೌತಿಕ ಗುರಿ ಸಾಧಿಸಿ: ಚಲುವರಾಯಸ್ವಾಮಿ



ಮಡಿಕೇರಿ, ನ.3– ಕೃಷಿ ಸಚಿವರಾದ ಎನ್.ಚಲುವರಾಯಸ್ವಾಮಿ ಅವರು ಕೃಷಿ ಇಲಾಖೆಗೆ ಸಂಬಂಧಿಸಿದಂತೆ ಪ್ರಗತಿ ಪರಿಶೀಲನಾ ಸಭೆ ನಡೆಸಿ ಕೃಷಿ ಇಲಾಖೆ ಕಾರ್ಯಕ್ರಮಗಳ ಸಂಬಂಧ ಕಾಲಮಿತಿಯಲ್ಲಿ ಆರ್ಥಿಕ ಹಾಗೂ ಭೌತಿಕ ಗುರಿ ಸಾಧಿಸುವಂತೆ ನಿರ್ದೇಶನ ನೀಡಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಶುಕ್ರವಾರ ನಡೆದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಕೃಷಿ ಇಲಾಖೆ ಜಂಟಿ ನಿರ್ದೇಶಕರಾದ ಸೋಮಸುಂದರ ಅವರು ಮಾಹಿತಿ ನೀಡಿ ಜಿಲ್ಲೆಯಲ್ಲಿ ಈ ಬಾರಿ ವಾಡಿಕೆಗಿಂತ ಕಡಿಮೆ ಮಳೆಯಾಗಿದ್ದು, ಶೇ.39 ರಷ್ಟು ಮಳೆ ಕೊರತೆ ಉಂಟಾಗಿದೆ ಎಂದು ಮಾಹಿತಿ ನೀಡಿದರು.

ಪ್ರಸಕ್ತ ಸಾಲಿನಲ್ಲಿ ಮುಂಗಾರು ಹಂಗಾಮಿನಲ್ಲಿ ಭತ್ತ, ಮುಸುಕಿನ ಜೋಳ, ರಾಗಿ ಬಿತ್ತನೆ ಸಂಬಂಧಿಸಿದಂತೆ ಶೇ.67 ರಷ್ಟು ಪ್ರಗತಿ ಸಾಧಿಸಲಾಗಿದೆ. ಕಾಲ ಕಾಲಕ್ಕೆ ರಸಗೊಬ್ಬರ ಪೂರೈಕೆ ಮಾಡಲಾಗಿದೆ. ಹಾಗೆಯೇ ಬಿತ್ತನೆ ಬೀಜವನ್ನು ವಿತರಿಸಲಾಗಿದೆ ಎಂದು ತಿಳಿಸಿದರು.

ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಭೀಮಾ ಯೋಜನೆಯ ಪ್ರಗತಿ ಸಾಧಿಸಲಾಗಿದೆ. ಮುಂಗಾರು ಹಂಗಾಮಿನ ಬೆಳೆ ಸಮೀಕ್ಷೆ ಕೈಗೊಳ್ಳಲಾಗಿದ್ದು, ಶೇ.90 ರಷ್ಟು ಪ್ರಗತಿ ಸಾಧಿಸಲಾಗಿದೆ. ಪಿಎಂ.ಕಿಸಾನ್ ಯೋಜನೆಯಡಿ ಇಕೆವೈಸಿ ಯಡಿ ಹೆಸರು ನೋಂದಾಯಿಸಲಾಗುತ್ತಿದೆ ಎಂದು ಸೋಮಸುಂದರ ಅವರು ವಿವರಿಸಿದರು. ರೈತರ ಆತ್ಮಹತ್ಯೆಗೆ ಪ್ರಕರಣಕ್ಕೆ ಸಂಬಂಧಿಸಿದಂತೆ 2019 ರಿಂದ ಇದುವರೆಗೆ 29 ಪ್ರಕರಣಗಳಲ್ಲಿ 28 ಪ್ರಕರಣಗಳಿಗೆ ಪರಿಹಾರ ವಿತರಿಸಲಾಗಿದ್ದು, ಒಂದು ಪ್ರಕರಣ ಪರಿಹಾರ ವಿತರಿಸಲು ಬಾಕಿ ಇದೆ ಎಂದು ಅವರು ತಿಳಿಸಿದರು.

ವಿರಾಜಪೇಟೆ ಶಾಸಕ ಎ.ಎಸ್. ಪೊನ್ನಣ್ಣ, ಮಂಡ್ಯ ಶಾಸಕ ರವಿಕುಮಾರ್ ಪಿ.ಗೌಡ, ಕೃಷಿ ಇಲಾಖೆಯ ನಿರ್ದೇಶಕ ಡಾ.ಜಿ.ಟಿ.ಪುತ್ರ, ಜಿಪಂ ಸಿಇಓ ವರ್ಣಿತ್ ನೇಗಿ, ಹೆಚ್ಚುವರಿ ಜಿಲ್ಲಾಧಿಕಾರಿ ಬಿ.ಎನ್.ವೀಣಾ, ಕೃಷಿ ಇಲಾಖೆ ಅಧಿಕಾರಿಗಳು ಇತರರು ಇದ್ದರು.

## ನಾಳೆ ಸರ್ಕಾರಿ ನೌಕರರ ಸಂಘದಿಂದ ಪ್ರತಿಭಾ ಪುರಸ್ಕಾರ

ಚಾಮರಾಜನಗರ, ನ.3– ರಾಜ್ಯ ಸರ್ಕಾರಿ ನೌಕರರ ಸಂಘ ಹಾಗೂ ಜಿಲ್ಲಾ ಘಟಕದ ವತಿಯಿಂದ ನ. 5 ರಂದು ಜಿಲ್ಲೆಯ ನೂತನ ಶಾಸಕರು, ಸಚಿವರಿಗೆ ಹಾಗೂ ಸರ್ಕಾರಿ ನೌಕರರ ಪ್ರತಿಭಾವಂತ ಎಸ್ಸೆಸ್ಸೆಲ್ಸಿ ಮತ್ತು ಪಿಯುಸಿ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಸಮಾರಂಭವನ್ನು ಹಮ್ಮಿಕೊಳ್ಳಲಾಗಿದೆ ಎಂದು ಸಂಘದ ಜಿಲ್ಲಾಧ್ಯಕ್ಷ ಚಂದ್ರಶೇಖರ್ ತಿಳಿಸಿದ್ದಾರೆ.

ಅಂದು ಬೆಳಗ್ಗೆ 11.30 ಕ್ಕೆ ನಗರದ ಜಿಲ್ಲಾಡಳಿತ ಭವನದಲ್ಲಿರುವ ಜೆ. ಎಚ್. ಪಟೇಲ್ ಸಭಾಂಗಣದಲ್ಲಿ ಕಾರ್ಯಕ್ರಮವನ್ನು ಜಿಲ್ಲಾ ಉಸ್ತುವಾರಿ ಸಚಿವ ಕೆ. ವೆಂಕಟೇಶ್ ಉದ್ಘಾಟಿಸಲಿದ್ದು, ಪ್ರತಿಭಾ ಪುರಸ್ಕಾರವನ್ನು ಸರ್ಕಾರಿ ನೌಕರರ ಸಂಘದ ರಾಜ್ಯಾಧ್ಯಕ್ಷ ಸಿ.ಎಸ್.ಷಡಾಕ್ಷರಿ ಮಾಡಲಿದ್ದು, ಮುಖ್ಯ ಅತಿಥಿಗಳಾಗಿ ಸಂಸದ ವಿ. ಶ್ರೀನಿವಾಸ್ ಪ್ರಸಾದ್, ಶಾಸಕ ರಾದ ಸಿ.ಪುಟ್ಟರಂಗಶೆಟ್ಟಿ ಎ.ಆರ್. ಕೃಷ್ಣಮೂರ್ತಿ, ಎಚ್. ಎಂ. ಗಣೇಶ್ ಪ್ರಸಾದ್, ಎಂ.ಆರ್. ಮಂಜುನಾಥ್, ಡಿಸಿ ಶಿಲ್ಪಾನಾಗ್, ಎಸ್ಪಿ ಪದ್ಮಿನಿ ಸಾಹು, ಜಿಪಂ ಸಿಇಒ ಆನಂದ್ ಪ್ರಕಾಶ್ ಮೀನಾ, ಎಡಿಸಿ ಗೀತಾ ಹುಡೇದ ಸೇರಿದಂತೆ ಇತರರು ಭಾಗವಹಿಸಲಿದ್ದಾರೆ.

### ರೈತರ ಬೇಡಿಕೆ ಈಡೇರಿಸುವಲ್ಲಿ ರಾಜ್ಯ ಸರ್ಕಾರ ವಿಫಲ; ಆರೋಪ

## ನ.9, ಮೈಸೂರಿನ ಸಿಎಂ ಮನೆ ಮುಂದೆ ಪ್ರತಿಭಟನೆ



ಚಾಮರಾಜನಗರ, ನ.3– ರೈತರ ಬೇಡಿಕೆಗಳನ್ನು ಈಡೇರಿಸುವಲ್ಲಿ ರಾಜ್ಯ ಕಾಂಗ್ರೆಸ್ ಸರ್ಕಾರ ವಿಫಲವಾಗಿದೆ ಎಂದು ಆರೋಪಿಸಿ ಮೈಸೂರಿನಲ್ಲಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಮನೆ ಮುಂಭಾಗ ರಾಜ್ಯ ಕಬ್ಬು ಬೆಳೆಗಾರರ ಸಂಘದಿಂದ ಪ್ರತಿಭಟನೆ ನಡೆಸಲಾಗುವುದು ಎಂದು ಸಂಘದ ಕಾರ್ಯಾಧ್ಯಕ್ಷ ಹಳ್ಳಿಕೆರೆ ಹುಂಡಿ ಭಾಗ್ಯರಾಜ್ ತಿಳಿಸಿದರು.

ನಗರದ ಪ್ರವಾಸಿ ಮಂದಿರದಲ್ಲಿ ಶುಕ್ರವಾರ ನಡೆದ ರೈತರ ಸಭೆಯಲ್ಲಿ ಮತನಾಡಿದ ಅವರು, ಕಳೆದ ವರ್ಷದಿಂದ ಬಾಳಿ ಉಳಿದಿರುವ ಮೈಸೂರು, ಚಾಮರಾಜನಗರ ಜಿಲ್ಲೆಯ ಕಬ್ಬು ಬೆಳೆಗಾರರ ಬಾಕಿ ಹಣವನ್ನು ಕೊಡಿಸುವಲ್ಲಿ ರಾಜ್ಯ ಸರ್ಕಾರ ಸಂಪೂರ್ಣ ವಿಫಲವಾಗಿದೆ. ಸುಮಾರು 25 ಕೋಟಿ ಹೆಚ್ಚು ಹಣ ರೈತರಿಗೆ ಬಾಕಿ ಬರಬೇಕು ಎಂದು ತಿಳಿಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಸ್ವ ಕ್ಷೇತ್ರವಾದ ಮೈಸೂರು, ಚಾಮರಾಜನಗರ ಭಾಗದ ರೈತರಿಗೆ 25 ಕೋಟಿಗೂ ಅಧಿಕ ಹಣವನ್ನು ಕೊಡಿಸುವಲ್ಲಿ ಅವರು ವಿಫಲವಾಗಿದ್ದಾರೆ. ಅಲ್ಲದೇ ಕೃಷಿ ಪಂಪ್‌ಸೆಟ್‌ಗಳಿಗೆ ಸಮರ್ಪಕ ವಿದ್ಯುತ್ ಅನ್ನು ಕೊಡಿಸುತ್ತಿಲ್ಲ. ಚುನಾವಣಾ ಪೂರ್ವದಲ್ಲಿ 10 ಗಂಟೆ ನಿರಂತರ ವಿದ್ಯುತ್ ನೀಡುವ ಭರವಸೆ ಈಡೇರಿಸುವಲ್ಲಿ ವಿಫಲರಾಗಿದ್ದಾರೆ ಎಂದು ದೂರಿದರು.

ಕೃಷಿಗೆ ಈಗ 5 ಗಂಟೆ ಮಾತ್ರ ವಿದ್ಯುತ್ ಪೂರೈಕೆ ಮಾಡಲಾಗುತ್ತಿದ್ದು ರೈತರಿಗೆ ಸಾಕಷ್ಟು ನಷ್ಟ ಉಂಟಾಗುತ್ತಿದೆ. ಬರ ಪೀಡಿತ ಪ್ರದೇಶವೆಂದು ಘೋಷಣೆಯನ್ನು ಮಾಡಿ ಗೋ ಶಾಲೆ ಅಥವಾ ಜಾನುವಾರುಗಳಿಗೆ ಮೇವು ಬ್ಯಾಂಕ್ ಆಗಲಿ ಪ್ರಾರಂಭಿಸಿಲ್ಲ. ಬರದಿಂದ ನಷ್ಟ ಉಂಟಾಗಿರುವ ರೈತರರ ಖಾತೆಗಳಿಗೆ ಯಾವುದೇ ನಷ್ಟ ಪರಿಹಾರವನ್ನು ಸರ್ಕಾರ ಜಮಾ ಮಾಡಿಲ್ಲ ಎಂದು ತಿಳಿಸಿದರು.

ಬರ ಎಂದು ಘೋಷಣೆ ಮಾಡಿ ರಾಜ್ಯ ಸರ್ಕಾರ ಕೈ ಕಟ್ಟಿ ಕುಳಿತಿದೆ. ಕಾವೇರಿ ನೀರನ್ನು ತಮಿಳುನಾಡಿಗೆ ನಿರಂತರವಾಗಿ ಹರಿಬಿಟ್ಟು ರಾಜ್ಯದ ಅಚ್ಚುಕಟ್ಟು ಭಾಗದ ರೈತರಿಗೆ ನಷ್ಟವಾಗಿದೆ. ಅವರಿಗೂ ಕೂಡ ನಷ್ಟ ಪರಿಹಾರವನ್ನು ನೀಡದೆ ಸರ್ಕಾರ ಮೌನವಾಗಿದೆ. ಬರವಿರುವ ಜಿಲ್ಲೆಗಳಲ್ಲಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಕೃಷಿ ಸಾಲವನ್ನು ಸಂಪೂರ್ಣ ಮನ್ನಾ ಮಾಡುವುದು ಸೇರಿದಂತೆ ಇತರೆ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಇದೇ ನ. 9ರಂದು ಮೈಸೂರಿನಲ್ಲಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಮನೆ ಮುಂಭಾಗ ನಿರಂತರ ಪ್ರತಿಭಟನಾ ಧರಣಿಯನ್ನು ಹಮ್ಮಿಕೊಳ್ಳಲಾಗಿದೆ ಎಂದು ಸಭೆಯಲ್ಲಿ ಕಬ್ಬು ಬೆಳೆಗಾರರ ಸಂಘದ ಜಿಲ್ಲಾ ಕಾರ್ಯಾಧ್ಯಕ್ಷ ಹಳ್ಳಿಕೆರೆಹುಂಡಿ ಭಾಗ್ಯರಾಜ್ ತಿಳಿಸಿದರು.

ಸಭೆಯಲ್ಲಿ ತಾಲೂಕು ಅಧ್ಯಕ್ಷ ಹಾಲಿನ ನಾಗರಾಜ್, ಪ್ರಧಾನ ಕಾರ್ಯದರ್ಶಿ ಮಲಿಯೂರು ಹರ್ಷ, ಬಸವರಾಜಪ್ಪ, ಮಹೇಂದ್ರ, ಸತೀಶ್, ಉಡಿಗಾಲ ಗ್ರಾಮ ಘಟಕದ ಅಧ್ಯಕ್ಷ ಮಂಜುನಾಥ್, ಮಹದೇವಸ್ವಾಮಿ, ಗುರು, ಸತೀಶ್, ಅರಳೀಕಟ್ಟೆ ಗ್ರಾಮ ಘಟಕದ ಅಧ್ಯಕ್ಷ ಕುಮಾರ್, ಕೆರಳಿಪುರ ಗ್ರಾಮ ಘಟಕದ ಅಧ್ಯಕ್ಷ ನಂದೀಶ್, ಶ್ರೀಕಂಠ ಸೇರಿದಂತೆ ಮುಂತಾದವರು ಹಾಜರಿದ್ದರು.

## ಮಾನಸಿಕ ಅಸ್ವಸ್ಥರ ಹಗಲು ಆರೈಕೆ ಕೇಂದ್ರಕ್ಕೆ ಧನಸಹಾಯ



ಚಾಮರಾಜನಗರ, ನ.3– ನಗರದ ಮಾಂಗಲ್ಯ ಕಲ್ಯಾಣ ಮಂಟಪದ ಹಿಂಭಾಗದಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ಶ್ರೀ ಅನುಲಕ್ಷ್ಮಿ ಚಾರಿಟಬಲ್ ಟ್ರಸ್ಟ್ ವತಿಯಿಂದ ನಡೆಯುತ್ತಿರುವ ಮಾನಸಧಾರ ಮಾನಸಿಕ ಅಸ್ವಸ್ಥರ ಹಗಲು ಆರೈಕೆ ಕೇಂದ್ರಕ್ಕೆ ದಲಿತ ಮಹಾಸಭಾ ರಾಜ್ಯ ಉಪಾಧ್ಯಕ್ಷರು, ಬಿಜೆಪಿ ಮುಖಂಡರಾದ ವೆಂಕಟರಮಣಸ್ವಾಮಿ (ಪಾಪು) ಅವರು ವೈಯುಕ್ತಿಕವಾಗಿ 5 ಸಾವಿರ ಧನಸಹಾಯ ಮಾಡಿದರು.

ಈ ಸಂದರ್ಭದಲ್ಲಿ ಸಮಾಜಸೇವಕ ಡಾ.ಪರಮೇಶ್ವರಪ್ಪ, ಕರ್ನಾಟಕ ಸ್ಟೇಟ್ ಮಿನರಲ್ಸ್ ಕಾರ್ಪೋರೇಷನ್ ಲಿಮಿಟೆಡ್‌ನ ಉಪಪ್ರಧಾನ ವ್ಯವಸ್ಥಾಪಕ ನಿರ್ಮಲ್ ಕುಮಾರ್, ರವಿಸಂತು, ಡಾ.ಎಸ್.ಪಿ. ಬಾಲಸುಬ್ರಹ್ಮಣ್ಯಂ ಗಾನಗಂಧರ್ವ ಸಾಂಸ್ಕೃತಿಕ ವೇದಿಕೆ ಗೌರವ ಅಧ್ಯಕ್ಷ ಸುರೇಶ್‌ಗೌಡ, ಶ್ರೀ ಅನುಲಕ್ಷ್ಮೀ ಚಾರಿಟಬಲ್ ಟ್ರಸ್ಟ್ ಸಂಸ್ಥಾಪಕ ಕಾರ್ಯದರ್ಶಿ ಎಂ.ಡಿ.ಮಹದೇವ್ರ ಇದ್ದರು.

## ವಿ.ವಿ ಸ್ನಾತಕೋತ್ತರ ಪ್ರವೇಶಾತಿ : ಅರ್ಜಿ ಸಲ್ಲಿಕೆ ಅವಧಿ ವಿಸ್ತರಣೆ

ಚಾಮರಾಜನಗರ, ನ.3– 2023–24ನೇ ಶೈಕ್ಷಣಿಕ ವರ್ಷ ಸಾಲಿನಲ್ಲಿ ಚಾಮರಾಜನಗರ ವಿಶ್ವವಿದ್ಯಾನಿಲಯದ ಕ್ಯಾಂಪಸ್‌ನಲ್ಲಿರುವ ಸ್ನಾತಕೋತ್ತರ ವಿಭಾಗಗಳು ಹಾಗೂ ಚಾಮರಾಜನಗರ ವಿಶ್ವವಿದ್ಯಾನಿಲಯದ ಸಂಯೋಜಿತ ಕಾಲೇಜುಗಳಲ್ಲಿ ನಡೆಯುತ್ತಿರುವ ವಿವಿಧ ಸ್ನಾತಕೋತ್ತರ ವಿಭಾಗಗಳಲ್ಲಿ ಭರ್ತಿಯಾಗದೇ ಖಾಲಿ ಉಳಿದಿರುವ ಸೀಟುಗಳ ಪ್ರವೇಶಾತಿಗೆ (ಆಫ್‌ಲೈನ್) ಅರ್ಜಿ ಸಲ್ಲಿಸುವ ಅವಧಿಯನ್ನು ನವೆಂಬರ್ 4ರವರೆಗೆ ವಿಸ್ತರಿಸಲಾಗಿದೆ. ಹೆಚ್ಚಿನ ಮಾಹಿತಿಯನ್ನು ಚಾಮರಾಜನಗರ ವಿಶ್ವವಿದ್ಯಾನಿಲಯದ ವೆಬ್‌ಸೈಟ್ https://cuc.karnaka.gov.in ನಲ್ಲಿ ಪಡೆಯಬಹುದು ಎಂದು ವಿಶ್ವವಿದ್ಯಾನಿಲಯದ ಕುಲಪತಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಕನ್ನಡದ ಆತ್ಮಜ್ಯೋತಿ ಬೆಳಗಿಸಿ, ಸಾಹಿತ್ಯ–ಸಂಸ್ಕೃತಿ ಉಳಿಸಿ–ಬೆಳೆಸಿ

### ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ಮುಖ್ಯಸ್ಥೆ ಕರೆ



ಚಾಮರಾಜನಗರ, ನ.3– ಕನ್ನಡದ ಆತ್ಮಜ್ಯೋತಿ ಬೆಳಗಿಸಿ ಕನ್ನಡ ಸಾಹಿತ್ಯ, ಸಂಸ್ಕೃತಿ, ಪರಂಪರೆ, ಸಂಭ್ರಮ, ಉಳಿಸಿ ಬೆಳೆಸುವ ಕಾರ್ಯ ಆಗಲಿ. ಕನ್ನಡ ಬೆಳೆಸುವುದು ಕನ್ನಡಿಗರ ಕರ್ತವ್ಯವಾಗಬೇಕು ಎಂದು ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರಿ ವಿಶ್ವವಿದ್ಯಾಲಯದ ಮುಖ್ಯಸ್ಥರಾದ ಬಿ.ಕೆ. ದಾನೇಶ್ವರಿ ತಿಳಿಸಿದರು.

ಜೈ ಹಿಂದ್ ಪ್ರತಿಷ್ಠಾನ ಋಗ್ವೇದಿ ಯೂತ್ ಕ್ಲಬ್ ನಗರದ ಜೈಹಿಂದ್ ಕಟ್ಟೆಯಲ್ಲಿ ಕನ್ನಡಾಂಬೆಗೆ ಕನ್ನಡದಾರತಿ, ಕನ್ನಡ ರಂಗೋಲಿ, ಕನ್ನಡದ ಜ್ಯೋತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತ ನಾಡುತ್ತ ಕನ್ನಡತನ, ಕನ್ನಡದ ಚಿಂತನೆ, ಕನ್ನಡದ ಯೋಚನೆ ಪ್ರತಿಯೊಬ್ಬರಲ್ಲೂ ಮೂಡಿದಾಗ ಭಾಷೆ ಉನ್ನತವಾಗಿ ಬೆಳೆಯಲಿದೆ. ಭಾಷೆಗೆ ಬಳಕೆ ಮುಖ್ಯ. ಬಳಕೆಯಾಗದೆ ಇದ್ದಾಗ ಭಾಷೆ ತನ್ನ ಶಕ್ತಿಯನ್ನು ಕಳೆದುಕೊಳ್ಳುತ್ತದೆ. ಹಾಗಾಗಿ ಮನೆ ಮನೆಯಲ್ಲೂ ಕನ್ನಡದ ಆತ್ಮ ಜ್ಯೋತಿಯನ್ನು ಬೆಳಗಿಸುವ ಮೂಲಕ ಕನ್ನಡದ ಭಾಷೆಯನ್ನು ನಾವು ಬಳಸೋಣ ಎಂದರು.

ನಿವೃತ್ತ ಮುಖ್ಯ ಶಿಕ್ಷಕಿ ವಿಜಯಲಕ್ಷ್ಮಿ ಮಾತನಾಡಿ ಕನ್ನಡದ ಇತಿಹಾಸ ಸಾವಿರಾರು ವರ್ಷಗಳ ಇತಿಹಾಸವಿದೆ. ಕದಂಬರು, ಗಂಗರು, ಹೊಯ್ಸಳರು, ಆಳಿದ ನಾಡು. ಜ್ಞಾನ ಪೀಠ ಪ್ರಶಸ್ತಿಗಳ ನಾಡು ಕರ್ನಾಟಕವಾಗಿದೆ. ಸರಸ್ವತಿ ಸಮ್ಮಾನ್ ಪ್ರಶಸ್ತಿ ಪಡೆದ ಭೈರಪ್ಪನವರು ನಮ್ಮ ಕರ್ನಾಟಕದವರು ಎಂಬುದು ಹೆಮ್ಮೆ. ಸಾಹಿತ್ಯವೇ ಜೀವನ. ಪುಸ್ತಕಗಳ ಅಧ್ಯಯನದ ಮೂಲಕ ಕನ್ನಡ ಸಾಹಿತ್ಯವನ್ನು ಉಳಿಸೋಣ ಎಂದರು.

ಕವಿಯತ್ರಿ ಸಿಎಸ್ ಮಂಜುಳಾ ಮಾತನಾಡಿ, ಕನ್ನಡ ರಾಜ್ಯೋತ್ಸವ ಕನ್ನಡಿಗರ ಬೆಳಕಾಗಿ ಕನ್ನಡದ ಸ್ಫೂರ್ತಿಯನ್ನು ತುಂಬುವ ಕಾರ್ಯಕ್ರಮವಾಗಿ ರೂಪುಗೊಳ್ಳಬೇಕು. ಅನೇಕ ತಪಸ್ವಿಗಳ ಹಿನ್ನೆಲೆಯಲ್ಲಿ ಕನ್ನಡ ಶಾಶ್ವತವಾಗಿ ಉಳಿದು ಬೆಳೆದು ಬರುತ್ತಿದೆ ಎಂದರು.

ಜೈ ಹಿಂದ್ ಪ್ರತಿಷ್ಠಾನದ ಅಧ್ಯಕ್ಷರಾದ ಸುರೇಶ್ ಎನ್.ಋಗ್ವೇದಿ ಅಧ್ಯಕ್ಷತೆ ವಹಿಸಿ ಮಾತನಾಡಿ ಚಾಮರಾಜನಗರ ಜಿಲ್ಲೆ, ಕರ್ನಾಟಕದಲ್ಲಿ ಅತಿ ಹೆಚ್ಚು ಕನ್ನಡವನ್ನು ಬಳಸುವ ಜಿಲ್ಲೆಗಳಲ್ಲಿ ಒಂದಾಗಿದೆ. ಚಾಮರಾಜನಗರ ಗಡಿ ಜಿಲ್ಲೆಯಲ್ಲಿದ್ದರು ಕನ್ನಡದ ಸಂಸ್ಕೃತಿ, ಪರಂಪರೆ, ಹಬ್ಬಗಳು, ಉತ್ಸವಗಳು ಎಲ್ಲವನ್ನು ಆಚರಿಸಿಕೊಂಡು ಕನ್ನಡದ ವಾತಾವರಣವನ್ನು ಉಂಟು ಮಾಡಿದೆ. ಕರ್ನಾಟಕ ಸರ್ಕಾರ ಕರ್ನಾಟಕ ಸುವರ್ಣ ಸಂಭ್ರಮ ಕಾರ್ಯಕ್ರಮವನ್ನು ಒಂದು ವರ್ಷಗಳ ಕಾಲ ನಿರಂತರವಾಗಿ ನಡೆಸುತ್ತಿದೆ. ಕನ್ನಡವೇ ನಮ್ಮ ಉಸಿರು ಎಂಬಂತೆ ಕನ್ನಡದ ವಾತಾವರಣವನ್ನು ಸೃಷ್ಟಿ ಮಾಡೋಣ. ಕನ್ನಡದ ಜ್ಯೋತಿಯನ್ನು ಬೆಳಗಿಸಿ ಮನೆಮನೆಯಲ್ಲೂ ಕನ್ನಡದ ವಾತಾವರಣವನ್ನು ಉಂಟು ಮಾಡಿ ಸಂತೋಷ, ಸಡಗರ, ಸಂಭ್ರಮದ ಮೂಲಕ ಸ್ಫೂರ್ತಿಯನ್ನು ತುಂಬುವಂತಹ ಕಾರ್ಯಕ್ರಮವನ್ನು ಎಲ್ಲರೂ ಸೇರಿ ಮಾಡೋಣ ಎಂದು ತಿಳಿಸಿದರು. ರಂಗೋಲಿಯ ಮೂಲಕ ಕನ್ನಡದ ಸ್ಫೂರ್ತಿಯ ಕಾರ್ಯ ಜರುಗಿತು.

ಕಾರ್ಯಕ್ರಮದಲ್ಲಿ ನಾಟ್ಯಕಲಾ ಸರಸ್ವತಿ ಸಂಸ್ಥೆಯ ಅಧ್ಯಕ್ಷರಾದ ಡಾ. ಅಕ್ಷತಾ ಜೈನ್, ಜೈಹಿಂದ್ ಪ್ರತಿಷ್ಠಾನದ ಕುಸುಮ ಋಗ್ವೇದಿ, ಮಾಲ, ನಾಗಶ್ರೀ, ಋಗ್ವೇದಿ ಯೂತ್ ಕ್ಲಬ್ ಅಧ್ಯಕ್ಷ ಶರಣ್ಯ ಋಗ್ವೇದಿ, ಸಾನಿಕ, ಮಾಲತಿ, ಶ್ರಾವ್ಯ ಬಿಕೆ ಆರಾಧ್ಯ, ಶ್ರಾವ್ಯ, ಸಿಂಚನ ಉಪಸ್ಥಿತರಿದ್ದರು.

## ನಾಳೆ ಮೈಸೂರಿನಲ್ಲಿ ವಿಕಲಚೇತನರಿಗೆ ಉಚಿತ ಶಿಬಿರ

### ಮಾಡ್ಯುಲರ್ ಕೃತಕ ಅಂಗಗಳು, ಕೈ, ಕಾಲಿನ ಅಂಗಗಳ ಮಾಪನ

ಚಾಮರಾಜನಗರ ನ.3 ಲಯನ್ಸ್ ಸಂಸ್ಥೆ, ಜೈನ್ ಮಿಲನ್ ಚಾರಿಟಬಲ್ ಟ್ರಸ್ಟ್ ಮೈಸೂರು, ಶ್ರೀ ಗುರು ಪುಷ್ಕರ ಜೈನ ಸೇವಾ ಸಮಿತಿ ಬಳ್ಳಾರಿ, ನಾರಾಯಣ ಸೇವಾ ಸಂಸ್ಥೆ ಇವರ ಸಹಯೋಗದೊಂದಿಗೆ ಭಾನುವಾರ (ನ.5) ಬೆಳಿಗ್ಗೆ 9ಗಂಟೆಯಿಂದ ಸಂಜೆ 5 ಗಂಟೆವರೆಗೆ ಮೈಸೂರು ಜೆ.ಎಸ್.ಎಸ್. ಆಸ್ಪತ್ರೆ ಹತ್ತಿರವಿರುವ ನಟರಾಜ ಪ್ರಾರ್ಥನ ಮಂದಿರದಲ್ಲಿ ಮಾಡ್ಯುಲರ್ ಕೃತಕ ಅಂಗಗಳು ಕೈ ಮತ್ತು ಕಾಲಿನ ಅಂಗಗಳ ಮಾಪನ ನೀಡುವ ಸಲುವಾಗಿ ವಿಕಲ ಚೇತನರಿಗೆ ಉಚಿತ ಶಿಬಿರ ಏರ್ಪಡಿಸಲಾಗಿದೆ.

ಉಚಿತ ಶಸ್ತ್ರ ಚಿಕಿತ್ಸೆಗೆ ಒಳಗಾಗುವವರು ಆಧಾರ್ ಕಾರ್ಡ್, ಅಂಗವಿಕಲರ ಪೂರ್ಣ ಭಾವಚಿತ್ರ, ಅಂಗವಿಕಲತೆಯ ಪ್ರಮಾಣ ಪತ್ರ, (ವೈದ್ಯಕೀಯ ಪ್ರಮಾಣ ಪತ್ರ) ದಾಖಲೆಗಳನ್ನು ತರತಕ್ಕದ್ದು, ಉಚಿತ ನೊಂದಣಿ ಹಾಗೂ ಮಾಹಿತಿಗಾಗಿ ಮೊ.ನಂ– 9449805719, 8971704647, 9845284727, 79755718133, 9342188160, 9945243544, 8105352524 ಸಂಪರ್ಕಿಸಲು ಕೋರಲಾಗಿದೆ.

## 52ನೇ ದಿನಕ್ಕೆ ಕಾಲಿಟ್ಟ ಕಾವೇರಿ ಪ್ರತಿಭಟನೆ



ಚಾಮರಾಜನಗರ, ನ.3– ತಮಿಳುನಾಡಿಗೆ ಕಾವೇರಿ ನೀರು ಹರಿಸುತ್ತಿರುವ ಕ್ರಮವನ್ನು ಖಂಡಿಸಿ ಕರ್ನಾಟಕ ಸೇನಾ ಪಡೆ ವತಿಯಿಂದ ನಗರದಲ್ಲಿ ಕಳೆದ 52 ದಿನಗಳಿಂದ ನಿರಂತರವಾಗಿ ಪ್ರತಿಭಟನೆ ನಡೆಸುತ್ತಿದ್ದು ಇಂದು ಕೂಡ ದುರ್ಬೀನು ಹಾಕಿಕೊಂಡು ವಿನೂತನ ಪ್ರತಿಭಟನೆ ನಡೆಸಲಾಯಿತು.

ನಗರದ ಶ್ರೀಚಾಮರಾಜೇಶ್ವರ ಉದ್ಯಾನವನದ ಮುಂಭಾಗದಲ್ಲಿ ಕರ್ನಾಟಕ ಸೇನಾಪಡೆ ಅಧ್ಯಕ್ಷ ಚಾ.ರಂ.ಶ್ರೀನಿವಾಸ ಗೌಡ ಅವರ ನೇತೃತ್ವದಲ್ಲಿ ಜಮಾಯಿಸಿದ ಪ್ರತಿಭಟನಾನಿತರು ಅಲ್ಲಿಂದ ಮೆರವಣಿಗೆ ಹೊರಟು ಭುವನೇಶ್ವರಿ ವೃತ್ತಕ್ಕೆ ತೆರಳಿ ರಾಷ್ಟ್ರೀಯ ಹೆದ್ದಾರಿಯಲ್ಲಿ ದುರ್ಬೀನು ಹಾಕಿಕೊಂಡು ಕೇಂದ್ರ ಮತ್ತು ರಾಜ್ಯ ಸರ್ಕಾರ, ತಮಿಳುನಾಡು ಸರ್ಕಾರ, ಕಾವೇರಿ ನೀರು ನಿರ್ವಹಣಾ ಮಂಡಳಿ ವಿರುದ್ಧ ಧಿಕ್ಕಾರದ ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನೆಯಲ್ಲಿ ಶಾ.ಮುರಳಿ, ಚಾ.ವೆಂ.ರಾಜ್ ಗೋಪಾಲ್, ಪಣ್ಯದಹುಂಡಿ ರಾಜು, ಚಾ.ಹ.ರಾಮು, ಮಹೇಶ್ ಗೌಡ, ಸೋಮವಾರಪೇಟೆ ಮಂಜು, ನಂಜುಂಡಸ್ವಾಮಿ, ಲಿಂಗರಾಜು, ಚಾ. ಗು.ಪುರುಷೋತ್ತಮ್, ವೀರಭದ್ರ, ತಾಂಡವಮೂರ್ತಿ, ರಾಜಪ್ಪ, ಮೂಡ್ಲು ಪುರಪ್ರಕಾಶ್, ಇತರರು ಹಾಜರಿದ್ದರು.

# ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ

ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

### ಬೇಕಾಗಿದ್ದಾರೆ
ಟೆಲಿಕಾಲಿಂಗ್ ಮಾಡಲು ಹುಡುಗಿಯರು ಬೇಕಾಗಿದ್ದಾರೆ (ಕನ್ನಡ)
ಸ್ಥಳ : ಚಾಮುಂಡಿಪುರಂ ಮತ್ತು ಎನ್.ಆರ್.ಮೊಹಲ್ಲಾ
ಸಂಬಳ: 8000 ರಿಂದ 11000ರವರೆಗೆ
ಮೊಬೈಲ್ ನಂಬರ್
**8150005111**

### SITE FOR SALE
Urgent site sale in Kuberananda Sagara 1st Phase 30x40 East face good location near ilaval Bus stand
Contact:
**8951144240**

### ಕಮರ್ಷಿಯಲ್ ಲ್ಯಾಂಡ್ ಬಾಡಿಗೆಗೆ ಇದೆ
ಮೈಸೂರು ಮತ್ತು ಊಟಿ N.H. 766 ಹೆದ್ದಾರಿ ರಸ್ತೆಯ ಹಿರಿಕಾಟಿಯಲ್ಲಿ 1.2 ಎಕರೆ ವಾಣಿಜ್ಯ ಭೂಮಿ (Commercial Land) ಬಾಡಿಗೆಗೆ ದೊರೆಯುತ್ತದೆ.
ಸಂಪರ್ಕಿಸಿ:
**Mob: 9845776482**

### ಬೇಕಾಗಿದ್ದಾರೆ
ಅನುಭವವುಳ್ಳ ಸೆಕ್ಯೂರಿಟಿ ಗಾರ್ಡುಗಳು ಬೇಕಾಗಿದ್ದಾರೆ. ಲಲಿತಾದ್ರಿಪುರ, ಆಲನಹಳ್ಳಿ, ಚಿಕ್ಕಳ್ಳಿ, ಉತ್ತನಹಳ್ಳಿ, ರಾಜ್‌ಕುಮಾರ್ ರಸ್ತೆ ಸುತ್ತ ಮುತ್ತ ಇರುವ ಪ್ರದೇಶಗಳಿಗೆ
ಎಸ್.ಎಸ್.ಎಲ್.ಸಿ ಪಾಸ್ ಅಥವಾ ಫೇಲ್
**9686120629**

### HOUSE FOR RENT
4 BHK
(Office, Godown, Coaching Centre)
**9945249855**
**9742856175**

### ಬಾಡಿಗೆಗೆ
ಕಛೇರಿ, ವಾಣಿಜ್ಯ, ಬ್ಯಾಂಕ್ ನೆಲ ಮಳಿಗೆ 1000Sqft. ಮೊದಲ ಮಹಡಿ 2000Sqft. ನಿರ್ಮಲ ಆಸ್ಪತ್ರೆ (Old) ಹತ್ತಿರ ಟಿ.ನರಸೀಪುರ ಮೇನ್ ರಸ್ತೆ, ಗಿರಿದರ್ಶಿನಿ ಬಡಾವಣೆ, ಆಲನಹಳ್ಳಿ ಮೈಸೂರು–28
**9964346133**
**8310856790**

### ಹೊಸ ಮನೆ ಮಾರಾಟಕ್ಕಿದೆ
40x60 - East facing, 60 ft. Road, 4 bedroom (all attached) as per Vaasthu at 1st Main, 1st Stage, Vijayanagar, Mysore. Price: Rs. 3.7 Cr. (Slightly negotiable).
**Mob: 9606160320**

### SITE FOR SALE
40x60
West facing in Lal Bahadur Shastri Nagar
(MUDA allotment)
**7411516768**

### ಬೇಕಾಗಿದ್ದಾರೆ
ಚೆನ್ನಪಟ್ಟಣದಲ್ಲಿ ಸೆಕ್ಯೂರಿಟಿ ಗಾರ್ಡ್ ಕೆಲಸಕ್ಕೆ ಬೇಕಾಗಿದ್ದಾರೆ.
**9448044290**
**9945362868**

### ಫ್ರಿಡ್ಜ್, ವಾಷಿಂಗ್ ಮಷಿನ್, ಮೈಕ್ರೋ ಓವನ್,
LCD, LED TVs
Doorstep Service
**Mob: 9886226672**

### ನಿವೇಶನಗಳು ಮಾರಾಟಕ್ಕಿದೆ
ಸಾತಗಳ್ಳಿ, ಮಾನಸಿನಗರ, ಬನ್ನೂರು ರೋಡ್, ಲಾಲ್‌ಬಹದ್ದೂರ್ ಶಾಸ್ತ್ರಿನಗರ
20x30, 30x40, 40x60
**7022252235**

### ನಿರ್ಮಲ ಸರ್ವೀಸ್
ಸಂಪು
ಕ್ಲೀನಿಂಗ್‌ಗಾಗಿ ಸಂಪರ್ಕಿಸಿ:
**6364079244**

### 9/11A ಹಾಗೂ 11B ಖಾತೆಗಳಿಗೆ ಲೋನ್ ಮಾಡಿಕೊಡಲಾಗುವುದು
ಶೀಟಿನ ಮನೆ, ಹೆಂಚಿನ ಮನೆ, ಆರ್‌ಸಿಸಿ ಮನೆ ಮೇಲೆ ಸಾಲ ಮತ್ತು ಮನೆ ಖರೀದಿಸಲು, ಮನೆ ನವೀಕರಣ ಮಾಡಲು ಬ್ಯಾಂಕ್ ಲೋನ್ ಮಾಡಿಕೊಡಲಾಗುವುದು
**9008504456**

### ಆಫೀಸ್ ರೂಮ್ ಬಾಡಿಗೆಗೆ ಇದೆ
2ನೇ ಮೇನ್, 11ನೇ ಕ್ರಾಸ್, ಜಯನಗರ, ಮೈಸೂರು
(ಮಧ್ಯವರ್ತಿಗಳಿಗೆ ಅವಕಾಶವಿಲ್ಲ)
**9448087409**

### WANTED MUDA SITES FROM DIRECT OWNERS
Dimension: 30x40 (North, West & East) Location : Ramkrishna Nagara, Kuvempunagar, JP Nagar, SBM Layout for Purchase in Mysore
**8095444834**

### ಬೇಕಾಗಿದ್ದಾರೆ
ಮೈಸೂರಿನ ವಿಜಯನಗರ ಬಡಾವಣೆ 2ನೇ ಹಂತ ಇಲ್ಲಿಗೆ ಹಗಲು ಕೆಲಸ 12 ಗಂಟೆ Duty ಮಾಡಲು 45 ವರ್ಷ ಮೇಲ್ಪಟ್ಟ ವಯಸ್ಸಿನ ಪುರುಷ ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ.
**9731976148**

### ಸಂಪು ಮತ್ತು ಟ್ಯಾಂಕ್
ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
**Mob: 9108566022**

### ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
**7406375196, 9880548596**

### FOR RENT OR LEASE
15000 sq.ft., 60x220
with Bore, Bannur Main Road, Opp. Vidya Vikas College, near Devegowda Circle.
**Call: 98809 29323**

### ಸೋಫಾ ರಿಪೇರ್ಸ್ ಅಂಡ್ ವರ್ಕ್ಸ್
**9591012944**

### ಹೋಟೆಲ್ ಕೆಲಸಕ್ಕೆ ಬೇಕಾಗಿದ್ದಾರೆ
1. ದೋಸೆ ಭಟ್ಟರು – 20,000/-
2. ಇಡ್ಲಿ-ವಡೆ ಭಟ್ಟರು – 15,000/-
3. ಕಾಫಿ/ಟೀ – 15,000/-
4. ಕೌಂಟರ್ ಹುಡುಗರು – 11,000/-

ಇಎಸ್‌ಐ, ಪಿಎಫ್ ಹಾಗೂ ವಸತಿ ಸೌಲಭ್ಯವಿದೆ, ಸಂಪರ್ಕಿಸಿ
**6362847848**

### WANTED
Office Assistant - Male/Female
SSLC/PUC/Degree - Pass / Fail
Required Marketing Managar for Marketing Products
Any Interested Candidates Please Contact
**9342256526**

### ಶಿಕ್ಷಕ/ಶಿಕ್ಷಕಿಯರು ಬೇಕಾಗಿದ್ದಾರೆ
NST - 02
DE - 02
CPE - 01
**8147472526**
**6360942194**

### ಸಂಪು ಟ್ಯಾಂಕ್ ಕ್ಲೀನಿಂಗ್
ಸಂಪರ್ಕಿಸಿ:
**8861612486**

### ಅಂಗಡಿಗೆ ಹುಡುಗರು ಕೆಲಸಕ್ಕೆ ಬೇಕಾಗಿದ್ದಾರೆ
ವಯಸ್ಸು – 18 ರಿಂದ 30 ವರ್ಷ
ಸಂಬಳ: ರೂ. 10000/– ರಿಂದ 14000/–
R.G. Royal Form Pvt.
# 2383, K-16, 6th Cross, Madhavachar Road, Nanjumalige, K.R.Mohalla, Mysore-04
**8660132695**

### ಕೇರಳ ಶ್ರೀ ಪ್ರಸಿದ್ಧ ಜ್ಯೋತಿಷ್ಯರು
Famous Astrologer
ಪಂಡಿತ್ ಸಂತೋಷ್. 9741250896
ಕಾಣತೂರ್ ನಾಲ್ವರ ದೈವ, ಕಲ್ಲುಟಿ ಭಗವತಿ ಶಕ್ತಿಯಿಂದ ದಾಂಪತ್ಯ ಸಮಸ್ಯೆ, ಲೈಂಗಿಕ ಸಮಸ್ಯೆ, ಸ್ತ್ರೀ ಪುರುಷ ಪ್ರೇಮ ವಿಚಾರ, ಶತ್ರು ಬಾಧೆ, ಹಣಕಾಸಿನ ತೊಂದರೆ, ಮಾನಸಿಕ ಚಿಂತೆ, ಪ್ರೇತ ಬಾಧೆ, ವಿದೇಶ ಪ್ರಯಾಣ ಇನ್ನೂ ಮುಂತಾದ ಯಾವುದೇ ಕಠಿಣ ಸಮಸ್ಯೆಗಳಿಗೆ 3 ದಿನದಲ್ಲಿ ಶಾಶ್ವತ ಪರಿಹಾರ ಮಾಡಿಕೊಡುತ್ತಾರೆ.
ಖಾಯಂ ವಿಳಾಸ: ವಿನಯ ಮಾರ್ಗ ರಸ್ತೆ, ಶ್ರೀ ಸಿದ್ಧಿವಿನಾಯಕ ದೇವಸ್ಥಾನದ ಎದುರು, ಬ್ಯಾಂಕ್ ಆಫ್ ಬರೋಡ ಪಕ್ಕ, ಸಿದ್ಧಾರ್ಥ ನಗರ, ಮೈಸೂರು

### ಕೇರಳ ಶ್ರೀ ಪ್ರಸಿದ್ಧ ಮಹಾ ಮಾಂತ್ರಿಕ ಜ್ಯೋತಿಷ್ಯರು, ನಂ.1 ಮೋಡಿ ತಜ್ಞರು
ಪಂಡಿತ್ ಕೆ.ಎಸ್.ಕೃಷ್ಣಮೂರ್ತಿ
ಮೊ.: 9741806990
ತಾಯಿ ಚಾಮುಂಡೇಶ್ವರಿ ಕಾಣತೂರೆ ನಾಲ್ವರ ದೈವ ಚೌಡನ್ ಕರೆ ಭಗವತಿ ಮಹಾ ಮಾಂತ್ರಿಕ ಶಕ್ತಿಯಿಂದ ಲೈಂಗಿಕ, ದಾಂಪತ್ಯ, ಸ್ತ್ರೀ ಪುರುಷ ಪ್ರೇಮ ವಿಚಾರ, ಕೋರ್ಟ್ ಕಚೇರಿ, ಹಣಕಾಸಿನ ತೊಂದರೆ, ವಿವಾದ, ಮನೆಯಲ್ಲಿ ಅಶಾಂತಿ, ಮಾನಸಿಕ ಚಿಂತೆ, ಇನ್ನೂ ಮುಂತಾದ ಸಮಸ್ಯೆಗಳಿಗೆ 3 ದಿನದಲ್ಲಿ ಪರಿಹಾರ ಶತಸಿದ್ಧ. ಖಾಯಂ ವಿಳಾಸ: ಸುಬರ್ಬ್ ಬಸ್‌ಸ್ಟ್ಯಾಂಡ್ ಪಕ್ಕ, ಇರ್ವಿನ್ ರೋಡ್, ಆಂಧ್ರ ಶೈಲಿ ನಂದಿನಿ ಹೋಟೆಲ್ ಹಿಂಭಾಗ, ಮಾರುತಿ ಸುಜುಕಿ ಆಟೋ ಮೊಬೈಲ್ ಪಕ್ಕ ಮನೆಯಲ್ಲಿ ನೆಲೆಸಿದ್ದಾರೆ. ಹಳ್ಳೇರಿ, ಮೈಸೂರು ಇಲ್ಲಿ ಹೇಳುವ ವಿಚಾರಗಳನ್ನು ಗುಪ್ತವಾಗಿ ಇಡಲಾಗುತ್ತದೆ.

### ಉತ್ತಮ ಅವಕಾಶ
ಮನೆಯಲ್ಲಿ ಬಟ್ಟೆ ವ್ಯಾಪಾರ ಮಾಡಲು ನಮ್ಮಲ್ಲಿ ಹೋಲ್ ಸೇಲ್ ದರದಲ್ಲಿ ಎಲ್ಲಾ ರೀತಿಯ ಸೀರೆಗಳು ಮತ್ತು ಎಲ್ಲಾ ರೀತಿಯ ಬಟ್ಟೆಗಳು ಸಿಗುತ್ತದೆ ಒಮ್ಮೆ ಭೇಟಿ ನೀಡಿ
Call After 10.30 AM
**9986731199**

### WANTED TEACHERS
We are looking for Hindi, Computer, Science and Maths Teacher
Immediate Joining
**9964654886**
**7676522224**

### JNANAJYOTHI VIDYALAYA (HPS), BEERIHUNDI
1Std to 3rd Maths and EVS Teacher-1, 4std to 8th Std Teacher-1, DEd, BEd, or any degree candidates are contact immediately.
**9845390377**
**8197057626**

### ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
**8884439666**

### Sudarshan Saur

ಸೇಲ್ಸ್ & ಸರ್ವೀಸ್
10 ವರ್ಷಗಳ ಗ್ಯಾರಂಟಿ
ATTRACTIVE OFFER
Bajaj Finserv Available
SUNZONE SOLAR SYSTEM
Vishwamanava Double Road, Kuvempunagar, Mysuru
**9845175443**

### WANTED
ಹೆಲ್ಪರ್ಸ್ ಹುಡುಗರು
ಐಟಿಐ ಎಲೆಕ್ಟ್ರಿಕಲ್ಸ್ ಆದವರಿಗೆ ಆದ್ಯತೆ
ದ್ವಿಚಕ್ರ ವಾಹನ ಹೊಂದಿರಬೇಕು
ವಯಸ್ಸು 18–25 ವರ್ಷ
ಸರಸ್ವತಿಪುರಂ, ಮೈಸೂರು
**98808 28999**

### ಕುಡಿತದ ಚಟದಿಂದ ಮುಕ್ತರಾಗಬೇಕೆ ?
ಮೈಸೂರಿನ ಚೈತನ್ಯ ಫೌಂಡೇಷನ್ ವತಿಯಿಂದ ಕುಡಿತ ಮತ್ತು ಮಾದಕ ವಸ್ತು ವ್ಯಸನದಿಂದ ಬಳಲುತ್ತಿರುವವರನ್ನು ಚಟದಿಂದ ಮುಕ್ತಗೊಳಿಸಲಾಗುತ್ತದೆ. ವೈದ್ಯರಿಂದ ಚಿಕಿತ್ಸಾ ಸೌಲಭ್ಯ, ಯೋಗ, ಧ್ಯಾನದೊಂದಿಗೆ ಆಪ್ತಸಮಾಲೋಚನೆ ಸಿಗಲಿದೆ. (ಕಮಿಷನ್ ಆಧಾರದಲ್ಲಿ ಉದ್ಯೋಗ ಲಭ್ಯವಿದೆ). ಹೆಚ್ಚಿನ ಮಾಹಿತಿಗೆ
**9164469570, 6361744190**

### Change of Name
I, Savithri Alias Gayathri, W/o S. Manjunath, residing at #163, 2nd Cross, Vijayanagar Railway Layout, Metagalli Post, Mysuru-570 016 have changed my name from Savithri alias Gayathri to Savithri Lakshmipathy vide affidavit sworn before Notary C. Mangala, Mysore dated 30-10-2023.
Sd/- Savithri Lakshmipathy

### SITE FOR SALE
Alanahalli Corporation Site
35x30
2500/-psq.ft
**9945033366**

### ಸೈಟುಗಳು ಬೇಕಾಗಿದೆ
ಎಲ್ಲಾ ಅಳತೆಯ ಮುಡಾ (MUDA) ಸೈಟುಗಳು ದಟ್ಟಗಳ್ಳಿ (ಕನಕದಾಸನಗರ) ದೇವನೂರು, ಜೆ.ಪಿ.ನಗರ, ಪೊಲೀಸ್ ಬಡಾವಣೆ, ಲಾಲ್ ಬಹದ್ದೂರು ಶಾಸ್ತ್ರಿ ನಗರ, ಶಾಂತವೇರಿ ಗೋಪಾಲಗೌಡ ಹಾಗೂ ಕುವೆಂಪುನಗರದಲ್ಲಿ ಬೇಕಾಗಿದೆ.
ಗಂಜಾಂ ಪ್ರಾಪರ್ಟೀಸ್
ಮಾಲೀಕರು ಸಂಪರ್ಕಿಸಿ:
**7411501819**

### AFFIDAVIT
I, Raju, S/o Eregowda, residing at #1269, KRS Main Road, Hosa Ananduru, Near Mahalakshmi School, Belagola, Mandya-571606. I declare that my correct name is Raju in my Aadhar Car No. 7449 6202 9717, Pan Card and other document it is mentioned correctly as Raju. But at the time of issuing my PF records (UAN No. 100676897626) my name was mentioned as Rajanna. Hence I make this affidavit in front of Notary C. Mangala on 28-10-2023 on oath Raju and Rajanna both names belong to my name and same one person.
Sd/- Raju

### Change of Name
I, Saroj Kumari Kedia (new name) wife of Manoj Kumar Kedia, aged about 37 years, residing at #12, Preethi Layout, Lingabudi Palya, Srirampura, Kuvempunagara, Mysore-570 023, Karnataka (Aadhar No. 284134109735) renounce and abandon the use of my farmer name of Saroj Kedia, out of my own free will and desire. I hereby declare that, henceforth my name shall be Saroj Kumari Kedia, vide Notarized affidavit dated (2-11-2023) before Notary Kanyakumari R., Mysuru.
Sd/- Saroj Kumari Kedia

### ಶ್ರೀ ಮಹಾಲಕ್ಷ್ಮಿ ಟ್ರಾವೆಲ್ಸ್
21–12–2023: ಗುಜರಾತ್, ನಾಗನಾಥ್, ಸೋಮ್‌ನಾಥ್, ಸರ್ದಾರ್ ವಲ್ಲಭ್‌ಭಾಯ್ ಪಟೇಲ್ ಸ್ಟ್ಯಾಚ್ಯು. 23–11–2023: ಶಿರಡಿ, ಪಂಡರಾಪುರ, ಭೀಮಾಶಂಕರ್, ಕೊಲ್ಲಾಪುರ ಮಹಾಲಕ್ಷ್ಮಿ. 20–11–2023: ಪುರಿ ಜಗನ್ನಾಥ್, ಭುವನೇಶ್ವರ್, ಕೋನಾರ್ಕ್, ಚಂದ್ರಭಾಗ್ ಬೀಚ್. 16–11–2023: ಹೈದರಾಬಾದ್, 4 ದಿನಗಳ ಪ್ಯಾಕೇಜ್.
**9591017782, 9964527782**

### ಕಳೆದಿದೆ
ಎನ್. ಸತೀಶ, #689, 10ನೇ ಮೇನ್, ರಘುಲಾಲ್ ಮೆಡಿಕಲ್ ಹಿಂಭಾಗ, 1ನೇ ಹಂತ, ವಿಜಯನಗರ, ಮೈಸೂರು, ಈ ಮೇಲ್ಕಂಡ ಸ್ವತ್ತಿಗೆ ಸಂಬಂಧಿಸಿದ ಮೂಲ ದಾಖಲಾತಿಗಳಾದ ಮಂಜೂರಾತಿ ಪತ್ರ, ಸ್ವಾಧೀನ ಪತ್ರ, ಟೈಟಲ್ ಡೀಡ್, ಖಾತಾ ಪತ್ರ, ಕಂದಾಯ ಪತ್ರ, ಬಿಲ್ಡಿಂಗ್ ಪ್ಲಾನ್, ಟ್ಯಾಕ್ಸ್ ರಶೀತಿಗಳು ದಿನಾಂಕ 8–9–2023 ರಂದು ಬೆಳಿಗ್ಗೆ 10.30 ಗಂಟೆ ಸಮಯದಲ್ಲಿ ಧನ್ವಂತರಿ ರಸ್ತೆ, ಮೈಸೂರು ಇಲ್ಲಿ ಜೆರಾಕ್ಸ್ ಮಾಡಿಸಲು ಬೈಕ್‌ನಲ್ಲಿ ಬರುತ್ತಿರುವಾಗ ಕಳೆದುಹೋಗಿದೆ. ಸಿಕ್ಕಿದವರು ಸಂಪರ್ಕಿಸಿ:
**Mob: 9945554114**

### Site with House for Sale
East facing site measuring 50x80, S/F, MUDA site "B" Block, J.P. nagar, near Vidyaranyapuram Police Station for sale. No brokers, Cheque payment only. Contact b/w 10 am to 8 pm only.
**9379322274, 9448314766**

### WANTED
Room Boys / Housekeeping Ladies for Lodge
**9743221781**
**8050936432**

### 30X50 SITE FOR SALE
KBL Gardenia Opp. to Rashrothana Public School Next to Vijayanagar 4th Stage
**9448069975**

### DTCP SITES FOR SALE
DTCP Sites
Rs. 699 per sq.ft., Near Jayapura, H.D. Kote Road, Mysore.
**9590491194,9606783264**

### ಉದ್ಯೋಗ ಅವಕಾಶ
ಬಂದ ದಿನವೇ ಕೆಲಸ (ಮಾರ್ಕೆಟಿಂಗ್ ಅಲ್ಲ) ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th SSLC, PUC, ITI, Any Degree ಪಾಸ್ / ಫೇಲ್ ಆದ ಯುವಕ/ಯುವತಿಯರು ಇಂದೇ ಬೇಕಾಗಿದ್ದಾರೆ. ESI/PF ನೊಂದಿಗೆ ಊಟ ವಸತಿಯಿರುತ್ತದೆ.
ಸಂಬಳ+ಓಟಿ 15,200/- to 86,000/-
**9740733021, 9535028750**

### MICROWAVE OVEN SERVICES
Indian / Imported
Call for Microwave Oven Repair
**Mob: 9900237315, 9845963421, 08214266495**

### ಕೊಳ್ಳೇಗಾಲದ ಜ್ಯೋತಿಷ್ಯರು
ಜ್ಯೋತಿಷ್ಯ ರತ್ನ ಮೋಡಿ ಮಾಂತ್ರಿಕ ಪಂ॥ ಎಸ್.ಕೆ. ಪ್ರಶಾಂತ್ ಆಚಾರ್ಯ
ಮೊ: 9740947045
ಸ್ತ್ರೀ ಪುರುಷ ಪ್ರೇಮ, ಸಂತಾನ, ವಿವಾಹ, ದಾಂಪತ್ಯ ಸಮಸ್ಯೆ, ನಾಗದೋಷ, ಕುಜದೋಷ, ದುಷ್ಟಶಕ್ತಿ, ಪ್ರೇತಬಾಧೆ, ಸಾಲಬಾಧೆ, ವ್ಯಾಪಾರದಲ್ಲಿ ತೊಂದರೆ ತನ್ನವರೆ ತನಗೆ ಶತ್ರು ನಿಮ್ಮ ಯಾವುದೇ ಗುಪ್ತ ಹಾಗೂ ಕಠಿಣವಾದ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಮಾಡುತ್ತಾರೆ. ಸ್ಥಳ: ಹೋಟೆಲ್ ಗೋವರ್ಧನ, ಡಾ॥ ರಾಜ್‌ಕುಮಾರ್ ಪಾರ್ಕ್ ಹತ್ತಿರ, ಶ್ರೀ ಹರ್ಷ ರಸ್ತೆ (ಹೊಸ ಸುಮಂಗಲಿ ಸಿಲ್ಕ್ಸ್ ಹತ್ತಿರ), ಮೈಸೂರು.

### ಕೊಳ್ಳೇಗಾಲದ ಜ್ಯೋತಿಷ್ಯರು
ಪಂ. ಎಸ್. ಕುಮಾರಸ್ವಾಮಿ (ಮೋಡಿ ಮಾಂತ್ರಿಕರು)
MOB: 9880583804
ಇವರು ಕೊಳ್ಳೇಗಾಲದ ಚೌಡಿ, ಭೂತರಾಯ ಅಘೋರ ಶಕ್ತಿಯಿಂದ ಸ್ತ್ರೀ ಪುರುಷ ಪ್ರೇಮ, ದಾಂಪತ್ಯ ಸಮಸ್ಯೆ, ಶತ್ರು ದೋಷ, ಸಾಲ ಬಾಧೆ, ಯಾವುದೇ ಸಮಸ್ಯೆಗಳಿಗೆ ಮೋಡಿ ಮಾಂತ್ರಿಕ ಶಕ್ತಿಯಿಂದ ಚೌಡಿ ಮತ್ತು ಭೂತರಾಯನ ಪ್ರಯೋಗದಿಂದ ಎರಡೇ ದಿನದಲ್ಲಿ ಪರಿಹಾರ ಮಾಡಿಕೊಡುತ್ತಾರೆ.
ಖಾಯಂ ವಿಳಾಸ: ಎಟಿಎಂ ಪಕ್ಕ, ಟಿಕೆಟ್ ಬುಕ್ಕಿಂಗ್ ಕೌಂಟರ್ ಹತ್ತಿರ (ರಿಲಾಯನ್ಸ್ ಮಾಲ್) (ಕೆ.ಎಸ್.ಆರ್.ಟಿ.ಸಿ) ಸಬರ್ಬ್ ಬಸ್ ಸ್ಟ್ಯಾಂಡ್, ಮೈಸೂರು–1

### ನಿವೇಶನ ಬೇಕಾಗಿದೆ
ಈ ಕೆಳಕಂಡ ಪ್ರದೇಶದಲ್ಲಿ 30x40 ನಿವೇಶನ ಬೇಕಾಗಿದೆ. ವಾಣಿವಿಲಾಸ/ಪ್ಯಾರಡೈಸ್ ಎನ್‌ಕ್ಲೈವ್ ಬಡಾವಣೆ ವಿದ್ಯಾವಿಕಾಸ ಕಾಲೇಜು ಎದುರು ಬನ್ನೂರು ರಸ್ತೆ, ಮೈಸೂರು
(ಮಧ್ಯವರ್ತಿಗಳಿಗೆ ಅವಕಾಶವಿಲ್ಲ.)
ಆಸಕ್ತ ಮಾರಾಟಗಾರರು ಈ ಕೆಳಕಂಡ ಮೊಬೈಲ್ ಸಂಖ್ಯೆಯನ್ನು ಸಂಪರ್ಕಿಸಿ:
**7019896626**

### CHANGE OF NAME
I, NIMISHAMBA RAOTH, Residing at H.No. 1363, SARKAJI STREET M.H. Road, Mandi Mohalla, Mysore-570001, have Changed my name from NIMISHAMBA to NIMISHAMBA RAOTH on My own free will, sworn in before Notary C.R.SEETHARAM, Mysuru, Vide affidavit dated 11-08-2023
Sd/- NIMISHAMBA RAOTH

### REQUIRED
FEMALE TELECALLERS
Ready to work in financial services. qualification SSLC or PUC with Computer basic knowledge and salary around 8000. work Place : SLV Enterprises # 2060, 2nd floor vaibhav complex, madavachar road, near 101 ganapati temple, agrahara mysore-04
**9513965656/08213539085**

### ಬೇಕಾಗಿದ್ದಾರೆ
ಬಟ್ಟೆ ಅಂಗಡಿಯಲ್ಲಿ ಸೇಲ್ ಮ್ಯಾನ್ ಕೆಲಸ ಮಾಡಲು ಅನುಭವವುಳ್ಳ ಹುಡುಗ, ಹುಡುಗಿಯರು ಬೇಕಾಗಿದ್ದಾರೆ. ಆಕರ್ಷಕ ಸಂಬಳ ESI+PF ಮತ್ತು ಇನ್ಸೆಂಟೀವ್ ಸೌಲಭ್ಯದೊಂದಿಗೆ ಗಾಂಧಿಸರ್ಕಲ್, ಮೈಸೂರು
Call After 10.30 AM
**9980620678**

### ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್
ಜರ್ಮನ್ ಟೆಕ್ನಾಲಜಿ ಬಳಸಿ ಸಂಪು, ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್ ಮಾಡಲಾಗುತ್ತದೆ.
**Mob: 9008711654**

### ಮಾಂತ್ರಿಕ ಕೇರಳ ಶ್ರೀ ಭಗವತಿ ಜ್ಯೋತಿಷ್ಯರು
ಶ್ರೀ ಎಸ್.ಎಸ್.ಪ್ರಸಾದ್ ಪೊದುವಾಳ್
ಮೊ: 9731839596
ಇವರು ಕುಟ್ಟಿಚೇತನ್ ರುದ್ರಿಮಾರ್ತಾಂಡ ದೇವಿ ಭಗವತಿ ಮಳಯಾಳಿ ಮಾಂತ್ರಿಕ ಶಕ್ತಿಯಿಂದ ಸ್ತ್ರೀ ಪುರುಷ, ಪ್ರೇಮ, ದಾಂಪತ್ಯ ಸಮಸ್ಯೆ, ಸಂತಾನ, ದುಷ್ಟಶಕ್ತಿ, ಶತ್ರುಬಾಧೇ, ವ್ಯಾಪಾರ, ಅತ್ತೆ ಸೊಸೆ ಕಿರಿಕಿರಿ, ಸಾಲಬಾಧೇ, ಆರೋಗ್ಯ, ಮಾನಸಿಕ ಚಿಂತೆ, ನಿಮ್ಮ ಯಾವುದೇ ಗುಪ್ತ ಸಮಸ್ಯೆಗಳಿಗೆ ತಕ್ಷಣದಲ್ಲಿ ಪರಿಹಾರ ಶತಸಿದ್ಧ. ಖಾಯಂ ಮನೆ ವಿಳಾಸ– ಮನೆ ನಂ.68, ಸತ್ಯ ಮಾರ್ಗ ಗೀತಾ ಸ್ಕೂಲ್ ಹಿಂಭಾಗ, ಹೊಸ ಡಿ.ಸಿ ಆಫೀಸ್ ಎದುರು, ಸಿದ್ಧಾರ್ಥನಗರ, ಮೈಸೂರು.

### ಸೈಟು ಬೇಕಾಗಿದೆ
ಲಾಲ್ ಬಹದ್ದೂರ್ ಶಾಸ್ತ್ರಿನಗರ, ವಸಂತನಗರ, ಶಾಂತವೇರಿ ಗೋಪಾಲಗೌಡ ನಗರ, ಸಪ್ತ ಮಾತೃಕ ಲೇಔಟ್, ಪೊಲೀಸ್ ಲೇಔಟ್, ಜೆ.ಎಸ್.ಎಸ್. ಲೇಔಟ್
**9844436672**

### WANTED
Accountant (Female)
(Min 2-3yrs Exp. in Auditor office)
Call between 9.30AM to 5.30PM. Mail your C.V : acpltd123@gmail.com
**6366366388**

### ಹೊಸ ಮನೆ ಮಾರಾಟಕ್ಕಿದೆ
ಇಲವಾಲ ಬೈಪಾಸ್ ರಸ್ತೆ ಸೆಂಟ್ ಜೋಸೆಫ್ ಸ್ಕೂಲ್ ಹತ್ತಿರ 30x40 ಅಳತೆಯ ಉತ್ತರ ದಿಕ್ಕಿನ 2BHK ಅಟ್ಯಾಚ್ ಬಾತ್‌ರೂಂ ಹಾಗು ಬೋರ್‌ವೆಲ್ ಇರುವಂತಹ MUDA APPROVED ಮತ್ತು ಬ್ಯಾಂಕು ಸಾಲ ಸೌಲಭ್ಯವಿದೆ.
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:
**9483862050**
**7795316995**

### ವಧು ಬೇಕಾಗಿದ್ದಾರೆ / 2ನೇ ವರ
ಸ್ವಂತ ಉದ್ದಿಮೆ, ಮೈಸೂರಿನಲ್ಲಿ ಚರ–ಸ್ಥಿರಾಸ್ತಿ ವರಮಾನ ರೂ. 50,000. ಸ್ವಂತ–ಮನೆ ಮೈಸೂರಿನಲ್ಲಿ, ಮಕ್ಕಳಿಲ್ಲ, ವಿಚ್ಛೇದಿತ 43, 5.7" ಲಿಂಗಾಯಿತ ವಿವಾಹವಾಗಲು ತಂದೆ–ತಾಯಿ ಇರುವ ಇಲ್ಲದಿರುವ ಬಡವರು ಆಗಿರುವ ಸಂಸಾರದಲ್ಲಿ ಹೊಂದಿಕೊಂಡು ಹೋಗುವ ವಧು ಬೇಕಾಗಿದ್ದಾರೆ. ವರ ಅನುಕೂಲಸ್ಥ. ಮದುವೆ ಬ್ರೋಕರ್‌ಗಳು ನೇರವಾಗಿ ವಿವರ ಮತ್ತು ವರ್ಣರಂಜಿತ ಭಾವಚಿತ್ರದೊಡನೆ ಸಂಪರ್ಕಿಸಿ: ವಯಸ್ಸು ಜಾತಿ ನಿರ್ಬಂಧವಿಲ್ಲ. ಪ್ರಾರಂಭದಲ್ಲಿ ಖರ್ಚಿಗೆ ಆತರೆ ಯಾವ ಹಣವನ್ನು ಕೊಡಲಾಗುವುದಿಲ್ಲ. ಕೆಲಸ ಆದಲ್ಲಿ ರೂ. 15,000 ಕೊಡಲಾಗುವುದು. ಪದವೀಧರ, ಸುಂದರ ನೇರ ಮಾತುಕತೆ. ಪ್ರಾಮಾಣಿಕ ಪ್ರಯತ್ನ ಮುಖ್ಯ.
**Mob: 9945657258 Whatsaap 9900160390**

### WANTED
Office Assistant, Knowledge on Accounting, Typing skills in Kannada (Nudi) and English is mandatory. With the Qualification of B.COM (Minimum 2 Years' of Experience) (Salary as per the Company Norms)
Contact: SWISS PVT LTD, SARASWATHIPURAM, MYSORE
**9164608888, 9844299888**
(Timing 10:00 AM to 6:30 PM)

### SITE FOR SALE
1. Kesare II nd Stage 40x60 East Face
2. Kesare III rd Stage 40x60 West Face
3. 59x70 West Face Fully Commercial Opp. KSRTC Bus Stand

Call After 10.30 AM
**9986731199**

### ಪ್ರಮಾಣ ಪತ್ರ
ತನ್ಮಯಶೆಟ್ಟಿ, ಬಿನ್ ಶ್ರೀ ಮರಿಯಶೆಟ್ಟಿ, ಮನೆ ನಂ. 32, ತಮ್ಮಡಗೇರಿ ಬೀದಿ, ನನ್ನೇಶ್ವರ ದೇವಸ್ಥಾನದ ಹತ್ತಿರ, ಹಿನಕಲ್, ಮೈಸೂರು ತಾಲ್ಲೂಕು ವಾಸವಾಗಿರುವ ನಾನು ನನ್ನ ಹೆಸರು ಹಳೆಯ ದಾಖಲೆಗಳಲ್ಲಿ ತನುಜಾಕ್ಷಿ ಬಿನ್ ಮರಿಯ ಬೋವಿ ಎಂದು ದಾಖಲಾಗಿದೆ ಆದ್ದರಿಂದ ನನ್ನ ಹೆಸರು ತನ್ಮಯಶೆಟ್ಟಿ ಬಿನ್ ಮರಿಯಶೆಟ್ಟಿ ಎಂದು ನೋಟರಿ ಆರ್. ರಾಮಚಂದ್ರ Reg No. 8725 ಅವರ ಮುಂದೆ ಪ್ರಮಾಣೀಕರಿಸುತ್ತೇನೆ. ತನ್ಮಯ ಶೆಟ್ಟಿ ಬಿನ್ ಮರಿಯ ಶೆಟ್ಟಿ, ತನುಜಾಕ್ಷಿ ಬಿನ್ ಮರಿಯ ಬೋವಿ ಒಂದೇ ವ್ಯಕ್ತಿಯಾದ ನನಗೆ ಸೇರಿದ್ದು, ಆದಾಗಿ ನನ್ನ ಬದಲಾವಣೆಯ ಹೆಸರು ತನ್ಮಯ ಶೆಟ್ಟಿ ಬಿನ್ ಮರಿಯ ಶೆಟ್ಟಿ ಎಂದು ಆಗಿದ್ದು, ನೋಟರಿ ಮುಂದೆ ಪ್ರಮಾಣೀಕರಿಸಿದ್ದೇನೆ.
ಸಹಿ/– ತನ್ಮಯ ಶೆಟ್ಟಿ

### ಚಾಮುಂಡೇಶ್ವರಿ ಮ್ಯಾರೇಜ್ ಬ್ಯೂರೋ
ಒಕ್ಕಲಿಗ, ಬ್ರಾಹ್ಮಣ, ಕುರುಬ, ನಾಯಕ, ಆದಿ ಕರ್ನಾಟಕ, ವಿಶ್ವಕರ್ಮ, ಮರಾಠ, ಮಡಿವಾಳ, ತಮಿಳು, ಉಪ್ಪಾರ, ವೀರಶೈವ ಲಿಂಗಾಯತ, ಅರಸು, ಕುರುಹಿನ ಶೆಟ್ಟಿ, ಕೂರ್ಗಿ, ಬಲಿಜ ನಾಯ್ಡು, ಭೋವಿ, ಕುಂಬಾರ, ದೇವಾಂಗ, ಈಡಿಗ ಇನ್ನೂ ಎಲ್ಲಾ ಜಾತಿಯ ಶ್ರೀಮಂತ, ವಿದ್ಯಾವಂತ ವಧುವರರಿಗೆ ಸಂಪರ್ಕಿಸಿ:
(2nd Marriage Also)
**Mob: 8951241381**

### MUDA APPROVED
30X40 & 40X60 Sites For Sale at KRS Road
20x30 & 30x30 Sites For Sale Bogadi Road
**7026901111**

### HOUSES & OFFICE SPACE FOR RENT
@ Saraswathipuram Kuvempunagar & Souroundings
SS PROPERTY SERVICES
(Opp. Kuvempu School)
SS Puram
**9342125252**

### ನೇರ ಸಂದರ್ಶನ
SSLC/PUC / BA/BCOM/OFFICE ASST. HOUSE KEEPING/ MARKETING/ COUNTER SALES BOY/GIRLS HELPER/SECURITY GUARD/DRIVER/PEON
SALARY 12000/15000
2 & 5 YEAR EXPERIENCE
(Call time 10 am to 6 pm)
**9448150408**

### HOUSE FOR LEASE
2 BHK, mosaic flooring, ground floor, University Layout, Near Lingabudi Palya. (3 years lease). Contact:
**Mob: 9008020919**

### ಬೇಕಾಗಿದ್ದಾರೆ
ಸಂತಮರಿನಾ ಆಂಗ್ಲ ಮಾಧ್ಯಮ ಪ್ರೌಢಶಾಲೆ ಎನ್.ಆರ್.ಮೊಹಲ್ಲಾ, ಮೈಸೂರು
ಮಹಿಳಾ ಆಯಾ ಎಸ್.ಎಸ್.ಎಲ್.ಸಿ ಪಾಸ್/ಅನುತ್ತೀರ್ಣ
ಸಂಪರ್ಕಿಸಿ: ಮುಖ್ಯೋಪಾಧ್ಯಯರು
ದಿನಾಂಕ: 06–11–2023
ಸಮಯ: 11.30 AM ರಿಂದ 2.00 PM
ರಾಜೇಂದ್ರ ನಗರ, ಮುಖ್ಯ ರಸ್ತೆ, ಎನ್.ಆರ್.ಮೊಹಲ್ಲಾ, ಮೈಸೂರು
(ಕಾವೇರಿ ಪ್ಯಾಲೇಸ್ ಫಂಕ್ಷನ್ ಹಾಲ್ ಎದುರು

### HOUSE FOR LEASE
Newly Built 2BHK Independent House, Fully Furnished with Solar @ Lalithadri Nagar, Near Ring Road, Behind Indian Oil Petrol Bunk
**9964414484**

### Prakruthi Properties
1) 30x40 30x50 sites 40 feet road 60 feet road 16 lakhs stars HD Kote road ready to registration bank loan 80%
2) 30x40 T.Narasipura road Saptamatruke layout attch
3) 30@40 East site Preethi layout Srirampura
4) 40@60 N police layout
5) 40@60 N ring road facing near Uttanahalli
6) 20@30 g+1 house Srirampura & Dattagalli

Prakruthi Properties
**9538690359,9035990359**

### 30X40 2 SITES FOR SALE
@ OLIVE ENCLAVE
Mys-Blore Highway 4 Km From Columbia Hospital
MUDA Approved 26 Lakh
**9538839926**

### ಹೋಂ ನರ್ಸಿಂಗ್ ಕೆಲಸ
ಮೈಸೂರಿನ ಹೆಸರಾಂತ ಹೆಲ್ ಕೇರ್ ಸಂಸ್ಥೆಗೆ ಹೋಂ ನರ್ಸಿಂಗ್ ಕೆಲಸಕ್ಕೆ, ಯುವತಿಯರು, ಮಹಿಳೆಯರು, ವಿಧವೆಯರು ತಕ್ಷಣವೇ ಸಂಪರ್ಕಿಸಿ, ಊಟ ವಸತಿಯೊಂದಿಗೆ ಸಂಬಳ 12,000–18,000 ಇರುತ್ತದೆ.
(ಸರ್ಕಾರಿ ನೋಂದಾಯಿತಾ ಸಂಸ್ಥೆ)
**9035113222**

### HOUSE FOR SALE
Ready to move in at Prime Location in Mysore City.
20x30, 30x40, 40x60, 50x80
Nammane Constructions, Mysore
**7899559090**
**9986474401**

### ಬೇಕಾಗಿದ್ದಾರೆ
1 ರಿಂದ 2 ವರ್ಷ ಅನುಭವವುಳ್ಳ ಅಕೌಂಟೆಂಟ್ ಬೇಕಾಗಿದ್ದಾರೆ. ಆಸಕ್ತಿವುಳ್ಳವರು ಸಂಪರ್ಕಿಸಿ ಸಮೃದ್ಧಿ ಇನ್ ಕಾರ್ಪೋರೇಷನ್, ಮೈಸೂರು
**9148269114**
**7483942711**

### ಹೋಂನರ್ಸಿಂಗ್ ಸೇವೆ & ಕೆಲಸ
ವೃದ್ಧರು, ರೋಗಿಗಳನ್ನು ಆರೈಕೆ ಮಾಡುವುದಕ್ಕೆ ಅನುಭವವಿರುವ ಹೋಂನರ್ಸ್‌ಗಳನ್ನು ಕಳುಹಿಸಿಕೊಡಲಾಗುವುದು. ಹಾಗೂ ಹೋಂನರ್ಸ್ ಕೆಲಸ ಬೇಕಾದಲ್ಲಿ ಸಂಪರ್ಕಿಸಿ
**9916638542**
**9164445955**

### ಮೈಸೂರು ಮಿತ್ರ — ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 10 ರಲ್ಲಿ

## ಬೈಕ್‌ಗೆ ಟ್ಯಾಂಕರ್ ಡಿಕ್ಕಿ: ಇಬ್ಬರ ಸಾವು

ಮೈಸೂರು, ನ. 3(ಆರ್‌ಕೆ)– ರಾಯಲ್ ಎನ್‌ಫೀಲ್ಡ್ ಬೈಕ್‌ಗೆ ಸರಕು ಸಾಗಣೆ ಟ್ಯಾಂಕರ್‌ವೊಂದು ಡಿಕ್ಕಿ ಹೊಡೆದ ಪರಿಣಾಮ ಸವಾರರಿಬ್ಬರು ಸಾವನ್ನಪ್ಪಿದ ಘಟನೆ ಮೈಸೂರಿನ ಲಲಿತಾದ್ರಿಪುರ ಬಳಿ ತಿ.ನರಸೀಪುರ ರಸ್ತೆ–ರಿಂಗ್ ರೋಡ್ ಜಂಕ್ಷನ್‌ನಲ್ಲಿ ಗುರುವಾರ ರಾತ್ರಿ ಸಂಭವಿಸಿದೆ.

ಮೈಸೂರು ತಾಲೂಕು ಕಮರವಳ್ಳಿ ಮಠ ನಿವಾಸಿಗಳಾದ ನಾಗೇಂದ್ರ(43) ಹಾಗೂ ಶ್ರೀನಿವಾಸ(30) ಸಾವನ್ನಪ್ಪಿದವರು. ಮೈಸೂರಿನಿಂದ ರಾಯಲ್ ಎನ್‌ಫೀಲ್ಡ್ (ಕೆಎ 55–ಇಬಿ 0472) ಬೈಕ್‌ನಲ್ಲಿ ವರುಣ ಕಡೆಗೆ ಹೋಗುತ್ತಿದ್ದಾಗ ಹಿಂದಿನಿಂದ ಬಂದ ಟ್ಯಾಂಕರ್ (ಕೆಎ 04–ಸಿ 3341) ತಿ.ನರಸೀಪುರ ರಸ್ತೆಯ ರಿಂಗ್ ರೋಡ್ ಜಂಕ್ಷನ್ ಬಳಿ ಗುರುವಾರ ರಾತ್ರಿ 10.30 ಗಂಟೆ ವೇಳೆಗೆ ಡಿಕ್ಕಿ ಹೊಡೆಯಿತು. ಪರಿಣಾಮ ತಲೆಗೆ ತೀವ್ರ ಗಾಯಗಳಾದ ನಾಗೇಂದ್ರ ಸ್ಥಳದಲ್ಲೇ ಮೃತಪಟ್ಟರೆ, ಆಸ್ಪತ್ರೆಗೆ ಕರೆದೊಯ್ಯುವಾಗ ಮಾರ್ಗಮಧ್ಯೆ ಶ್ರೀನಿವಾಸ ಕೊನೆಯುಸಿರೆಳೆದರು. ವಿಷಯ ತಿಳಿಯುತ್ತಿದ್ದಂತೆಯೇ ಸ್ಥಳಕ್ಕೆ ಧಾವಿಸಿದ ಸಿದ್ಧಾರ್ಥನಗರ ಸಂಚಾರ ಠಾಣೆ ಇನ್ಸ್‌ಪೆಕ್ಟರ್ ಯೋಗೇಶ್ ಹಾಗೂ ಸಿಬ್ಬಂದಿ ಮಹಜರು ನಡೆಸಿ ಪ್ರಕರಣ ದಾಖಲಿಸಿಕೊಂಡರು. ಕ್ಯಾಂಟರ್ ಮತ್ತು ಚಾಲಕನನ್ನು ವಶಕ್ಕೆ ಪಡೆದಿರುವ ಪೊಲೀಸರು ತನಿಖೆ ಕೈಗೊಂಡಿದ್ದಾರೆ.

ಡಿಸಿಪಿ ಎಸ್. ಜಾಹ್ನವಿ, ಸಂಚಾರ ವಿಭಾಗದ ಎಸಿಪಿ ಪರಶುರಾಮಪ್ಪ ಅವರು ಘಟನಾ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು. ಬೆಳಗ್ಗೆ ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಶವಾಗಾರದಲ್ಲಿ ಮರಣೋತ್ತರ ಪರೀಕ್ಷೆ ನಡೆಸಿದ ಮೃತದೇಹವನ್ನು ಹಸ್ತಾಂತರಿಸಲಾಯಿತು.

# ಬಾಡಿಗೆ ಕೊಟ್ಟ ನನ್ನ ಮನೆಯಲ್ಲಿ ವೇಶ್ಯಾವಾಟಿಕೆ ಸಂಬಂಧ ನಾನೇ ಕೊಟ್ಟ ದೂರಿನನ್ವಯ ಪೊಲೀಸರು ಕ್ರಮ ಕೈಗೊಂಡಿದ್ದಾರೆ

- ನಿವೃತ್ತ ಪೊಲೀಸ್ ಅಧಿಕಾರಿ ಜೆ.ಬಿ.ರಂಗಸ್ವಾಮಿ ಸ್ಪಷ್ಟನೆ
- ಈ ಪ್ರಕರಣಕ್ಕೂ ನನಗೂ ಯಾವ ಸಂಬಂಧವೂ ಇಲ್ಲ
- ಅಮೇರಿಕಾದಲ್ಲಿದ್ದ ನಾನು ಮತ್ತೋರ್ವ ಬಾಡಿಗೆದಾರರ ಮಾಹಿತಿಯಂತೆ ಪೊಲೀಸರಿಗೆ ದೂರು ನೀಡಿದ್ದೆ



ಮೈಸೂರು, ನ.3(ಜಿಎ)–ಬಾಡಿಗೆ ನೀಡಿದ ಮನೆಯಲ್ಲಿದ್ದ ಪಾರ್ಲರ್‌ನಲ್ಲಿ ವೇಶ್ಯಾವಾಟಿಕೆ ನಡೆಯುತ್ತಿರುವ ಬಗ್ಗೆ ತಾವೇ ಪೊಲೀಸರಿಗೆ ದೂರು ನೀಡಿದ ಮೇರೆಗೆ ಪೊಲೀಸರು ದಾಳಿ ಮಾಡಿ ಕ್ರಮ ಕೈಗೊಂಡಿದ್ದಾರೆ. ವೇಶ್ಯಾವಾಟಿಕೆ ನಡೆಯುತ್ತಿದ್ದುದಕ್ಕೂ ತಮಗೂ ಸಂಬಂಧವಿಲ್ಲ ಎಂದು ಹಿರಿಯ ನಿವೃತ್ತ ಪೊಲೀಸ್ ಅಧಿಕಾರಿ ಜೆ.ಬಿ.ರಂಗಸ್ವಾಮಿ ಸ್ಪಷ್ಟಪಡಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪೊಲೀಸ್ ಅಧಿಕಾರಿಯಾಗಿ ಸುದೀರ್ಘ ಸೇವೆ ಸಲ್ಲಿಸಿ ಗೌರವಯುತವಾಗಿಯೇ ತಾವು ನಿವೃತ್ತರಾಗಿದ್ದು, ಈವರೆಗೂ ಯಾವುದೇ ಕಪ್ಪು ಚುಕ್ಕಿ ಇಲ್ಲ. ಕಳೆದ ಆರು ತಿಂಗಳು ಅಮೇರಿಕಾ ಪ್ರವಾಸದಲ್ಲಿದ್ದೆ. ನಾನು ಅಮೇರಿಕಾದಲ್ಲಿದ್ದ ಸಂದರ್ಭದಲ್ಲಿ ಬಾಡಿಗೆಯನ್ನು ನೀಡದೇ ಇದ್ದ ಕಾರಣಕ್ಕಾಗಿ ನಾನು ಮನೆಯ ಮತ್ತೋರ್ವ ಬಾಡಿಗೆದಾರರಾದ ಅಕಾಡೆಮಿಯ ರಾಜಶೇಖರ್ ಎಂಬುವವರಿಗೆ ಕರೆ ಮಾಡಿ ವಿಚಾರಿಸಿದಾಗ, ಅವರು ಪಾರ್ಲರ್‌ನಲ್ಲಿ ನಡೆಯುತ್ತಿರುವ ಅವ್ಯವಹಾರದ ಬಗ್ಗೆ ಮಾಹಿತಿ ನೀಡಿದರು. ಅವರ ಮಾಹಿತಿ ಅನ್ವಯ ಪಾರ್ಲರ್ ನಡೆಸಲು ತಮ್ಮ ಕಟ್ಟಡ ಬಾಡಿಗೆಗೆ ಪಡೆದಿದ್ದ ದೀಪಿಕಾ ಅವರನ್ನು ಪ್ರಶ್ನಿಸಿದಾಗ ಆಕೆಯ ಬಿಸಿನೆಸ್ ಪಾರ್ಟ್‌ನರ್ ಜಯಶ್ರೀ ವೈಮನಸ್ಯದಿಂದ ಈಗ ಬೇರೆಯಾಗಿದ್ದು, ಅವರ ಗಂಡ ನಾಲ್ಕು ತಿಂಗಳ ಹಿಂದೆ ಪಾರ್ಲರಿಗೆ ಬಂದು ಗಲಾಟೆ ಮಾಡಿ ಅಂಗಡಿಯನ್ನು ಮುಚ್ಚಿಸುತ್ತೇನೆ ಎಂದೆಲ್ಲಾ ಧಮಕಿ ಹಾಕಿ ಹೋಗಿರುತ್ತಾನೆ. ಆತನ ಅಪಪ್ರಚಾರವೇ ಇದಕ್ಕೆ ಕಾರಣ. ನಾನು ಯಾವುದೇ ಅನೈತಿಕ ವ್ಯವಹಾರಗಳಲ್ಲಿ ತೊಡಗಿರುವುದಿಲ್ಲ. ಅತ್ಯಂತ ಗೌರವದಿಂದ ಪಾರ್ಲರ್ ನಡೆಸಿಕೊಂಡು ಹೋಗುತ್ತಿದ್ದೇನೆ. ನಾನಿಲ್ಲದ ವೇಳೆ ಮಾಲಾ ಮತ್ತು ಇನ್ನಿಬ್ಬರು ಪಾರ್ಲರ್ ನೋಡಿಕೊಳ್ಳುತ್ತಾರೆ ಇತ್ಯಾದಿಯಾಗಿ ವಿವರಣೆಯನ್ನು ನೀಡಿದ್ದರು ಎಂದು ವಿವರಿಸಿದರು.

ನಾನು ಅಮೇರಿಕಾದಿಂದ ವಾಪಾಸ್ಸಾದ ನಂತರವೂ ಕೆಲವರು ಪಾರ್ಲರ್‌ನಲ್ಲಿ ಅನೈತಿಕ ಚಟುವಟಿಕೆ ನಡೆಯುತ್ತಿರುವ ಬಗ್ಗೆ ಸಂಶಯವಿದೆ ಎಂದು ತಿಳಿಸಿದ ಮೇರೆಗೆ ಅ.10 ರಂದು ಬಾಡಿಗೆದಾರರಾದ ದೀಪಿಕಾ ಮತ್ತು ಜಯಶ್ರೀ ಅವರಿಗೆ 'ಯಾವುದೇ ಕಾರಣಕ್ಕೂ ನಾನು ಬಾಡಿಗೆಗೆ ಕೊಟ್ಟಿರುವ ಸ್ಥಳದಲ್ಲಿ ಅನೈತಿಕ ಚಟುವಟಿಕೆಗಳಾಗಲೀ ಕಾನೂನು ಬಾಹಿರವಾದ ಚಟುವಟಿಕೆಗೆ ಅವಕಾಶ ಕೊಡಕೂಡದು, ಅದು ಸಮಾಜದ ಘನತೆಗೂ ಮತ್ತು ನನ್ನ ಮರ್ಯಾದೆಗೂ ಕುಂದು ಎಂಬುದು ಗೊತ್ತಿರಲಿ ಎಂದು ಎಚ್ಚರಿಕೆ ನೀಡಿ ಮನೆ ಖಾಲಿ ಮಾಡುವಂತೆ ಸೂಚನೆ ನೀಡಿದ್ದೇನೆ ಎಂದು ತಿಳಿಸಿದರು.

ನಂತರ ನಗರ ಪೊಲೀಸ್ ಆಯುಕ್ತರಿಗೆ ಆಲನಹಳ್ಳಿ ಬಡಾವಣೆಯಲ್ಲಿರುವ ನನ್ನ ಮನೆಯ ಮೇಲ್ಭಾಗದ ಹಾಲ್‌ನ್ನು ದೀಪಿಕಾ ಮತ್ತು ಜಯಶ್ರೀ ಎಂಬುವವರಿಗೆ ಬಾಡಿಗೆ ಕೊಟ್ಟಿರುತ್ತೇನೆ ಇನ್ನೊಂದು ಭಾಗವನ್ನು ಅಕಾಡೆಮಿ ಅವರಿಗೆ ಬಾಡಿಗೆ ನೀಡಿದ್ದೇನೆ. ಮನೆಯಲ್ಲಿ ನಾನು, ನನ್ನ ಪತ್ನಿ ಇಬ್ಬರೇ ಇರುವುದು. ನಾನು ಪ್ರವಾಸದ ಪ್ರಯುಕ್ತ ಇತರೆ ಊರುಗಳಿಗೆ ಹೋಗುತ್ತಲೇ ಇರುತ್ತೇನೆ. ಆರು ತಿಂಗಳ ಹಿಂದೆ ಅಮೇರಿಕಾಗೆ ಹೋಗಿ ಕಳೆದ ತಿಂಗಳು ವಾಪಸಾಗಿರುತ್ತೇವೆ.

ಬಾಡಿಗೆದಾರಳಾದ ದೀಪಿಕಾ ಅವರಿಗೂ ತೀವ್ರ ಎಚ್ಚರಿಕೆ ನೀಡಿದ್ದು, ಮನೆ ಖಾಲಿ ಮಾಡುವಂತೆ ತಿಳಿಸಿರುತ್ತೇನೆ. ತಾವು ಈ ಮನೆಯಲ್ಲಿ ನಡೆಯುವ ಚಟುವಟಿಕೆಗಳ ಮೇಲೆ ನಿಗಾವಹಿಸಿ, ಕಾನೂನು ಬಾಹಿರ ಚಟುವಟಿಕೆ ನಡೆಯುತ್ತಿದ್ದರೆ ಸೂಕ್ತ ಕಾನೂನು ಕ್ರಮ ಜರುಗಿಸಬೇಕು ಎಂದು ನಗರ ಪೊಲೀಸ್ ಆಯುಕ್ತರಿಗೆ ಅ.14ರಂದು ಇ–ಮೇಲ್ ರವಾನಿಸಿದ್ದೆ ಎಂದರು.

ಈ ಕುರಿತು ಆಲನಹಳ್ಳಿ ಪೊಲೀಸ್ ಠಾಣೆಗೂ ಮಾಹಿತಿ ನೀಡಿದ್ದು, ಕೆಲವು ದಿನಗಳ ಬಳಿಕ ವಿಚಾರಿಸಿದಾಗ ವಾಚ್ ಮಾಡುತ್ತಿದ್ದೇವೆ ಎಂದು ಪೊಲೀಸರು ಪ್ರತಿಕ್ರಿಯಿಸಿದ್ದರು. ಅ.31 ರಂದು ಕಾನ್ಸ್‌ಟೇಬಲ್ ನೀಡಿದ ಮಾಹಿತಿ ಮೇರೆಗೆ ಪೊಲೀಸ್‌ನವರು ದಾಳಿ ಮಾಡಿ ಇಬ್ಬರನ್ನು ಬಂಧಿಸಿದ್ದಾರೆ. ಜವಬ್ದಾರಿಯುತ ಸಾರ್ವಜನಿಕನಾಗಿ ನಾನು ಏನು ಮಾಡಬೇಕೋ ಅದನ್ನು ಮಾಡಿದ್ದೇನೆ. ಈ ದಾಳಿ ಮಾಡಿರುವುದು ನಾನು ನೀಡಿದ ಮಾಹಿತಿಯನ್ನು ಆಧರಿಸಿ ಎಂದು ಸ್ಪಷ್ಟಪಡಿಸಿದರು.

## ಒಡನಾಡಿ ಸಂಸ್ಥೆಯಿಂದ ನನ್ನ ತೇಜೋವಧೆ ಯತ್ನ...

ಧರ್ಮಸ್ಥಳದ ಸೌಜನ್ಯ ಅತ್ಯಾಚಾರ ಮತ್ತು ಹತ್ಯೆ ಪ್ರಕರಣದಲ್ಲಿ ನಾನು ಬರೆದಿದ್ದ ಸರಣಿ ಲೇಖನಗಳ ಪರಿಣಾಮ ಒಡನಾಡಿ ಸಂಸ್ಥೆಯವರು ನಾನೇ ವೇಶ್ಯಾವಾಟಿಕೆ ನಡೆಸುತ್ತಿದ್ದೆ ಎಂಬಂತೆ ಅಪಪ್ರಚಾರ ಮಾಡುತ್ತಿದ್ದಾರೆ. ತಾವು ಆ ಸಂಸ್ಥೆ ಅಕ್ರಮಗಳನ್ನು ವಿರೋಧಿಸಿದ ಕಾರಣ ತಮ್ಮನ್ನು ಪ್ರಕರಣದಲ್ಲಿ ಸಿಲುಕಿಸಲಾಗುತ್ತಿದೆ ಎಂದು ಜೆ.ಬಿ.ರಂಗಸ್ವಾಮಿ ಆರೋಪಿಸಿದರು.

ಒಡನಾಡಿ ಸಂಸ್ಥೆಯ ಬಗ್ಗೆ ನನಗೆ 30 ವರ್ಷಗಳಿಂದ ಗೊತ್ತು. ನನಗೆ ಅವರ ಸಂಸ್ಥೆಯಲ್ಲಿ ಕೆಲವೊಂದು ವಿಷಯ ಬೋಧನೆ ಮಾಡಲು ಆಹ್ವಾನಿಸಿದಾಗ ಅತೀ ಹೆಚ್ಚು ಸಂಭಾವನೆ ಕೊಡುತ್ತಿದ್ದರು. ಆಗ ನನಗೆ ಯಾಕೆ ಇಷ್ಟೊಂದು ಸಂಭಾವನೆ ಎಂದು ಕೇಳಿದಾಗ 'ಸ್ಪಾನ್ಸರ್ ಕೊಡುತ್ತಾರೆ ಸರ್' ಎಂದು ಹೇಳಿದ್ದರು. ಈ ವೇಳೆ ಅವರ ಬಗ್ಗೆ ನನಗೆ ಅನುಮಾನ ಮೂಡಿತು. ಅವರು ನಮ್ಮಂತಹ ಅಧಿಕಾರಿಗಳನ್ನು ಕರೆಸಿ ಫೇಮಸ್ ಆಗುತ್ತಿದ್ದರು. ಅನೈತಿಕ ಚಟುವಟಿಕೆಗಳಿಗೆ ನಮ್ಮನ್ನು ಉಪಯೋಗಿಸಿಕೊಳ್ಳುತ್ತಿದ್ದರು ಎಂದು ಗೊತ್ತಾಯಿತು. ನಾನಾಗ ಆ ಸಂಸ್ಥೆಯ ಬಗ್ಗೆ ಮಾಹಿತಿ ಪಡೆದು ಅಲ್ಲಿಗೆ ಹೋಗುವುದನ್ನು ನಿಲ್ಲಿಸಿದ್ದೆ.

ಮುರುಘಾ ಮಠದ ಪ್ರಕರಣಕ್ಕೆ ಸಂಬಂಧಿಸಿದಂತೆ ಅವರು ಚಿತ್ರದುರ್ಗದಲ್ಲಿಯೇ ಕಂಪ್ಲೇಂಟ್ ಕೊಡಬಹುದಾಗಿತ್ತು. ಅವರು ಇಲ್ಲಿಗೆ ಬಂದು ಕಂಪ್ಲೆಂಟ್ ಕೊಟ್ಟು ಆಮೇಲೆ ಚಿತ್ರದುರ್ಗಕ್ಕೆ ವರ್ಗಾವಣೆ ಮಾಡಿಸಿದ್ದು, ಮೇಲ್ನೋಟಕ್ಕೆ ನೋಡಿದರೆ ಇದು ಷಡ್ಯಂತ್ರ ಎಂದು ತಿಳಿಯುತ್ತದೆ. ಸೌಜನ್ಯ ಪ್ರಕರಣದಲ್ಲಿ ಪೊಲೀಸರು ಸಂತೋಷರಾವ್‌ನನ್ನು ಆರೋಪಿತನೆಂದು ಪರಿಗಣಿಸಿರುವುದನ್ನು ಸಮರ್ಥಿಸಿದ್ದೆ. ಈ ನೆಪದಲ್ಲಿ ನಕಲಿ ಹೋರಾಟ ಮಾಡುತ್ತಿರುವವರ ದುರುದ್ದೇಶಗಳನ್ನು ಬಯಲಿಗೆಳೆದಿದ್ದೆ. ನನ್ನ ವಿಶ್ಲೇಷಣೆಯು ನನ್ನ ಅನುಭವವನ್ನು ಆಧರಿಸಿದ್ದು. ಅದು ನನ್ನ ವೈಯಕ್ತಿಕ ಅಭಿಪ್ರಾಯ ಮಾತ್ರ. ಇದರಿಂದ ಬೇಸರಗೊಂಡ ಒಡನಾಡಿ ಸಂಸ್ಥೆ ನಿರಂತರವಾಗಿ ನನ್ನ ಮೇಲೆ ಪ್ರಹಾರ ನಡೆಸುತ್ತಿದೆ. ದ್ವೇಷ ಸಾಧಿಸುತ್ತಿರುವ ಒಡನಾಡಿ ಸಂಸ್ಥೆ ಮುಖ್ಯಸ್ಥರು ತಮಗೂ ಈ ಕಾನೂನು ಬಾಹಿರ ಚಟುವಟಿಕೆಗೂ ಸಂಬಂಧವಿದೆ ಎಂದು ದೂರಿರುವುದು ಸರಿಯಲ್ಲ. ತಾವು ಆ ಸಂಸ್ಥೆ ಅಕ್ರಮಗಳನ್ನು ವಿರೋಧಿಸಿದ ಕಾರಣ ತಮ್ಮನ್ನು ಪ್ರಕರಣದಲ್ಲಿ ಸಿಲುಕಿಸಲಾಗುತ್ತಿದೆ. ವಾಸ್ತವವಾಗಿ ತಾವು ನಗರ ಪೊಲೀಸ್ ಆಯುಕ್ತರಿಗೆ ನೀಡಿದ ಮಾಹಿತಿಯೇ ಆರೋಪಿಗಳ ವಿರುದ್ಧ ಕ್ರಮ ಕೈಗೊಳ್ಳಲು ಕಾರಣವಾಗಿದೆ. ಪೊಲೀಸ್ ಇಲಾಖೆಯಲ್ಲಿ ಸುದೀರ್ಘ ಸೇವೆ ಸಲ್ಲಿಸಿ ಗೌರವಯುತವಾಗಿಯೇ ತಾವು ನಿವೃತ್ತವಾಗಿದ್ದು, ಈ ರೀತಿ ತೇಜೋವಧೆ ಮಾಡುವುದು ಸರಿಯಲ್ಲ. ಇವರ ವಿರುದ್ಧ ಕಾನೂನು ಹೋರಾಟ ನಡೆಸುತ್ತೇನೆ ಎಂದರು.

## ಹೆಡ್ ಕಾನ್‌ಸ್ಟೇಬಲ್ ಮಾಧವನ್ ನಿಧನ

ಮೈಸೂರು, ನ.3(ಆರ್‌ಕೆ)– ಮೈಸೂರು ನಗರ ಪೊಲೀಸ್ ಆಯುಕ್ತರ ಕಚೇರಿಯ ನಗರ ವಿಶೇಷ ಘಟಕ (ಸಿಎಸ್‌ಬಿ)ದಲ್ಲಿ ಹೆಡ್ ಕಾನ್‌ಸ್ಟೇಬಲ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದ ಆರ್. ಮಾಧವನ್ ಜೆಟ್ಟಿ(59) ಇಂದು ಬೆಳಗ್ಗೆ ನಿಧನರಾದರು.

ಅನಾರೋಗ್ಯದಿಂದ ಬಳಲುತ್ತಿದ್ದ ಅವರನ್ನು ಜೆಎಸ್‌ಎಸ್ ಆಸ್ಪತ್ರೆಗೆ ದಾಖಲು ಮಾಡಲಾಗಿತ್ತಾದರೂ, ಚಿಕಿತ್ಸೆ ಫಲಕಾರಿಯಾಗದೇ ಬೆಳಗ್ಗೆ 9.30 ಗಂಟೆ ವೇಳೆಗೆ ಕೊನೆಯುಸಿರೆಳೆದರು. ಅವರು ಪತ್ನಿ ಸುಜಾತ, ಪುತ್ರರಾದ ಸುಪ್ರೀತ್, ಬೆನಕ ಹಾಗೂ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ.

ಇಂದು ಸಂಜೆ ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ಮಾಧವನ್ ಅವರ ಅಂತ್ಯಕ್ರಿಯೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ. ಅವರ ನಿಧನಕ್ಕೆ ನಗರ ಪೊಲೀಸ್ ಆಯುಕ್ತ ಬಿ. ರಮೇಶ್ ಸೇರಿದಂತೆ ಇಲಾಖೆಯಿಂದ ತೀವ್ರ ಸಂತಾಪ ಸೂಚಿಸಿ, ಗೌರವ ಸಲ್ಲಿಸಲಾಯಿತು. ಮೈಸೂರು ಜಿಲ್ಲಾ ಪೊಲೀಸ್ ಘಟಕಕ್ಕೆ ಪೊಲೀಸ್ ಕಾನ್‌ಸ್ಟೇಬಲ್ ಆಗಿ ನೇಮಕಗೊಂಡಿದ್ದ ಮಾಧವನ್, ಮೈಸೂರು ನಗರ ಘಟಕದ ದೇವರಾಜ, ಲಷ್ಕರ್, ನಜರ್‌ಬಾದ್ ಠಾಣೆಗಳಲ್ಲೂ ಕೆಲಸ ನಿರ್ವಹಿಸಿದ ಬಳಿಕ ಕೆಲ ವರ್ಷದಿಂದ ನಗರ ವಿಶೇಷ ಘಟಕದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದರು. ನಿವೃತ್ತಿಗೆ ಕೇವಲ 3 ತಿಂಗಳಷ್ಟೇ ಬಾಕಿ ಇರುವಾಗ ಮಾಧವನ್ ಮೃತಪಟ್ಟಿದ್ದಾರೆ.



## ದೀಪಾವಳಿಗೆ ಪಟಾಕಿ ಹೊಡೆಯಲು 2 ಗಂಟೆ ಮಾತ್ರ ಅವಕಾಶ

ಬೆಂಗಳೂರು, ನ.3– ಬೆಳಕಿನ ಹಬ್ಬ ದೀಪಾವಳಿ ಸಮೀಪಿಸುತ್ತಿರುವಂತೆಯೇ ಇತ್ತ ಪರಿಸರ ಮತ್ತು ಶಬ್ದಮಾಲಿನ್ಯ ತಡೆಗಟ್ಟುವ ಹಿನ್ನೆಲೆಯಲ್ಲಿ ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿ ಕಠಿಣ ನಿಯಮಗಳನ್ನು ಜಾರಿಗೊಳಿಸುತ್ತಿದೆ.

ರಾಜ್ಯದಲ್ಲಿ ದೀಪಾವಳಿ ಹಬ್ಬವನ್ನು ನ.11ರಿಂದ 15ರವರೆಗೆ ಆಚರಿಸಲಿದ್ದು, ಈ ಹಿಂದೆ ಸುಪ್ರೀಂ ಕೋರ್ಟ್ ನೀಡಿದ್ದ ಆದೇಶವನ್ನು ಯಥಾಸ್ಥಿತಿ ಪಾಲನೆ ಮಾಡಲು ಮಾಲಿನ್ಯ ನಿಯಂತ್ರಣ ಮಂಡಳಿ ಸೂಚನೆ ನೀಡಿದೆ. ಅದರಂತೆ ರಾತ್ರಿ 8ರಿಂದ 10 ಗಂಟೆವರೆಗೆ ಮಾತ್ರ ಪಟಾಕಿ ಹೊಡೆಯಲು ಅವಕಾಶ ಇರಲಿದ್ದು, ಹಸಿರು ಪಟಾಕಿಗಳನ್ನು ಮಾತ್ರ ಹೊಡೆಯಬೇಕು ಎಂದು ಹೇಳಲಾಗಿದೆ.

**ನಿಯಮದಲ್ಲೇನಿದೆ?:** ಪಟಾಕಿ ಬಳಕೆ ಬಗ್ಗೆ ಸುಪ್ರೀಂಕೋರ್ಟ್ ಹಲವು ನಿರ್ದೇಶನಗಳನ್ನು ನೀಡಿದ್ದು, ಪಟಾಕಿ ಮಾರಾಟದ ಮೇಲೆ ಅಧಿಕಾರಿಗಳು ಗಂಭೀರ ಪರಿಶೀಲನೆ ನಡೆಸಬೇಕು. ಅಧಿಕಾರಿಗಳು ಪರಿಶೀಲನೆ ವೇಳೆ ಹಸಿರು ಪಟಾಕಿ ಹೊರತುಪಡಿಸಿ ಬೇರೆ ಪಟಾಕಿ ಮಾರುತ್ತಿದ್ದರೆ ಇಡೀ ಗೋದಾಮು ವಶಕ್ಕೆ ಪಡೆಯಬೇಕು. ಸಂಬಂಧಿತ ವ್ಯಕ್ತಿಗಳ ಮೇಲೆ ಕ್ರಿಮಿನಲ್ ಮೊಕದ್ದಮೆ ಹೂಡಬೇಕು. ಹಸಿರು ಪಟಾಕಿಯ ಕ್ಯೂಆರ್ ಕೋಡ್ ಚಿಹ್ನೆ ಇಲ್ಲದ ಪಟಾಕಿಗಳನ್ನು ವಶಕ್ಕೆ ಪಡೆಯಬೇಕು. ಹಬ್ಬದ ಸಂದರ್ಭದಲ್ಲಿ ಹಸಿರು ಪಟಾಕಿಗಳನ್ನು ಮಾತ್ರ ಬಳಸಬೇಕು. ಇವುಗಳನ್ನು ಬಳಸುವಾಗ ಯಾವುದೇ ಪ್ರಾಣಿ, ಪಕ್ಷಿಗಳು, ಮಕ್ಕಳು ಹಾಗೂ ವೃದ್ಧರಿಗೆ ತೊಂದರೆಯಾಗದಂತೆ ಬಳಸಬೇಕು. ನವೆಂಬರ್ 5ರಿಂದ 20ರವರೆಗೆ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ನಿರಂತರವಾಗಿ ಮಾಪನದ ಮೂಲಕ ಪರೀಕ್ಷೆ ಮಾಡಬೇಕು. ಆಯಾಯ ಜಿಲ್ಲೆಗಳ ಜಿಲ್ಲಾಧಿಕಾರಿಗಳು ಪೊಲೀಸರ ಮೂಲಕ ನಿಯಮ ಪಾಲನೆಯ ಬಗ್ಗೆ ಕ್ರಮ ವಹಿಸಬೇಕು. ಆಸ್ಪತ್ರೆ, ಶಿಕ್ಷಣ ಸಂಸ್ಥೆಗಳು, ನಿಷೇಧಿತ ಸ್ಥಳಗಳಲ್ಲಿ ಪಟಾಕಿ ಹೊಡೆಯುವಂತಿಲ್ಲ. ಇದನ್ನು ಎಲ್ಲಾ ಸ್ಥಳೀಯ ಸಂಸ್ಥೆಗಳು ಹಾಗೂ ಪೊಲೀಸ್ ಇಲಾಖೆಗಳು ಕಡ್ಡಾಯವಾಗಿ ಪಾಲಿಸಬೇಕು ಎಂದು ಮಂಡಳಿ ತಿಳಿಸಿದೆ.



ಹೆಚ್ಚಿನ ವರ್ಗೀಕೃತ ಜಾಹೀರಾತು ಪುಟ 9ರಲ್ಲಿ

ಮೈಸೂರು ಮಿತ್ರ ಶನಿವಾರ 4 ನವೆಂಬರ್ 2023

# ವಾರದ ಸಂತೆ ಯಶಸ್ವಿಗೆ ಎಲ್ಲರೂ ಸಹಕರಿಸಿ

## ● ಶಾಸಕ ಡಿ.ರವಿಶಂಕರ್ ಮನವಿ ● ಕೆ.ಆರ್.ನಗರದಲ್ಲಿ ಶುಕ್ರವಾರ ಸಂತೆಗೆ ಚಾಲನೆ

ಕೆ.ಆರ್.ನಗರ, ನ.3–ಕೋವಿಡ್‌ನಿಂದ ಕೆಲ ವರ್ಷಗಳಿಂದ ಸ್ಥಗಿತಗೊಂಡಿದ್ದ ವಾರದ ಸಂತೆಗೆ ಪಟ್ಟಣದಲ್ಲಿ ಮತ್ತೆ ಚಾಲನೆ ನೀಡಲಾಗಿದ್ದು, ಹಿಂದಿನಂತೆ ಸಂತೆ ಯಶಸ್ವಿಯಾಗಿ ನಡೆಯಲು ಎಲ್ಲಾ ಗ್ರಾಹಕರು ಹಾಗೂ ವ್ಯಾಪಾರಿಗಳು ಸಹಕಾರ ನೀಡಬೇಕು ಎಂದು ಶಾಸಕ ಡಿ.ರವಿಶಂಕರ್ ಮನವಿ ಮಾಡಿದರು.

ಪಟ್ಟಣದ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಪ್ರಾಂಗಣದಲ್ಲಿ ಶುಕ್ರವಾರದ ಸಂತೆಗೆ ಚಾಲನೆ ನೀಡಿ ಮಾತನಾಡಿದ ಅವರು, ಈ ಭಾಗದ ರೈತರು ಮತ್ತು ವ್ಯಾಪಾರಸ್ಥರಿಗೆ ಅನುಕೂಲ ಕಲ್ಪಿಸಬೇಕೆಂಬ ದೃಷ್ಟಿಯಿಂದ ಸಂತೆಯನ್ನು ಮರು ಆರಂಭ ಮಾಡಲಾಗಿದೆ. ಗ್ರಾಹಕರು ಹಾಗೂ ಸಾರ್ವಜನಿಕರು ಹಿಂದಿನಂತೆ ಸಂತೆಗೆ ಬಂದು ವಸ್ತುಗಳನ್ನು ಖರೀದಿಸಬೇಕು. ಇದರಿಂದ ಸಂತೆಯ ಸಂಸ್ಕೃತಿ ಉಳಿಯುತ್ತದೆ ಎಂದರು.

ಪಟ್ಟಣದ ಬಜಾರ್ ರಸ್ತೆ, ಹುಣಸೂರು ರಸ್ತೆ, ಮಧುವನಹಳ್ಳಿ ರಸ್ತೆ ಸೇರಿದಂತೆ ವಿವಿಧೆಡೆಯ ರಸ್ತೆ ಬದಿಯಲ್ಲಿ ತರಕಾರಿ, ಹಣ್ಣುಗಳ ವ್ಯಾಪಾರಿಗಳು ಮಳೆ ಮತ್ತು ಬಿಸಿಲಿನ ರಕ್ಷಣೆ ಇಲ್ಲದೆ ವ್ಯಾಪಾರ ಮಾಡುತ್ತಿದ್ದಾರೆ. ಇದರಿಂದ ವ್ಯಾಪಾರಸ್ಥರು, ರೈತರು ಮತ್ತು ಗ್ರಾಹಕರಿಗೂ ತೊಂದರೆಯಾಗುತ್ತಿದೆ. ಆದ್ದರಿಂದ ಎಪಿಎಂಸಿ ಆವರಣದಲ್ಲೇ ತರಕಾರಿ, ಹಣ್ಣು, ಹೂ, ದಿನಸಿ ಪದಾರ್ಥಗಳು ಮತ್ತಿತರ ಸಾಮಗ್ರಿಗಳ ಮಾರಾಟಕ್ಕೆ ಕ್ರಮವಹಿಸಲಾಗಿದೆ ಎಂದು ತಿಳಿಸಿದರು.



ಮಳೆ ಮತ್ತು ಬಿಸಿಲಿ ರಕ್ಷಣೆ ನೀಡಬೇಕೆಂಬ ಉದ್ದೇಶದಿಂದ ಎಪಿಎಂಸಿಯ ಮಾರುಕಟ್ಟೆಯಲ್ಲಿ ಅಂಗಡಿಗಳಿಗೆ ಸ್ಥಳ ನಿಗದಿಪಡಿಸಿ, ನಂಬರ್ ಮೂಲಕ ವ್ಯಾಪಾರಸ್ಥರಿಗೆ ಸ್ಥಳ ವಿತರಿಸಬೇಕು ಎಂದು ಎಪಿಎಂಸಿ ಕಾರ್ಯದರ್ಶಿಗೆ ಸೂಚಿಸಿದ ಶಾಸಕ ಡಿ.ರವಿಶಂಕರ್, ಶೆಡ್‌ಗಳು ನಿರ್ಮಾಣವಾಗಿರುವುದರಿಂದ ವ್ಯಾಪಾರಿಗಳು ಗುಡಾರ ಹೊಡೆಯುವುದು ತಪ್ಪಲಿದೆ ಎಂದರು.

ರಸ್ತೆಬದಿಯಲ್ಲಿ ವ್ಯಾಪಾರ ಮಾಡುತ್ತಿರುವುದರಿಂದ ಪಟ್ಟಣದಲ್ಲಿ ಜನದಟ್ಟನೆ ಹೆಚ್ಚಾಗಿ ಸಾರ್ವಜನಿಕರು ಮತ್ತು ವಾಹನ ಸವಾರರು ಸಂಚರಿಸಲು ತೊಂದರೆಯಾಗುತ್ತಿದೆ. ಇದಕ್ಕಾಗಿ ಮಾರುಕಟ್ಟೆಯನ್ನು ಸಂತೆ ಮೈದಾನಕ್ಕೆ ಸ್ಥಳಾಂತರಿಸಲಾಗಿದೆ. ಪೊಲೀಸರು ರಸ್ತೆಬದಿಯಲ್ಲಿ ವ್ಯಾಪಾರ ಮಾಡುವುದನ್ನು ತಡೆಗಟ್ಟುವ ಮೂಲಕ ವಾರದ ಸಂತೆ ಯಶಸ್ವಿಯಾಗಿ ನಡೆಯಲು ಸಹಕರಿಸಬೇಕು ಎಂದು ಸೂಚಿಸಿದರು.

ನಾನು ಜಿಲ್ಲಾ ಪಂಚಾಯಿತಿ ಸದಸ್ಯನಾಗಿದ್ದ ಸಂದರ್ಭದಲ್ಲಿ ಸಂಸದರಾಗಿದ್ದ ಸಿ.ಹೆಚ್.ವಿಜಯಶಂಕರ್ ಅವರಿಂದ ಚುಂಚನಕಟ್ಟೆಯ ಸಂತೆ ಪ್ರಾರಂಭಿಸಲಾಯಿತು. ಅಂದಿನಿಂದ ಸಂತೆ ಉತ್ತಮವಾಗಿ ನಡೆಯುತ್ತಿದೆ. ಜತೆಗೆ ಅರ್ಜುನಹಳ್ಳಿ ಮತ್ತು ಸಾಲಿಗ್ರಾಮ ಸಂತೆಗಳು ಯಶಸ್ವಿಯಾಗಿ ನಡೆಯುತ್ತಿವೆ. ಪಟ್ಟಣದ ಶುಕ್ರವಾರದ ಸಂತೆ ಹಳೆಯ ಸ್ಥಿತಿಗೆ ಕಳೆಗಟ್ಟುವಂತೆ ಮಾಡಲಾಗುವುದು ಎಂದರು.

ನಂತರ ಶಾಸಕರು ಸಂತೆಯಲ್ಲಿ ಸಂಚರಿಸಿ ವ್ಯಾಪಾರಸ್ಥರ ಸಮಸ್ಯೆಯನ್ನು ಆಲಿಸಿ, ಬೆಲ್ಲ, ತರಕಾರಿ ಸೇರಿದಂತೆ ಹಲವು ಪದಾರ್ಥಗಳನ್ನು ಖರೀದಿಸಿದರು. ತಹಶೀಲ್ದಾರ್ ಸಿ.ಎಸ್.ಪೂರ್ಣಿಮಾ, ಎಪಿಎಂಸಿ ಕಾರ್ಯದರ್ಶಿ ಬಿ.ಮಹೇಶ್, ಟಿಎಪಿಸಿಎಂಎಸ್ ನಿರ್ದೇಶಕರಾದ ಹೆಚ್.ಪಿ.ಪ್ರಶಾಂತ್, ದೊಡ್ಡಕೊಪ್ಪಲು ರವಿ, ಆರೋಗ್ಯ ರಕ್ಷಾ ಸಮಿತಿ ಸದಸ್ಯರಾದ ಹೆಚ್.ಹೆಚ್.ನಾಗೇಂದ್ರ, ಲೋಕೇಶ್, ನಗರ ಕಾಂಗ್ರೆಸ್ ಅಧ್ಯಕ್ಷ ಎಂ.ಜೆ.ರಮೇಶ್, ಮಹಿಳಾ ಘಟಕದ ಅಧ್ಯಕ್ಷೆ ಲತಾರವಿ, ಪುರಸಭೆ ಸ್ಥಾಯಿ ಸಮಿತಿ ಅಧ್ಯಕ್ಷ ಶಂಕರ್, ಸದಸ್ಯರಾದ ಕೆ.ಜಿ.ಸುಬ್ರಹ್ಮಣ್ಯ, ಶಿವುನಾಯಕ್, ಶಂಕರ್, ಮುಖಂಡರಾದ ಚೌಕಳ್ಳಿಶೇಖರ್, ಪುಟ್ಟರಾಜು, ಆದರ್ಶ, ತಿಮ್ಮಶೆಟ್ಟಿ, ಮಿರ್ಲೆ ನಾಗರಾಜು, ಕಗ್ಗೆರೆ ಮಹೇಶ್, ಸರಿತಾ ಜವರಪ್ಪ, ಬೆಟ್ಟೇಗೌಡ ಮತ್ತಿತರರು ಹಾಜರಿದ್ದರು.

## ಮೈಸೂರು ಚಿತ್ರಮಂದಿರಗಳಲ್ಲಿ

| | |
|---|---|
| **ಪದ್ಮ ಚಿತ್ರಮಂದಿರ** | (ದೂ: 2521923) |
| ಟೈಗರ್ ನಾಗೇಶ್ವರ್ ರಾವ್ (ತೆ) | 4 ಪ್ರದರ್ಶನಗಳು |
| **ವುಡ್‌ಲ್ಯಾಂಡ್ಸ್ ಚಿತ್ರಮಂದಿರ** | (ದೂ: 2422871) |
| ಘೋಸ್ಟ್ (ಕ) | 4 ಪ್ರದರ್ಶನಗಳು |
| **ಬಾಲಾಜಿ ಚಿತ್ರಮಂದಿರ** | (ದೂ: 2497199) |
| ಯಾರಿಯನ್ (ಹಿ) | 4 ಪ್ರದರ್ಶನಗಳು |
| **ಮಹದೇಶ್ವರ ಚಿತ್ರಮಂದಿರ** | (ಮೊ:9900820093) |
| ಭಗವತಿ ಕೇಸರಿ (ತೆ) | 4 ಪ್ರದರ್ಶನಗಳು |
| **ಗಾಯಿತ್ರಿ** | |
| ಲಿಯೋ (ಕ) | 2 ಪ್ರದರ್ಶನಗಳು |
| **ರಾಜಕಮಲ್** | |
| ಮಾ ಊರಿ ಪಾಲಿಮೆರಿ ಪಾರ್ಟ್–2 (ತೆ) | 4 ಪ್ರದರ್ಶನಗಳು |
| **ಸಂಗಂ** | |
| ಟಗರುಫಲ್ಯ(ಕ) | 4 ಪ್ರದರ್ಶನಗಳು |
| **ಲಿಡೋ** | |
| ಭಾವಪೂರ್ಣ (ಕ) | 2 ಪ್ರದರ್ಶನಗಳು |
| ಲಿಯೋ (ತ) | 2 ಪ್ರದರ್ಶನಗಳು |
| **ತಿಬ್ಬಾದೇವಿ** | |
| ಲಿಯೋ(ತ) | 4 ಪ್ರದರ್ಶನಗಳು |
| **ಪ್ರಭಾ** | |
| ಟಿಆರ್‌ಪಿ ರಾಮ(ಕ) | 2 ಪ್ರದರ್ಶನಗಳು |
| ಗರುಡ ಪುರಾಣ(ಕ) | 2 ಪ್ರದರ್ಶನಗಳು |

### ಡಿಆರ್‌ಸಿ ಸಿನಿಮಾಸ್
ದೂ : 4240422/4241800

| | |
|---|---|
| ಸ್ಕ್ರೀನ್ 1 | ಟಗರುಪಲ್ಯ (ಕ): ಬೆ10.45ಕ್ಕೆ, ಮ.1.20ಕ್ಕೆ, ರಾ.7.15ಕ್ಕೆ, ಲಿಯೋ (ತ): ಸಂ.4ಕ್ಕೆ, ಘೋಸ್ಟ್ (ಕ): ರಾ.9.50ಕ್ಕೆ. |
| ಸ್ಕ್ರೀನ್ 2 | ಗರುಡ ಪುರಾಣ (ಕ): ಬೆ.10.50ಕ್ಕೆ, ಲಿಯೋ (ತ): ಮ.1.35ಕ್ಕೆ, ಯುಟಿ 69 (ಹಿಂ): ಸಂ.4.45ಕ್ಕೆ, ಕೀಡಾ ಕೋಲ (ತೆ): ರಾ.7.15ಕ್ಕೆ, ರಾ.9.45ಕ್ಕೆ. |
| ಸ್ಕ್ರೀನ್ 3 | 12th ಫೇಲ್ (ಹಿಂ): ಬೆ.10.45ಕ್ಕೆ, ರಾ.7ಕ್ಕೆ, ಕ್ರೇಜಿ ಕೀರ್ತಿ (ಕ): ಮ.1.45ಕ್ಕೆ, ಟಗರುಪಲ್ಯ (ಕ): ಸಂ.4.15ಕ್ಕೆ, ಗರುಡನ್ (ಮ): ರಾ.9.55ಕ್ಕೆ. |
| ಸ್ಕ್ರೀನ್ 4 | ಘೋಸ್ಟ್ (ಕ): ಬೆ.10.40ಕ್ಕೆ, ಮ.1.30ಕ್ಕೆ, ಸಂ.4.20ಕ್ಕೆ, ರಾ.7.10ಕ್ಕೆ, ಟಗರು ಪಲ್ಯ (ಕ): ರಾ.10ಕ್ಕೆ. |

### ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

| | |
|---|---|
| ಸ್ಕ್ರೀನ್ 1 | ಘೋಸ್ಟ್ (ಕ): ಬೆ.10ಕ್ಕೆ, ಮ.12.55ಕ್ಕೆ, ಮ.3.50ಕ್ಕೆ, ಸಂ.6.45ಕ್ಕೆ, ರಾ.9.40ಕ್ಕೆ. |
| ಸ್ಕ್ರೀನ್ 2 | ಟಗರುಪಲ್ಯ (ಕ): ರಾ.10.05ಕ್ಕೆ, ಸಂ.4.20ಕ್ಕೆ, ರಾ.7.10ಕ್ಕೆ, ರಾ.10ಕ್ಕೆ, ಲಿಯೋ (ತ): ಮ.12.55ಕ್ಕೆ. |
| ಸ್ಕ್ರೀನ್ 3 | ಕೀಡಾ ಕೋಲ (ತೆ): ಬೆ.9.55ಕ್ಕೆ, ಮ.3.25ಕ್ಕೆ, ಟಗರು ಪಲ್ಯ (ಕ): ಮ.12.35ಕ್ಕೆ, ಲಿಯೋ (ಕ): ಸಂ.6.05ಕ್ಕೆ, ಲಿಯೋ (ತ): ರಾ.9.30ಕ್ಕೆ. |
| ಸ್ಕ್ರೀನ್ 4 | ಲಿಯೋ (ತ): ಬೆ.10.30ಕ್ಕೆ, ಟಗರುಪಲ್ಯ (ಕ): ಮ.1.55ಕ್ಕೆ, ಟಿ.ಆರ್.ಪಿ. ರಾಮ (ಕ): ಸಂ.4.45ಕ್ಕೆ, ಗರುಡನ್ (ಮ): ರಾ.7.30ಕ್ಕೆ, ಕೀಡಾ ಕೋಲ(ತೆ): ರಾ.10.30ಕ್ಕೆ. |

### ಮೈಸೂರು ವಿಷನ್ ಸಿನಿಮಾ
ದೂ : 0821–2973519

| | |
|---|---|
| ಸ್ಕ್ರೀನ್ 1 | ಪರಿಶುದ್ಧಂ (ಕ): ಬೆ.10.30ಕ್ಕೆ, ಹನಿಮೂನ್ ಇನ್ ಬ್ಯಾಂಕಾಕ್(ಕ): ಮ.1.30ಕ್ಕೆ, ಢುಂಢ (ಕ): ಸಂ.4.20ಕ್ಕೆ, ಬನ್ ಟೀ (ಕ): ಸಂ.6.45ಕ್ಕೆ, ಸಪ್ತ ಸಾಗರದಾಚೆ ಎಲ್ಲೋ (ಕ): ರಾ.9.15ಕ್ಕೆ. |
| ಸ್ಕ್ರೀನ್ 2 | ಜವಾನ್ (ಹಿಂ): ಸಂ.4.15ಕ್ಕೆ, ರಾ.9.15ಕ್ಕೆ. |
| ಸ್ಕ್ರೀನ್ 3 | ದಿ ನನ್ 2 (ಇಂ): ಸಂ.4.45ಕ್ಕೆ, ಜವಾನ್ (ಹಿಂ): ರಾ.7ಕ್ಕೆ. |
| ಸ್ಕ್ರೀನ್ 4 | ಜವಾನ್ (ಹಿಂ): ಬೆ.10.30ಕ್ಕೆ, ಸಪ್ತ ಸಾಗರದಾಚೆ ಎಲ್ಲೋ (ಕ): ಮ.1.45ಕ್ಕೆ, ಸಂ.4.45ಕ್ಕೆ, ದಿ ನನ್ 2 (ಇಂ): ರಾ.7.35ಕ್ಕೆ. |

### ಪಿವಿಆರ್ ಸಿನಿಮಾಸ್
ಮೊ.ನಂ: 8951357139
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಭಗವಂತ್ ಕೇಸರಿ (ತೆ): ಮ.1.05ಕ್ಕೆ, ಮ.3.20ಕ್ಕೆ, ರಾ.10.30ಕ್ಕೆ, ಗಣಪತ್ (ಹಿಂ): ಬೆ.9.20ಕ್ಕೆ, ಮ.12.20ಕ್ಕೆ, ಮ.3.20ಕ್ಕೆ, ಸಂ.6.45ಕ್ಕೆ, ರಾ.9.45ಕ್ಕೆ, ಘೋಸ್ಟ್ (ಕ): ಬೆ.9.30ಕ್ಕೆ, ಮ.12.25ಕ್ಕೆ, ಸಂ.4.30ಕ್ಕೆ, ರಾ.7.25ಕ್ಕೆ, ರಾ.10.20ಕ್ಕೆ, ಲಿಯೋ (ಕ): ಮ.12.15ಕ್ಕೆ, ಲಿಯೋ (ತ): ಬೆ.8.20ಕ್ಕೆ, ಮ.11.45ಕ್ಕೆ, ಮ.3.10ಕ್ಕೆ, ಸಂ.6.15ಕ್ಕೆ, ಸಂ.6.35ಕ್ಕೆ, ರಾ.10ಕ್ಕೆ, ಲಿಯೋ (ತ): ಬೆ.8.50ಕ್ಕೆ, ಮ.12.15ಕ್ಕೆ, ಮ.3.40ಕ್ಕೆ, ರಾ.7.05ಕ್ಕೆ, ರಾ.10.30ಕ್ಕೆ, ಟೈಗರ್ ನಾಗೇಶ್ವರ್ ರಾವ್ (ತೆ): ಬೆ.8.35ಕ್ಕೆ, ಮ.3.40ಕ್ಕೆ, ರಾ.9.40ಕ್ಕೆ, ಯಾರಿಯನ್ 2 (ಹಿಂ): ಬೆ.9.55ಕ್ಕೆ, ರಾ.7.20ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

# ನಾಳೆ ನಗರ ಕಾರ್ಮಿಕರ ಸಮಾವೇಶ

ಹುಣಸೂರು, ನ.3– ಪಟ್ಟಣದ ಮುನೇಶ್ವರ ಸಮುದಾಯ ಭವನದಲ್ಲಿ ನ.5ರಂದು ನಗರ ಕಾರ್ಮಿಕರ ಸಮಾವೇಶ ಹಮ್ಮಿಕೊಳ್ಳಲಾಗಿದೆ ಎಂದು ಸಿಐಟಿಯು ತಾಲೂಕು ಸಂಚಾಲಕ ವಿ.ಬಸವರಾಜು ಕಲ್ಕುಣಿಕೆ ತಿಳಿಸಿದರು.

ಸಮಾವೇಶವನ್ನು ಗ್ರಾಪಂ ನೌಕರರ ಸಂಘದ ಜಿಲ್ಲಾಧ್ಯಕ್ಷ ಕೆ.ಬಸವರಾಜು ಉದ್ಘಾಟಿಸಲಿದ್ದು, ನಗರ ಕಾರ್ಮಿಕರ ಸಂಘದ ಅಧ್ಯಕ್ಷ ಚಂದ್ರೇಗೌಡ ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಕಾರ್ಮಿಕ ನಿರೀಕ್ಷಕ ಟಿ.ವಿ.ಲಕ್ಷ್ಮೀಶ, ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಜಗದೀಶ್ ಸೂರ್ಯ, ದಲಿತ ಹಕ್ಕಗಳ ಜಿಲ್ಲಾ ಸಂಚಾಲಕ ಬೆಳ್ತೂರು ವೆಂಕಟೇಶ್, ತಾಲೂಕು ಅಧ್ಯಕ್ಷ ತಮ್ಮಡಹಳ್ಳಿ ಮಹದೇವ, ಬೀಮಾ ಕಲಾ ಸಂಘದ ಅಧ್ಯಕ್ಷ ಶ್ರೀಧರ್, ಹೆಚ್.ಎಂ.ಶಿವರಾಮ ಭಾಗವಹಿಸಲಿದ್ದಾರೆ ಎಂದು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಪಟ್ಟಣದಲ್ಲಿ ಅಸಂಘಟಿತ ಕಾರ್ಮಿಕರು ನೂರಾರು ಸಂಖ್ಯೆಯಲ್ಲಿದ್ದು, ಸರ್ಕಾರ ನಿಗದಿಪಡಿಸಿದ ವೇತನ, ವಾರದ ರಜೆ ಹಾಗೂ ಉದ್ಯೋಗ ಭದ್ರತೆ ಇಲ್ಲದೆ ಕಾರ್ಮಿಕರಲ್ಲಿ ಅಭದ್ರತೆ ಕಾಡುತ್ತಿದೆ. ಸರ್ಕಾರ ನಿಗದಿ ಪಡಿಸಿದ ವೇತನ ಹಾಗೂ ಅಸಂಘಟಿತ ಕಾರ್ಮಿಕರಿಗೆ ಜಾರಿಗೊಳಿಸಿರುವ ಸವಲತ್ತುಗಳನ್ನು ಕಲ್ಪಿಸಲು ಕಾರ್ಮಿಕ ಇಲಾಖೆ ಸಂಪೂರ್ಣವಾಗಿ ವಿಫಲವಾಗಿದೆ ಎಂದರು. ಹುಣಸೂರು ಪಟ್ಟಣದ ಹೋಟೆಲ್, ಪೆಟ್ರೋಲ್ ಬಂಕ್, ಬಟ್ಟೆ ಅಂಗಡಿ, ಮಾಲ್, ಶೋರೂಂಗಳಲ್ಲಿ ಕೆಲಸ ಮಾಡುತ್ತಿರುವ ಕಾರ್ಮಿಕರು, ವಾಹನ ಚಾಲಕರು, ಮನೆ ಕೆಲಸಗಾರರು, ಬೀದಿಬದಿ ವ್ಯಾಪಾರಿಗಳು ಸೇರದಂತೆ ವಿವಿಧ ಕಾರ್ಮಿಕರರು ಸಮಾವೇಶದಲ್ಲಿ ಭಾಗವಹಿಸಿ ತಮ್ಮ ಹಕ್ಕಗಳನ್ನು ತಿಳಿದುಕೊಳ್ಳಬೇಕು ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ನಗರ ಕಾರ್ಮಿಕ ಸಂಘದ ಅಧ್ಯಕ್ಷ ಚಂದ್ರೇಗೌಡ, ಉಪಾಧ್ಯಕ್ಷ ವಿಜಯ ಭಾಸ್ಕರ್, ಕಾರ್ಯದರ್ಶಿ ಹರೀಶ್, ಖಜಾಂಚಿ ಬಿ.ಕೆ.ಮಹದೇವು ಇದ್ದರು.

# 3 ಕೊಳವೆ ಬಾವಿ ನಿರ್ಮಾಣಕ್ಕೆ ಮಂಜೂರಾತಿ

ತಿ.ನರಸೀಪುರ, ನ.3–ಪುರಸಭೆ ವ್ಯಾಪ್ತಿಯ ಬೈರಾಪುರ ಬಡಾವಣೆಯ ಮೂರು ಕಡೆ ಕೊಳವೆ ಬಾವಿ ಕೊರೆಯಲು ಮುಖ್ಯಮಂತ್ರಿ ಸಿದ್ದರಾಮಯ್ಯ ಮಂಜೂರಾತಿ ನೀಡಿದ್ದಾರೆ ಎಂದು ತಾಲೂಕು ಪಂಚಾಯಿತಿ ಮಾಜಿ ಉಪಾಧ್ಯಕ್ಷ ಬಿ.ಮರಯ್ಯ ತಿಳಿಸಿದರು.



ಪುರಸಭೆ ಮಾಜಿ ಉಪಾಧ್ಯಕ್ಷೆ ಪ್ರೇಮಾ ಅವರ ಮನವಿಗೆ ಮೇರೆಗೆ ಮುಖ್ಯಮಂತ್ರಿ ಸ್ಪಂದಿಸಿ, ಕೊಳವೆ ಬಾವಿ ಮಂಜೂರು ಮಾಡಿದ್ದಾರೆ. ಬೈರಾಪುರ ಬಡಾವಣೆಯ ಉಪ್ಪಿಟ್ಟಮ್ಮ, ಸೊಪ್ಪಿಟ್ಟಮ್ಮ ದೇವಾಲಯ, ಸ್ಮಶಾನ ಹತ್ತಿರ ಹಾಗೂ ಮಾರಮ್ಮನವರ ದೇಗುಲದ ಬಳಿ ಕೊಳವೆ ಬಾವಿ ಕೊರೆಸಲಾಗುತ್ತಿದೆ ಎಂದು ತಿಳಿಸಿದರು.

ಸ್ಮಶಾನದಲ್ಲಿ ಶೆಡ್ ನಿರ್ಮಾಣ, ಬೈರಾಪುರ ಗೇಟ್‌ನಿಂದ ಗ್ರಾಮದ ವರೆಗೆ ರಸ್ತೆ ಅಭಿವೃದ್ಧಿ ಪಡಿಸಲಾಗುವುದು. ಕ್ಷೇತ್ರಕ್ಕೆ ಇನ್ನೂ ಹೆಚ್ಚಿನ ಅನುದಾನ ನೀಡುವಂತೆ ಮನವಿ ಮಾಡಲಾಗುವುದು. ಬೈರಾಪುರ ವ್ಯಾಪ್ತಿಯ ಕೆಎಸ್‌ಐಸಿ ಕಾರ್ಖಾನೆಯಲ್ಲಿ ಇಲ್ಲಿನ ಬಡ ನಿರುದ್ಯೋಗ ಯುವಕ–ಯುವತಿಯರಿಗೆ ಉದ್ಯೋಗ ಕಲ್ಪಿಸಿ ಕೊಡುವ ಮೂಲಕ ಅವರ ಕುಟುಂಬ ನಿರ್ವಹಣೆಗೆ ಅನುಕೂಲ ಕಲ್ಪಿಸಲು ಮುಖ್ಯಮಂತ್ರಿಗೆ ಮನವಿ ಮಾಡಿದರು.

ಇದೇ ವೇಳೆ ಒಕ್ಕಲಿಗ ಸಮಾಜದ ಹಿರಿಯ ಮುಖಂಡ ನಾಗೇಶ್‌ಗೌಡ, ಮಾದಯ್ಯ, ಚಿಕ್ಕನಂಜಯ, ಮರಯ್ಯ, ಮಹದೇವು, ಮರಿಸ್ವಾಮಿ ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

# ಹುಲಿ ದಾಳಿಗೆ ಮತ್ತೊಂದು ಮೇಕೆ ಬಲಿ

## ಸೆರೆಗೆ ಸಾಕಾನೆಗಳ ಮೂಲಕ ಕೂಂಬಿಂಗ್ ಕಾರ್ಯಾಚರಣೆ



ನಂಜನಗೂಡು, ನ.3–ಕೆಲ ದಿನಗಳ ಹಿಂದೆ ತಾಲೂಕಿನ ಮಹದೇವನಗರದ ರೈತನ ಮೇಲೆ ದಾಳಿ ನಡೆಸಿ, ಹಸುವನ್ನು ಕೊಂದುಹಾಕಿದ್ದ ಹುಲಿ ಸೆರೆಗಾಗಿ ಅರಣ್ಯಾಧಿಕಾರಿಗಳು ಶುಕ್ರವಾರ ಕೂಂಬಿಂಗ್ ಕಾರ್ಯಾಚರಣೆ ನಡೆಸುತ್ತಿದ್ದ ಬೆನ್ನಲ್ಲೆ ಹಾದನೂರು–ಒಡೆಯನಪುರ ಗ್ರಾಮದಲ್ಲಿ ಮತ್ತೊಂದು ಮೇಕೆಯನ್ನು ಬಲಿ ಪಡೆದಿದೆ.

ತಾಲೂಕಿನ ಹಾದನೂರು–ಒಡೆಯನಪುರ ಗ್ರಾಮದ ರೈತ ಶಿವು ಶುಕ್ರವಾರ ಮಧ್ಯಾಹ್ನ ಸುಮಾರು 12.30ರಲ್ಲಿ ಕಾಡಂಚಿನ ತಮ್ಮ ಜಮೀನಿನ ಬಳಿ ದನ ಹಾಗೂ ಮೇಕೆಗಳನ್ನು ಮೇಯಿಸುತ್ತಿದ್ದರು. ಈ ವೇಳೆ ಹುಲಿ ದಾಳಿ ನಡೆಸಿ ಮೇಕೆಯನ್ನು ಕೊಂದುಹಾಕಿ ಹೊತ್ತೊಯ್ದಿದೆ. ಹುಲಿ ದಾಳಿಯಿಂದ ಉಳಿದ ದನ ಹಾಗೂ ಮೇಕೆಗಳು ಗಾಬರಿಯಿಂದ ಕಿರುಚಾಡಿ ಓಡಾಡುತ್ತಿದ್ದರಿಂದ ರೈತ ಶಿವು ನೋಡಿದಾಗ ಹುಲಿ ಮೇಕೆಯನ್ನು ಎಳೆದ್ದೊಯ್ಯುತ್ತಿರುವುದನ್ನು ಕಂಡಿದ್ದಾರೆ. ತಾಲೂಕಿನ ಹೆಡೆಯಾಲ ಗ್ರಾಮದ ಕುದುರೆಗುಂಡಿ ಹಿನ್ನೀರು ಪ್ರದೇಶದಲ್ಲಿ ರಾಮಾಪುರ ಶಿಬಿರದಿಂದ ಧರ್ಮ ಹಾಗೂ ಪಾರ್ಥ ಸಾಕಾನೆಗಳ ಮೂಲಕ ಹುಲಿ ಸೆರೆಗೆ ಅರಣ್ಯಾಧಿಕಾರಿಗಳು ಹಾಗೂ ಸಿಬ್ಬಂದಿ ಕಾರ್ಯಾಚರಣೆ ನಡೆಸುತ್ತಿದ್ದರು. ಆದರೆ, ಇಲ್ಲಿಂದ 6 ರಿಂದ 7 ಕಿ.ಮೀ. ದೂರದಲ್ಲಿರುವ ಹಾದನೂರು–ಒಡೆಯನಪುರ ಗ್ರಾಮದಲ್ಲಿ ಹುಲಿ ಮತ್ತೆ ದಾಳಿ ನಡೆಸಿ, ಮೇಕೆಯನ್ನು ಬಲಿ ಪಡೆದಿದೆ.

ಹುಲಿ ಪತ್ತೆಗಾಗಿ 10 ಕಡೆಗಳಲ್ಲಿ ಕ್ಯಾಮರಾಗಳನ್ನು ಅಳವಡಿಸಲಾಗಿದ್ದು, ಹುಲಿಯ ಚಲನ–ವಲದ ಮೇಲೆ ನಿಗಾವಹಿಸಲಾಗಿದೆ.

ಮುಂದಿನ 3 ದಿನಗಳ ಕಾಲ ಸಾಕಾನೆಗಳೊಂದಿಗೆ ಹುಲಿ ಪತ್ತೆಗಾಗಿ ಕಾರ್ಯಾಚರಣೆ ಮುಂದುವರೆಸಲಾಗುವುದು ಎಂದು ವಲಯ ಅರಣ್ಯಾಧಿಕಾರಿ ನಾರಾಯಣರಾವ್ ತಿಳಿಸಿದ್ದಾರೆ.



**ನಂಜನಗೂಡು ತಾಲೂಕಿನ ಹೆಡಿಯಾಲ ಸಮೀಪದ ಕುದುರೆಗುಂಡಿಯಲ್ಲಿ ಹುಲಿ ದಾಳಿಯಿಂದ ಗಾಯಗೊಂಡು ಮೈಸೂರಿನ ಕೆ.ಆರ್. ಆಸ್ಪತ್ರೆಗೆ ದಾಖಲಾಗಿರುವ ರೈತ ವೀರಭದ್ರ ಭೋವಿ ಅವರನ್ನು ಶಾಸಕ ದರ್ಶನ್ ಧ್ರುವನಾರಾಯಣ್ ಭೇಟಿ ಮಾಡಿ ಆರೋಗ್ಯ ವಿಚಾರಿಸಿದರು. ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ತಾಪಂ ಮಾಜಿ ಅಧ್ಯಕ್ಷ ನಾಗೇಶ್ ರಾಜ್, ಕಾಂಗ್ರೆಸ್ ಹಿಂದುಳಿದ ವರ್ಗದ ಜಿಲ್ಲಾಧ್ಯಕ್ಷ ಕೆ.ಮಾರುತಿ ಇದ್ದರು.**

# ಮೂವರು ಬೈಕ್ ಕಳ್ಳರ ಬಂಧನ

ಹುಣಸೂರು, ನ.3–ಮೂವರು ಬೈಕ್ ಕಳ್ಳರನ್ನು ಬಂಧಿಸಿರುವ ತಾಲೂಕಿನ ಬಿಳಿಕೆರೆ ಠಾಣೆ ಪೊಲೀಸರು, ಸುಮಾರು 6 ಲಕ್ಷ ರೂ. ಮೌಲ್ಯದ 3 ಬೈಕ್‌ಗಳನ್ನು ಶುಕ್ರವಾರ ವಶಪಡಿಸಿಕೊಂಡಿದ್ದಾರೆ.

ತಾಲೂಕಿನ ಅಜಾದ್ ನಗರದ ನಿವಾಸಿ ಕಿರಣ್, ಹುಣಸೂರಿನ ಸರಸ್ವತಿಪುರಂನ ಸಂದೀಪ ಮತ್ತು ಪಿರಿಯಾಪಟ್ಟಣ ತಾಲೂಕಿನ ಮುತ್ತೂರು ಗ್ರಾಮದ ವಿನೋದ್ ಬಂಧಿತ ಆರೋಪಿಗಳು.

ಇತ್ತೀಚಿಗೆ ಬೈಕ್ ಕಳ್ಳತನ ಪ್ರಕರಣಗಳು ಹೆಚ್ಚಾಗುತ್ತಿದ್ದು, ಇದರಿಂದ ಎಚ್ಚೆತ್ತುಕೊಂಡಿರುವ ಪೊಲೀಸರು ಕಳ್ಳರ ಪತ್ತೆಗೆ ಬಲೆ ಬೀಸಿದ್ದರು. ಹುಣಸೂರು ಉಪ ವಿಭಾಗದ ಡಿವೈಎಸ್ಪಿ ಗೋಪಾಲಕೃಷ್ಣ, ಬಿಳಿಕೆರೆ ಠಾಣೆ ಇನ್ಸ್‌ಪೆಕ್ಟರ್ ಟಿ.ಎಸ್.ಲೋಲಾಕ್ಷಿ ಮಾರ್ಗದರ್ಶನದಲ್ಲಿ ಬಿಳಿಕೆರೆ ಠಾಣೆ ಅಪರಾಧ ವಿಭಾಗದ ಪಿಎಸ್‌ಐ ಚಲುವಯ್ಯ ಮತ್ತು ಸಿಬ್ಬಂದಿ ಪ್ರತಾಪ್, ಶಿವಕುಮಾರ, ಪ್ರಸನ್ನ ಮತ್ತು ಜೀಪ್ ಚಾಲಕ ಗೋವಿಂದ ರಾಜು ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು.

# ಗ್ರಾಮಾಂತರದಲ್ಲಿ ಕನ್ನಡ ಕಲಿಕೆಗೆ ಒತ್ತು




ಬೆಟ್ಟದಪುರ, ನ.3– ಪಿರಿಯಾಪಟ್ಟಣ ತಾಲೂಕಿನ ಬೆಟ್ಟದಪುರದ ಕುವೆಂಪು ವೃತ್ತದಲ್ಲಿ ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಅದ್ದೂರಿಯಾಗಿ ಕನ್ನಡ ರಾಜ್ಯೋತ್ಸವ ಆಚರಿಸಲಾಯಿತು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ತಹಶೀಲ್ದಾರ್ ಕುಂಞ ಅಹಮದ್, ನಾಡಿನ ಜನತೆ ಕನ್ನಡ ರಾಜ್ಯೋತ್ಸವವನ್ನು ಹಬ್ಬದ ರೀತಿ ಆಚರಣೆ ಮಾಡುತ್ತಿದೆ. ಇದನ್ನು ಗ್ರಾಮಾಂತರ ಪ್ರದೇಶದಲ್ಲಿ ಕನ್ನಡ ಕಲಿಕೆಗೆ ಹೆಚ್ಚಿನ ಒತ್ತು ನೀಡಿ ಉಳಿಸಲಾಗುತ್ತಿದೆ. ಆದರೆ, ನಗರ ಪ್ರದೇಶದಲ್ಲಿ ಹೆಚ್ಚಾಗಿ ಕನ್ನಡದಲ್ಲಿ ವ್ಯವಹಾರ ನಡೆಯುತ್ತಿಲ್ಲ. ಮುಂದಿನ ದಿನಗಳಲ್ಲಿ ಕನ್ನಡಾಭಿಮಾನಿಗಳು ಹಾಗೂ ನಾಡಿನ ಜನರು ಎಲ್ಲಾ ವ್ಯವಹಾರಗಳನ್ನು ಮಾತೃಭಾಷೆಯಲ್ಲೇ ವ್ಯವಹರಿಸಿದರೆ ಕನ್ನಡ ಉಳಿಯುತ್ತದೆ ಎಂದರು.

ಬೆಟ್ಟದಪುರ ಪೊಲೀಸ್ ಠಾಣೆ ಪಿಎಸ್‌ಐ ಪ್ರಕಾಶ್ ಎಂ.ಎತ್ತಿನಮನಿ ಕುವೆಂಪು ಅವರ ಪುತ್ಥಳಿಗೆ ಮಾಲಾರ್ಪಣೆ ಮಾಡಿದರು. ನಿವೃತ್ತ ಶಿಕ್ಷಕ ಬಿ.ಟಿ.ಸಣ್ಣಸ್ವಾಮಿಗೌಡ ಮಾತನಾಡಿದರು. ಇದೇ ವೇಳೆ ಗ್ರಾಪಂ ಅಧ್ಯಕ್ಷರಾದ ಬಿ.ಸಿ.ಗಿರೀಶ್, ಪ್ರೀತಿಲಕ್ಷ್ಮೀ ಅರಸ್, ಗೊರಹಳ್ಳಿ ಗ್ರಾಮದ ಯುವ ಸಾಹಿತಿ ಕುಮಾರಿ ಸಿಂಚನಾ, ರೈತ ಮುಖಂಡ ಬಿ.ಜೆ.ದೇವರಾಜ್, ಶಿಕ್ಷಕ ವೆಂಕಟೇಶ್, ಪತ್ರಕರ್ತ ಸಿ.ಜೆ.ಪುನೀತ್, ಟಿಎಂಎನ್ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಚಂದ್ರಶೇಖರ್ ಅವರನ್ನು ಸನ್ಮಾನಿಸಲಾಯಿತು. ತಾಲೂಕು ಕಸಾಪ ಅಧ್ಯಕ್ಷ ನವೀನ್ ಕುಮಾರ್, ಬೆಟ್ಟದಪುರ ಪ್ರೌಢಶಾಲೆಯ ಮುಖ್ಯಶಿಕ್ಷಕ ಲಿಂಗರಾಜು, ಶಿಕ್ಷಕರಾದ ಗೋರಳ್ಳಿ ಜಗದೀಶ್, ಕೆಂಪರಾಜು, ಮಹೇಶ್, ಗ್ರಾಮೀಣ ಶಿಕ್ಷಕರ ಸಂಘದ ಅಧ್ಯಕ್ಷ ಬಿ.ಸಿ.ಮಹಾದೇವಪ್ಪ, ಸಮಾಜ ಸೇವಕ ಎಸ್.ಮಲ್ಲೇಶ, ನಿವೃತ್ತ ಶಿಕ್ಷಕ ನಾಗಣ್ಣೇಗೌಡ ಹಾಜರಿದ್ದರು.

# ದೇಶದ ಏಕೈಕ ಸರಳ ಭಾಷೆ ಕನ್ನಡ

ತಿ.ನರಸೀಪುರ, ನ.3–ಕನ್ನಡ ಸರಳ ಮತ್ತು ಸುಲಲಿತವಾಗಿ ಮಾತನಾಡುವಂತಹ ದೇಶದ ಏಕೈಕ ಭಾಷೆಯಾಗಿದೆ. ಈ ನಾಡಿನ ನೆಲದಲ್ಲಿ ಬದುಕನ್ನು ಕಟ್ಟಿಕೊಂಡಿರುವ ನಾವು ಕನ್ನಡವನ್ನು ಕಲಿತು ಕಡ್ಡಾಯವಾಗಿ ಮಾತನಾಡಬೇಕು ಎಂದು ಎನ್‌ಕೆಎಫ್ ಫೌಂಡೇಷನ್ ಮತ್ತು ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಎನ್.ಕೆ.ಫರೀದ್ ಹೇಳಿದರು.



ಪಟ್ಟಣದ ರಾಷ್ಟ್ರೀಯ ಹೆದ್ದಾರಿಯ ಜಂಕ್ಷನ್‌ನಲ್ಲಿರುವ ಎನ್‌ಕೆಎಫ್ ಪಬ್ಲಿಕ್ ಶಾಲೆಯಲ್ಲಿ ನಡೆದ ಕನ್ನಡ ರಾಜ್ಯೋತ್ಸವದಲ್ಲಿ ಮಾತನಾಡಿದ ಅವರು, ಮೈಸೂರು ರಾಜ್ಯವಾಗಿದ್ದ ನಾಡನ್ನು ಏಕೀಕರಣಗೊಳಿಸುವ ಮೂಲಕ ನಮ್ಮೆಲ್ಲರ ಹೆಮ್ಮೆಯ ಕರ್ನಾಟಕ ಉದಯವಾಯಿತು. ಅಂತಹ ದಿನವನ್ನು ನಾಡಿನ ಹಬ್ಬವಾಗಿ ನ.1ರಂದು ರಾಜ್ಯೋತ್ಸವ ಆಚರಿಸಲಾಗುತ್ತಿದೆ. ರಾಜ್ಯದ ಎಂಟು ಕವಿ ಮತ್ತು ಸಾಹಿತಿಗಳಿಗೆ ಜ್ಞಾನಪೀಠ ಪ್ರಶಸ್ತಿ ಗೌರವ ಸಂದಿರುವುದು ಹೆಮ್ಮೆಯ ವಿಚಾರವಾಗಿದೆ. ಆಂಗ್ಲ ಮಾಧ್ಯಮ ಶಿಕ್ಷಣವನ್ನು ವ್ಯಾಸಂಗ ಮಾಡುವ ಮಕ್ಕಳು ಕೂಡ ಮಾತೃಭಾಷೆ ಕನ್ನಡವನ್ನು ಕಲಿಯಬೇಕು ಎಂದರು.

ನಾಡಗೀತೆಗೆ ನೃತ್ಯ ಪ್ರದರ್ಶಿಸುವ ಮೂಲಕ ಶಾಲೆಯ ವಿದ್ಯಾರ್ಥಿಗಳು ರಾಜ್ಯೋತ್ಸವಕ್ಕೆ ಕಳೆ ತಂದರು. ಶಿಕ್ಷಕಿ ರೇಖಾ ರಾಜ್ಯೋತ್ಸವ ಆಚರಣೆ ಹಿನ್ನೆಲೆ ತಿಳಿಸಿದರು. ಶಾಲೆಯ ಕಾರ್ಯದರ್ಶಿ ಜೋಹರಾ ಸುಲ್ತಾನಾ, ಮುಖ್ಯ ಶಿಕ್ಷಕಿ ಹೇಮಾ, ಸಹ ಶಿಕ್ಷಕರಾದ ಶಿಲ್ಪಶ್ರೀ, ಶೈಲಾ, ರಜಿಯಾ, ಸೌಮ್ಯ, ರಶ್ಮಿ, ಅನಿತಾ, ಚೆಲುವಮ್ಮ, ಅಶ್ವಿನಿ, ಗೀತಾ, ನೂರ್ ಹಾಜೀರ, ಸ್ವರ್ಣಲತಾ, ರಸ್ಮಿಯಾ ಹಾಗೂ ಇನ್ನಿತರರು ಹಾಜರಿದ್ದರು.

# ಕಪ್ಪುಹುಳು ಬಾಧೆ ನಿಯಂತ್ರಣಕ್ಕೆ ಸಿಎಂ ಸೂಚನೆ

## ● ಶಾಸಕ ಡಿ.ರವಿಶಂಕರ್ ಹೇಳಿಕೆ ● ಎಲೆಮುದ್ದನಹಳ್ಳಿಯಲ್ಲಿ ಸುಧಾರಿತ ಬೇಸಾಯ ತರಬೇತಿ

ಭೇರ್ಯ, ನ.3–ತೆಂಗಿನ ಮರಗಳಿಗೆ ಹರಡಿರುವ ಕಪ್ಪುಹುಳು ಬಾಧೆ ನಿಯಂತ್ರಿಸಿ, ಬೆಳೆಗಾರರಿಗೆ ಅರಿವು ಮೂಡಿಸುವಂತೆ ತೋಟಗಾರಿಕೆ ಇಲಾಖೆಯ ಎಲ್ಲಾ ನಿರ್ದೇಶಕರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚಿಸಿದ್ದಾರೆ ಎಂದು ಶಾಸಕ ಡಿ.ರವಿಶಂಕರ್ ಹೇಳಿದರು.



ಸಾಲಿಗ್ರಾಮ ತಾಲೂಕಿನ ಎಲೆಮುದ್ದನಹಳ್ಳಿ ಕೊಪ್ಪಲು ಗ್ರಾಮದ ರೈತ ಪುಟ್ಟಸ್ವಾಮಿಗೌಡ ಅವರ ತೆಂಗಿನ ತೋಟದಲ್ಲಿ ಕೆ.ಆರ್.ನಗರದ ತೋಟಗಾರಿಕೆ ಇಲಾಖೆ ಹಾಗೂ ಇಲವಾಲದ ಯಲಚನಹಳ್ಳಿಯ ತೋಟಗಾರಿಕೆ ಮಹಾವಿದ್ಯಾಲಯ ವತಿಯಿಂದ ಆಯೋಜಿಸಿದ್ದ ತೆಂಗಿನ ಬೆಳೆಯಲ್ಲಿ ಕೀಟ ಮತ್ತು ರೋಗ ನಿಯಂತ್ರಣ ಹಾಗೂ ಸುಧಾರಿತ ಬೇಸಾಯ ಕ್ರಮಗಳ ಕುರಿತ ತರಬೇತಿ ಮತ್ತು ಪ್ರಾತ್ಯಕ್ಷಿಕೆಗೆ ಕಪ್ಪುಹುಳು ಹತೋಟಿಗೆ ಪರೋಪಕಾರಿ ಕೀಟಗಳನ್ನು ತೆಂಗಿನ ಮರಕ್ಕೆ ಬಿಡುವ ಮೂಲಕ ಚಾಲನೆ ನೀಡಿ ಮಾತನಾಡಿದ ಅವರು, ಮುಖ್ಯಮಂತ್ರಿಗಳ ಸೂಚನೆ ಮೇರೆಗೆ ಕೆ.ಆರ್.ನಗರ ಮತ್ತು ಸಾಲಿಗ್ರಾಮ ತಾಲೂಕಿನ ತೆಂಗು ಬೆಳೆಗಾರರಿಗೆ ಅರಿವು ಮೂಡಿಸಲಾಗುತ್ತಿದೆ ಎಂದರು.

ರೈತರಿಗೆ ತೋಟಗಾರಿಕೆ ಬೆಳೆಗಳ ಕುರಿತು ಏನೇ ಸಮಸ್ಯೆಗಳಿದ್ದರೂ ತಾಲೂಕಿನ ತೋಟಗಾರಿಕೆ ಇಲಾಖೆಯ ಅಧಿಕಾರಿಗಳನ್ನು ಸಂಪರ್ಕಿಸಿ ಹೆಚ್ಚಿನ ಮಾಹಿತಿ ಪಡೆದುಕೊಳ್ಳಿ ಎಂದು ಸಲಹೆ ನೀಡಿದರು. ಇದಕ್ಕೂ ಮೊದಲು ಶಾಸಕರು ಸಿಹೆಚ್‌ಡಿ ಯೋಜನೆಯಡಿ ರೈತರಿಗೆ ಉಚಿತ ತೆಂಗಿನ ಸಸಿಗಳನ್ನು ವಿತರಿಸಿದರು. ಯಲಚನಹಳ್ಳಿಯ ತೋಟಗಾರಿಕೆ ಮಹಾವಿದ್ಯಾಲಯದ ಸಸ್ಯಕೀಟ ತಜ್ಞ ಡಾ.ಪಿ.ಮುತ್ತುರಾಜು ಮಾತನಾಡಿ, ತೆಂಗಿನ ಬೆಳೆಗೆ ತಗುಲಿರುವ ಕಪ್ಪುತಲೆ ಹುಳು ರೋಗ ನಿಯಂತ್ರಣಕ್ಕೆ ಎಲ್ಲರೂ ಒಂದೇ ಸಾರಿ ಕ್ರಮಗಳನ್ನು ಅನುಸರಿಸದಿದ್ದರೆ ಯಾವುದೇ ಪ್ರಯೋಜನವಿಲ್ಲ. ಆದ್ದರಿಂದ ಎಲ್ಲಾ ರೈತರು ತಡಮಾಡದೆ ಕಪ್ಪುತಲೆ ಹುಳು ಹಾವಳಿ ತಡೆಗೆ ಮುಂದಾಗಬೇಕು. ರಭಸವಾಗಿ ಮಳೆ ಸುರಿದರೆ ನಿಯಂತ್ರಣಕ್ಕೆ ಬರುತ್ತದೆ. ಆರಂಭದ ಹಂತದಲ್ಲಿದ್ದರೆ ರೋಗ ಪೀಡಿತ ಗರಿಗಳನ್ನು ಕಿತ್ತು ಸುಡಬೇಕು. ಬೇರಿನ ಮೂಲಕ ಔಷಧವನ್ನು ನೀಡಬೇಕು. ಔಷಧ ನೀಡಿದ 45 ದಿನಗಳ ಕಾಲ ಮರದ ತೆಂಗಿನ ಕಾಯಿ ಹಾಗೂ ಎಳನೀರನ್ನು ಉಪಯೋಗಿಸಬಾರದು. ಪರೋಪಕಾರಿ ಕೀಟಗಳನ್ನು ಮರಕ್ಕೆ ಬಿಡುವ ಮೂಲಕ ಹತೋಟಿಗೆ ತರಬಹುದು ಎಂದು ಮಾಹಿತಿ ನೀಡಿದರು.

ತೋಟಗಾರಿಕೆ ಹಿರಿಯ ಸಹಾಯಕ ನಿರ್ದೇಶಕಿ ಟಿ.ಎಸ್.ಭಾರತಿ ಹಾಗೂ ಯಲಚನಹಳ್ಳಿ ತೋಟಗಾರಿಕೆ ಮಹಾವಿದ್ಯಾಲಯದ ಸಸ್ಯ ರೋಗಶಾಸ್ತ್ರ ವಿಭಾಗದ ಡಾ.ಸುದರ್ಶನ್, ತೆಂಗು ಬೆಳೆ ರೋಗ ನಿಯಂತ್ರಣ ಹಾಗೂ ಸುಧಾರಿತ ಬೇಸಾಯ ಕ್ರಮದ ಬಗ್ಗೆ ತಿಳಿಸಿದರು. ಮೇಲೂರು ಗ್ರಾಪಂ ಅಧ್ಯಕ್ಷೆ ವಿಜಯ ರಾಮಕೃಷ್ಣೇಗೌಡ, ಸದಸ್ಯರಾದ ಪುಟ್ಟಸ್ವಾಮಿಗೌಡ, ಮಧುಕುಮಾರ್, ಹೇಮಲತಾ ನಾಗರಾಜು, ಪವಿತ್ರ ಪ್ರಭಾಕರ್, ಪ್ರೇಮಾ ನಾಗೇಶ್, ಭಾರತಿ ವಿಶ್ವನಾಥ್, ವೆಂಕಟೇಶ್, ತೋಟಗಾರಿಕೆ ಇಲಾಖೆ ಸಹಾಯಕ ನಿರ್ದೇಶಕ ಸಂತೋಷ್, ಮಿರ್ಲೆ ಹೋಬಳಿ ತೋಟಗಾರಿಕೆ ಅಧಿಕಾರಿ ಶ್ರವಣ ಬಿ.ವಿ.ಕುಮಾರ್, ತೋಟಗಾರಿಕೆ ಅಧಿಕಾರಿಗಳಾದ ಮಳಲಿ ಹರೀಶ್, ರಾಜೇಶ್ ಹಾಗೂ ವಿವಿಧ ಗ್ರಾಮಗಳ ರೈತರು ಇದ್ದರು.

# ಹೆಚ್.ಡಿ.ಕೋಟೆಯಲ್ಲಿ ಚಿಕ್ಕಮಾದು ಪುಣ್ಯಸ್ಮರಣೆ



ಹೆಚ್.ಡಿ.ಕೋಟೆ, ನ.3– ಹೆಚ್.ಡಿ.ಕೋಟೆ ಮತ್ತು ಸರಗೂರು ತಾಲೂಕು ಎಸ್.ಚಿಕ್ಕಮಾದು ಅಭಿಮಾನಿಗಳ ಬಳಗದ ವತಿಯಿಂದ ಶಾಸಕ ಅನಿಲ್ ಚಿಕ್ಕಮಾದು ಅವರ ಸ್ವಗೃಹದಲ್ಲಿ ದಿ.ಚಿಕ್ಕಮಾದು ಅವರ 6ನೇ ವರ್ಷದ ಪುಣ್ಯಸ್ಮರಣೆ ಕಾರ್ಯಕ್ರಮ ನಡೆಯಿತು.

ಕೆಪಿಸಿಸಿ ರಾಜ್ಯ ಪ್ರಧಾನ ಕಾರ್ಯದರ್ಶಿ ಕ್ಯಾತನಹಳ್ಳಿ ನಾಗರಾಜು ಮಾತನಾಡಿ, ಮಾಜಿ ಶಾಸಕ ಚಿಕ್ಕಮಾದು ರಾಜ್ಯದ ಹಿಂದುಳಿದ ವರ್ಗಗಳ ನಾಯಕರಾಗಿದ್ದವರು. ಧ್ವನಿ ಇಲ್ಲದವರ ಪರ ಧ್ವನಿಯಾಗಿದ್ದರು. ಅವರ ಆಡಳಿತ ಅವಧಿಯಲ್ಲಿ ತಾಲೂಕು ಅಭಿವೃದ್ಧಿ ಕಂಡಿತ್ತು. ಪರಿವಾರ ಹಾಗೂ ತಳವಾರ ಸಮುದಾಯವನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಬೇಕು ಎಂಬುದು ಅವರ ಮಹಾದಾಸೆ ಆಗಿತ್ತು. ಅವರ ಹೋರಾಟದ ಫಲವಾಗಿಯೇ ಇಂದು ಪರಿವಾರ ಹಾಗೂ ತಳವಾರ ಪರಿಶಿಷ್ಟ ಪಂಗಡಕ್ಕೆ ಸೇರಿದೆ ಎಂದರು.

ಮಾಜಿ ಸಂಸದ ಆರ್.ಧ್ರುವನಾರಾಯಣ್ ಅಭಿಮಾನಿ ಬಳಗದ ಅಧ್ಯಕ್ಷ ಎಚ್.ಸಿ.ನರಸಿಂಹಮೂರ್ತಿ, ಕಾರ್ಯದರ್ಶಿ ಸಿದ್ದನಾಯಕ, ಪುರಸಭಾ ಸದಸ್ಯ ಪುಟ್ಟಬಸವನಾಯಕ, ಕೆಪಿಸಿಸಿ ಸದಸ್ಯ ಪರಶಿವಮೂರ್ತಿ, ತಾಪಂ ಮಾಜಿ ಸದಸ್ಯ ಬಿದರಹಳ್ಳಿ ರಾಜು, ಚಿಕ್ಕಣ್ಣ ಕೋಳಗಾಲ, ರಾಜೇಂದ್ರ, ನಾಗರಾಜು ಮಟಗೆರೆ, ಉಮೇಶ್ ಕೋಟೆ, ದಾಸನಾಯಕ, ಕೃಷ್ಣಗೋವಿಂದ ರಾಜು, ದೇವಣ್ಣ ಮಾದಾಪುರ, ರವಿ, ನಾಗನಾಯಕ ಹಾಜರಿದ್ದರು.

## ಪಟ್ಟಣ ಪಂಚಾಯಿತಿ ಕಾರ್ಯಾಲಯ, ಬೋಗಾದಿ

ಮೈಸೂರು ತಾಲ್ಲೂಕು ಮತ್ತು ಜಿಲ್ಲೆ – 570026. ದೂ:0821–2331099

ಇಮೇಲ್: itstaff_ulb_bogadi@yahoo.com ವೆಬ್‌ಸೈಟ್: www.bogaditown.mrc.gov.in

ಸಂಖ್ಯೆ:ಪ.ಪಂ.ಬೋಗಾದಿ/ತಾ.ಶಾ/ಟೆಂಡರ್.ಸಿ.ಆರ್.10/2023–24 ದಿನಾಂಕ:31.10.2023

### ಟೆಂಡರ್ ಪ್ರಕಟಣೆ (ಇ–ಪೋರ್ಟಲ್ 2.0 ಮೂಲಕ)

ಬೋಗಾದಿ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ 2023–24ನೇ ಸಾಲಿನ ಪಟ್ಟಣ ಪಂಚಾಯಿತಿ ನಿಧಿಯಡಿ ಅಭಿವೃದ್ಧಿ ಕಾಮಗಾರಿಯನ್ನು ಕೈಗೊಳ್ಳಲು ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಸಿವಿಲ್ ಗುತ್ತಿಗೆದಾರರಿಂದ ಹಾಗೂ 15ನೇ ಹಣಕಾಸು ಯೋಜನೆಯಡಿ 05 ಸಂಖ್ಯೆಯ ಆಟೋ ಟಿಪ್ಪರ್ ಖರೀದಿಗಾಗಿ ಅರ್ಹ ಸರಬರಾಜುದಾರರು ಹಾಗೂ ಅಧಿಕೃತ ಮಾರಾಟಗಾರರಿಂದ ಕೆ.ಟಿ.ಪಿ.ಪಿ ಕಾಯ್ದೆ 2000ರ ಪ್ರಕಾರ ಕೆ.ಡಬ್ಲ್ಯೂ–02ರ ಹಾಗೂ ಕೆ.ಜಿ.–2ರ ನಿಯಮದಂತೆ ಇ–ಪೋರ್ಟಲ್ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. **INDENT NO.** 1) DMA/2023-24/RD/WORK_INDENT6068, ಅಂದಾಜು ಮೊತ್ತ ರೂ.40.00 ಲಕ್ಷ, ಇ.ಎಂ.ಡಿ ರೂ.80,000/–. 2) DMA/2023-24/IND0710, ಅಂದಾಜು ಮೊತ್ತ ರೂ.42.31 ಲಕ್ಷ, ಇ.ಎಂ.ಡಿ ರೂ,84,700/–ಗಳಿರುತ್ತದೆ. ಟೆಂಡರ್‌ಗಳನ್ನು **https://kppp.karnataka.gov.in** ಇ–ಪೋರ್ಟಲ್ 2.0 ಮೂಲಕ ಸಲ್ಲಿಸಬಹುದಾಗಿದೆ. ಟೆಂಡರ್ ಸಲ್ಲಿಸುವ ಕೊನೆಯ **ದಿನಾಂಕ: 15.11.2023 ಸಂಜೆ 5:00 ಗಂಟೆಗೆ** ಹಾಗೂ ಟೆಂಡರ್ ತೆರೆಯುವ **ದಿನಾಂಕ: 16.11.2023 ಸಂಜೆ 5:15 ಗಂಟೆಗೆ.** ಹೆಚ್ಚಿನ ಮಾಹಿತಿಗಾಗಿ ಕಛೇರಿ ತಾಂತ್ರಿಕ ಶಾಖೆ ಅಭಿಯಂತರರನ್ನು ಸಂಪರ್ಕಿಸಬಹುದಾಗಿದೆ. ಟೆಂಡರ್‌ನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಪಟ್ಟಣ ಪಂಚಾಯಿತಿ ಕಾಯ್ದಿರಿಸಿಕೊಂಡಿದೆ.

ಸಹಿ/– ಮುಖ್ಯಾಧಿಕಾರಿ
ಪಟ್ಟಣ ಪಂಚಾಯಿತಿ, ಬೋಗಾದಿ

DIPR/MYS/KAVITA/591/23-24



## ಮೈಸೂರು ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ

ಮೆಗಾ ಡೈರಿ ಸಂಕೀರ್ಣ, ಬನ್ನೂರು ರಸ್ತೆ, ಆಲನಹಳ್ಳಿ ಅಂಚೆ, ಮೈಸೂರು – 570028.
ದೂರವಾಣಿ ಸಂಖ್ಯೆ:0821–2474475, ಫ್ಯಾಕ್ಸ್ ನಂ.0821–2474476,
ಇ–ಮೇಲ್ : purmymul@gmail.com

### ಟೆಂಡರ್ ಪ್ರಕಟಣೆ – (ಇ–ಟೆಂಡರ್ ಮುಖಾಂತರ ಮಾತ್ರ)

ಮೈಸೂರು ಜಿಲ್ಲಾ ಸಹಕಾರಿ ಹಾಲು ಒಕ್ಕೂಟಕ್ಕೆ ಅವಶ್ಯವಿರುವ ಈ ಕೆಳಕಂಡ ಸೇವೆ / ಸಾಮಾಗ್ರಿಗಳನ್ನು ಖರೀದಿಸಲು ಅರ್ಹ ಟೆಂಡರ್‌ದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಮುಖೇನ ಟೆಂಡರನ್ನು ಆಹ್ವಾನಿಸಲಾಗಿದೆ. ಟೆಂಡರ್ ದಾಸ್ತಾವೇಜುಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪ್ಲಾಟ್ ಫಾರಂ ಅಡಿ **https://kppp.karnataka.gov.in** ಅಪ್‌ಲೋಡ್ ಮಾಡಬಹುದಾಗಿರುತ್ತದೆ.

| ಕ್ರ.ಸಂ | ಟೆಂಡರ್ ಪ್ರಕಟಣೆ ಸಂಖ್ಯೆ | ಸೇವೆಯ ವಿವರ | ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ |
|---|---|---|---|
| 01 | KMF/2023-24/IND0403 | ಒಕ್ಕೂಟಕ್ಕೆ ಅಗತ್ಯವಿರುವ ಸಕ್ಕರೆಯನ್ನು ತ್ರೈಮಾಸಿಕ ದರ ಗುತ್ತಿಗೆ ಆಧಾರದಲ್ಲಿ ಮತ್ತು ಕ್ಯಾಲೆಂಡರ್, ಡೈರಿಗಳನ್ನು ಖರೀದಿಸುವ ಬಗ್ಗೆ. | 10.11.2023 ಸಂಜೆ 4:00 ಗಂಟೆಯವರೆಗೆ. |
| 02 | KMF/2023-24/SE0939 | ಒಕ್ಕೂಟದ ವ್ಯಾಪ್ತಿಯಲ್ಲಿನ ಹಾಲು ಉತ್ಪಾದಕರ ಅಂದಾಜು 30000 ಹೈನುರಾಸುಗಳಿಗೆ ಗುಂಪು ವಿಮಾ ಯೋಜನೆಯಡಿ (ಪಿ.ಟಿ.ಡಿ. ಹೊರತುಪಡಿಸಿ) 3 ವರ್ಷದ ಅವಧಿಗೆ ವಿಮೆ ಮಾಡುವ ಬಗ್ಗೆ. | 18.11.2023 ಸಂಜೆ 5:00 ಗಂಟೆಯವರೆಗೆ. |

ಹೆಚ್ಚಿನ ಮಾಹಿತಿಗಾಗಿ ಖರೀದಿ ವಿಭಾಗದ ವ್ಯವಸ್ಥಾಪಕರನ್ನು, (6366430803) ಸಂಪರ್ಕಿಸಬಹುದಾಗಿದೆ.

ಸಹಿ/–, ವ್ಯವಸ್ಥಾಪಕ ನಿರ್ದೇಶಕರು,
ಮೈಸೂರು ಜಿಲ್ಲಾ ಸಹಕಾರಿ ಹಾಲು ಒಕ್ಕೂಟ ನಿ.,

## ನಗರಸಭಾ ಕಾರ್ಯಾಲಯ, ಹುಣಸೂರು, ಮೈಸೂರು ಜಿಲ್ಲೆ–571105

E-mail: itstaff_ulb_hunsur@yahoo.co.in Ph : 08222-252048

ಸಂ:ಹುನಕಾ:/24.10,7.25 ಹಾಗೂ 5%/ಪಿಆರ್–03/2023–24 ದಿನಾಂಕ: 30/10/2023

### ಪತ್ರಿಕಾ ಪ್ರಕಟಣೆ ( 2ನೇ ಬಾರಿ)

ಹುಣಸೂರು ನಗರಸಭಾ ವ್ಯಾಪ್ತಿಗೆ ಒಳಪಡುವ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ಹಾಗೂ ಇತರೆ ಹಿಂದುಳಿದ ವರ್ಗದ ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ 2023–24 ನೇ ಸಾಲಿನ ಎಸ್.ಎಫ್.ಸಿ ಮತ್ತು ನಗರಸಭಾ ನಿಧಿಯಡಿಯಲ್ಲಿ ಶೇ.24.10, 7.25 ಮತ್ತು 5% ರಲ್ಲಿ ಈ ಕೆಳಕಂಡಂತೆ ನಮೂದಿಸಲಾಗಿರುವ ವಿವಿಧ ಹಂತಗಳಲ್ಲಿ ವ್ಯಾಸಂಗ ಮಾಡುತ್ತಿರುವ ಅವರ ಕುಟುಂಬದ ವಾರ್ಷಿಕ ವರಮಾನ ರೂ. 2.50=00 ಲಕ್ಷ (ಎರಡೂವರೆ ಲಕ್ಷದ ಒಳಗಿರಬೇಕು). (ನಗರಸಭೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಖಾಯಂ ಹಾಗೂ ಗುತ್ತಿಗೆ / ನೇರ ಪಾವತಿ ಪೌರಕಾರ್ಮಿಕರ ಮಕ್ಕಳಿಗೆ ಅನ್ವಯಿಸುವುದಿಲ್ಲ). ಪಟ್ಟಣ ವ್ಯಾಪ್ತಿಯಲ್ಲಿರುವ ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ ಪ್ರೋತ್ಸಾಹ ಧನಸಹಾಯ ನೀಡಲು ಅರ್ಜಿಗಳನ್ನು 2ನೇ ಬಾರಿಗೆಆಹ್ವಾನಿಸಲಾಗಿದೆ (2023–24 ನೇ ಸಾಲಿನ ಅವಧಿಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಮಾತ್ರ).ಮಾನ್ಯ ಜಿಲ್ಲಾಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು ರವರ ಅಧಿಕೃತ ಜ್ಞಾಪನ ಸಂಖ್ಯೆ :ಮುನಿಸಿ(04)/ಎಸ್.ಎಫ್.ಸಿ ಮು.ನಿ/ಹು.ನ.ಸ/ಕ್ರಿಯೋ/ಸಿ.ಆರ್–03/2023–24 ದಿನಾಂಕ :–20/07/2023 ರ ರೀತ್ಯಾ.

| ಕ್ರ.ಸಂ | ಕಾರ್ಯಕ್ರಮದ ವಿವರ | ಕಾಯ್ದಿರಿಸಲಾದ ಮೊತ್ತ (ಲಕ್ಷಗಳಲ್ಲಿ). | | |
|---|---|---|---|---|
| | | 24.10 | 7.25 | 5% |
| 1 | ಪ.ಜಾ/ಪ.ಪಂ/ ಇತರೆ ಹಿಂದುಳಿದ ವರ್ಗದ ವಿವಿಧ ಹಂತದಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ವಿಶೇಷ ನೆರವು ನೀಡುವುದು. | 7.89 | 3.80 | – |
| 2 | ಪ.ಜಾ/ಪ.ಪಂ/ ಇತರೆ ಹಿಂದುಳಿದ ವರ್ಗದ ರಾಜ್ಯ/ರಾಷ್ಟ್ರೀಯ ಮಟ್ಟದ ಕ್ರೀಡೆ ಕಲೆ, ಸಾಂಸ್ಕೃತಿಕ ಹಾಗೂ ಇತರ ವ್ಯಾಸಂಗೇತರ ಚಟುವಟಿಕೆಗಳಲ್ಲಿ ಭಾಗವಹಿಸುವ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನ ನೀಡುವುದು. | 2.95 | 0.51 | – |
| 3 | ಹುಣಸೂರು ನಗರಸಭೆ ವ್ಯಾಪ್ತಿಯಲ್ಲಿ ವಾಸಿಸುವ ವಿಕಲಚೇತನರಿಗೆ ಶಸ್ತ್ರ ಚಿಕಿತ್ಸೆ ಶಿಬಿರಗಳನ್ನು ನಡೆಸುವುದು ಮತ್ತು ಅವಶ್ಯಕ ಕೃತಕ ಅಂಗ ಜೋಡಣೆ ಸಲಕರಣೆಗಳನ್ನು ಒದಗಿಸುವುದು. | – | – | 3.93 |
| 4 | ಹುಣಸೂರು ನಗರಸಭೆ ವ್ಯಾಪ್ತಿಯಲ್ಲಿ ವಾಸಿಸುವ ರಾಜ್ಯ ಮತ್ತು ಅಂತರಾಷ್ಟ್ರೀಯ ಕ್ರೀಡೆಗಳಲ್ಲಿ ಭಾಗವಹಿಸುವ ವಿಕಲಚೇತನರಿಗೆ ಆರ್ಥಿಕ ಸಹಾಯಧನ ನೀಡುವುದು. | – | – | 1.00 |
| 5 | ಹುಣಸೂರು ನಗರಸಭೆ ವ್ಯಾಪ್ತಿಯಲಿ ವಿಕಲಚೇತನರಿಗೆ ಜೀವ ವಿಮಾ ಪಾಲಿಸಿ ಮಾಡಿಸುವುದು. | – | – | 2.93 |

**ಷರತ್ತು** :–

1. ಎಸ್.ಎಸ್.ಎಲ್.ಸಿ/ಪಿಯುಸಿ/ಐ.ಟಿ.ಐ/ಪ್ಯಾರಮೆಡಿಕಲ್–ಕೋರ್ಸ್/ಡಿಪ್ಲೋಮೋ/ಡಿ.ಎಡ್/ಸಿಪಿಇಡಿ/ತಾಂತ್ರಿಕ ತರಗತಿಗಳಲ್ಲಿ ಓದಿತ್ತಿರುವವರಿಗೆ/ಪದವಿ/ಸ್ನಾತಕೋತ್ತರ/ಬಿ.ಎಡ್/ಬಿಪಿಎಡ್/ಎಂ.ಎಡ್/ಎಂಪಿಇಡಿ/ಬಿಇ/ಎಂ.ಬಿ.ಬಿ.ಎಸ್/ಬಿ.ಡಿ.ಎಸ್/ಎಂಟೆಕ್/ಎಂಇ/ಎಂಡಿ/ಎಂಎಸ್/ಪಿ.ಹೆಚ್.ಡಿ/ಪೋಸ್ಟ್ ಡಾಕ್ಟರೇಟ್ ಇನ್ನಾವುದೇ ಇತರೆ ಸ್ನಾತಕೋತ್ತರ ತರಗತಿಗಳಲ್ಲಿ ಓದುತ್ತಿರುವವರಿಗೆ.

2. ಅನುದಾನಿತ/ಖಾಸಗಿ ಶಾಲಾ ಕಾಲೇಜು ಮತ್ತು ವೃತ್ತಿಪರ ಸಂಸ್ಥೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಸಮಾಜ ಕಲ್ಯಾಣ ಇಲಾಖೆ/ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಅಥವಾ ನಗರ ಸ್ಥಳೀಯ ಸಂಸ್ಥೆಗಳಿಂದ ಇವೆರಡರಲ್ಲಿ ಯಾವುದಾದರೂ ಒಂದು ಇಲಾಖೆಯಿಂದ ಮಾತ್ರ ಶಿಷ್ಯವೇತನ ಪಡೆಯಲು ಮಾತ್ರ ಅವಕಾಶವಿರುತ್ತದೆ.

3. ಆರ್.ಟಿ.ಐ ಯೋಜನೆ ಕಾಯ್ದೆಯಡಿ ಖಾಸಗಿ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಸಮಾಜ ಕಲ್ಯಾಣ ಇಲಾಖೆ/ ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಿಂದ ಶಿಷ್ಯವೇತನ ನೀಡಿದ್ದರೂ ಸಹ ಸರ್ಕಾರಿ ಶಾಲೆಗಳು/ಕಾಲೇಜುಗಳು, ಸರ್ಕಾರದ ವೃತ್ತಿಪರ ಸಂಸ್ಥೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ಅಭ್ಯರ್ಥಿಗಳಿಗೆ ಪ್ರೋತ್ಸಾಹಧನ ಎಂದು ಪರಿಗಣಿಸಲಾಗುವುದು.

ಅರ್ಜಿ ನಮೂನೆಯು ನಗರಸಭೆಯ ಡೇ– ನಲ್ಮ್ ಶಾಖೆಯಲ್ಲಿ ದೊರೆಯುತ್ತಿದ್ದು ದಿನಾಂಕ : 30/11/2023 ರ ಒಳಗೆ ಅಗತ್ಯದಾಖಲಾತಿಗಳೊಂದಿಗೆ ಕಛೇರಿಗೆ ಸಲ್ಲಿಸಲು ಕೋರಿದೆ. ನಿಗದಿತ ಅರ್ಜಿಯೊಂದಿಗೆ ಜಾತಿ ಧೃಡಿಕರಣ ಪತ್ರ, ವರಮಾನ ಪತ್ರ,ಆಧಾರ್ ಕಾರ್ಡ್/ಪಡಿತರ ಚೀಟಿ/ಶಾಲಾ ವ್ಯಾಸಂಗ ಧೃಡಿಕರಣ ಪತ್ರ/ಅಂಗವಿಕಲರ ಗುರುತಿನ ಚೀಟಿ/ಇತ್ತೀಚಿನ ಎರಡು ಭಾವಚಿತ್ರ(ಪಾಸ್ ಪೋರ್ಟ್ ಸೈಜ್)/ಬ್ಯಾಂಕ್ ಪಾಸ್ ಪುಸ್ತಕ/ಹೆಚ್ಚಿನ ಮಾಹಿತಿಗಾಗಿ ಕಛೇರಿಯ ಡೇ–ನಲ್ಮ್ ಶಾಖೆಯನ್ನು ಸಂಪರ್ಕಿಸಲು ಪ್ರಕಟಣೆಯಲ್ಲಿ ತಿಳಿಸಿದೆ.

**ಸಹಿ/– ಮಾನ್ಯ ಆಡಳಿತಾಧಿಕಾರಿಗಳು ಹಾಗೂ ಜಿಲ್ಲಾಧಿಕಾರಿಗಳು**
**ನಗರಸಭೆ, ಹುಣಸೂರು**

**ಸಹಿ/– ಪೌರಾಯುಕ್ತರು**
**ನಗರಸಭೆ, ಹುಣಸೂರು**